

ಭಾರತದ ಹಬ್ಬಗಳು




ಅನುವಾದ: ಎ. ಆರ್. ರಂಗರಾವ್

ನೆಹರೂ ಬಾಲ ಪುಸ್ತಕಾಲಯ

ಭಾರತದ ಹಬ್ಬಗಳು

ಅನುವಾದ:
ಎ.ಆರ್. ರಂಗರಾವ್



nbt.india
एकः सूते सकलम्
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ಕೃತಜ್ಞತೆಗಳು:
ಐ.ಟಿ.ಡಿ.ಸಿ., ಸಮಾಚಾರ ಮತ್ತು ಪ್ರಸಾರ ಖಾತೆಯ ಛಾಯಾಚಿತ್ರ ವಿಭಾಗ,
ಅಸ್ಸಾಂ ರಾಜ್ಯ ಸಮಾಚಾರ ಕೇಂದ್ರ, ದೆಹಲಿ,
ಅಸ್ಸಾಂ ಸಮಾಚಾರ ಕೇಂದ್ರ, ಶಿಲಾಂಗ್,
ಪ್ರಕಾಶನ ವಿಭಾಗ

ISBN 978-81-237-0824-9

ಮೊದಲ ಮುದ್ರಣ : 1991
ಆರನೆಯ ಮರುಮುದ್ರಣ : 2021 (ಶಕ 1943)

Festivals of India (*English*)
Bharathada Habbagalu (*Kannada*)

₹ 100.00

ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
ನೆಹರೂ ಭವನ, 5, ಇನ್‌ಸ್ಟಿಟ್ಯೂಶನಲ್ ಏರಿಯಾ, ಫೇಜ್–II
ವಸಂತ್ ಕುಂಜ್, ಹೊಸ ದೆಹಲಿ–110070 ಇವರಿಂದ ಪ್ರಕಟಿತ.
website : www.nbtindia.gov.in

ಪರಿವಿಡಿ



ಬುದ್ಧ ಪೂರ್ಣಿಮಾ

ನಾವು ಹಬ್ಬ ಹರಿದಿನಗಳನ್ನು ಆಚರಿಸುವುದಕ್ಕೆ ಅನೇಕ ಕಾರಣಗಳಿವೆ. ಅಂತಹ ದಿನಗಳಲ್ಲಿ ಎಲ್ಲ ಪಂಗಡಗಳ ಮತ್ತು ವರ್ಗಗಳ ಜನರು ಒಂದೆಡೆ ಸೇರುತ್ತಾರೆ. ನಕ್ಕು ನಲಿದು ಸಂತೋಷದಿಂದ ಕಾಲ ಕಳೆಯುತ್ತಾರೆ. ಇದರಿಂದ ಜನರಲ್ಲಿ ಸ್ನೇಹ ಮತ್ತು ಐಕ್ಯಮತ್ಯದ ಭಾವನೆ ಬೆಳೆಯುತ್ತದೆ. ಹಬ್ಬ ನಮ್ಮ ಜೀವನವನ್ನು ಉಲ್ಲಾಸಗೊಳಿಸುತ್ತದೆ. ಇಲ್ಲದಿದ್ದರೆ ಜೀವನ ನೀರಸವಾಗಬಹುದು. ಪ್ರತಿ ವರ್ಷ ಹಬ್ಬವನ್ನಾಚರಿಸುವುದರಿಂದ ಆಯಾ ಹಬ್ಬಕ್ಕೆ ಸಂಬಂಧಿಸಿದ ವಿಶೇಷ ಘಟನೆ ಸದಾ ನಮ್ಮ ನೆನಪಿನಲ್ಲಿರುತ್ತದೆ. ಇಲ್ಲದಿದ್ದರೆ ವರ್ಷಗಳು ಉರುಳಿದಂತೆ, ಅದನ್ನು ನಾವು ಮರೆಯುವ ಸಂಭವವುಂಟು.

ಬೌದ್ಧರಿಗೆ ಬುದ್ಧ ಪೂರ್ಣಿಮಾ ಒಂದು ಪವಿತ್ರ ದಿನ. ಇದು ಅವರಿಗೆ ಅತಿ ದೊಡ್ಡ ಹಬ್ಬ. ಈ ಹಬ್ಬವನ್ನು ಅವರು ಸಂಭ್ರಮದಿಂದ ಆಚರಿಸುವರು. ಒಂದೊಂದು ಹಬ್ಬದಲ್ಲೂ ಜನರು ಆಚರಿಸುವ ಧಾರ್ಮಿಕ ವಿಧಿಗಳು, ಆ ಜನರ ಜೀವನ, ನಂಬಿಕೆ, ಪದ್ಧತಿ ಮತ್ತು ಸಂಸ್ಕೃತಿಗಳನ್ನು ಪ್ರತಿಬಿಂಬಿಸುತ್ತವೆ.

ಬುದ್ಧ ಪೂರ್ಣಿಮಾ ಹಬ್ಬವನ್ನು ಬೌದ್ಧರು ಮಾತ್ರ ಏಕೆ ಆಚರಿಸಬೇಕು? ಎಂದು ಕೇಳಬಹುದು. ಇದು ಬೌದ್ಧಮತವನ್ನು ಸ್ಥಾಪಿಸಿದ ಭಗವಾನ್ ಬುದ್ಧನಿಗೆ ಸಂಬಂಧಿಸಿದ ಹಬ್ಬ. ಆದ್ದರಿಂದ ಬೌದ್ಧರು ಮಾತ್ರ ಅದನ್ನು ಆಚರಿಸುವರು. ಬೌದ್ಧರು ಪ್ರತಿ ಹುಣ್ಣಿಮೆಯನ್ನು ಪವಿತ್ರವೆಂದು ಪರಿಗಣಿಸುವರು. ಆದರೆ ವೈಶಾಖ ಮಾಸದ ಹುಣ್ಣಿಮೆ (ಏಪ್ರಿಲ್-ಮೇ) ಅವರಿಗೆ ಅತಿ ಶ್ರೇಷ್ಠ. ಏಕೆಂದರೆ, ಬುದ್ಧ ಜನಿಸಿದ್ದು, ದಿವ್ಯಜ್ಞಾನ ಪಡೆದಿದ್ದು ಮತ್ತು ನಿರ್ವಾಣ ಹೊಂದಿದ್ದು ಇದೇ ದಿನ. ಈ ಮೂರು ಘಟನೆಗಳೂ ವೈಶಾಖ ಮಾಸದ ಹುಣ್ಣಿಮೆಯಂದೇ ಸಂಭವಿಸಿದವು. ಆದ್ದರಿಂದಲೇ ಈ ದಿನಕ್ಕೆ ಅಷ್ಟೊಂದು ಮಹತ್ವ.

ಭಗವಾನ್ ಬುದ್ಧನ ಜೀವನದ ಕೆಲವು ವಿಷಯಗಳನ್ನು ನಾವು ತಿಳಿಯಬೇಕು. ಬುದ್ಧ ಕ್ರಿ.ಪೂ. 544ರಲ್ಲಿ ಅಂದರೆ ಎರಡುಸಾವಿರದ ಐನೂರು ವರ್ಷಗಳಿಗೂ ಹಿಂದೆ ಜನಿಸಿದ. ಶುದ್ಧೋದನ ಎಂಬ ರಾಜನಿದ್ದ. ಅವನು ಶಾಕ್ಯ ವಂಶದ ರಾಜರಲ್ಲಿ ಬಹಳ ಪ್ರಸಿದ್ಧಿ ಪಡೆದವನು. ಈ ರಾಜನೂ ಸಹ ಶ್ರೀರಾಮನಂತೆ, ಸೂರ್ಯವಂಶದಲ್ಲಿ ಜನಿಸಿದವನು.

ರಾಣಿ ಮಹಾಮಾಯ, ಬುದ್ಧನ ತಾಯಿ. ವೈಶಾಖ ಮಾಸದ ಒಂದು ಹುಣ್ಣಿಮೆಯ ದಿನ, ರಾಣಿ, ರಾಜಧಾನಿ ಕಪಿಲವಸ್ತುವಿನಿಂದ, ದೇವದಾಹದಲ್ಲಿದ್ದ ತನ್ನ ತವರು ಮನೆಗೆ ಪ್ರಯಾಣ ಮಾಡುತ್ತಿದ್ದಳು. ಮಾರ್ಗದಲ್ಲಿ ಲುಂಬಿಣಿ ಎಂಬ ಸ್ಥಳ ಬಂತು. ರಾಣಿ ತನ್ನ ಪ್ರಯಾಣವನ್ನು ಅಲ್ಲಿಗೇ ನಿಲ್ಲಿಸಿದಳು. ಅದೇ ದಿನ, ಎರಡು ಸಾಲ ವೃಕ್ಷಗಳ ಕೆಳಗೆ ಬುದ್ಧನಿಗೆ ಜನ್ಮವಿತ್ತಳು. ಅನಂತರ ರಾಣಿ, ತನ್ನ ಮಗುವಿನೊಂದಿಗೆ ಕಪಿಲವಸ್ತುವಿಗೆ ಹಿಂದಿರುಗಿದಳು. ಈ ಮಗುವಿನಿಂದ ಜಗತ್ತು ಉದ್ಧಾರವಾಗುವುದೆಂದು ಅರಮನೆಯ ಜ್ಯೋತಿಷಿಯಾಗಿದ್ದ ಅಸಿತ ಎಂಬ ಸನ್ಯಾಸಿ ಭವಿಷ್ಯ ನುಡಿದ.

ಮಗುವಿಗೆ ಸಿದ್ಧಾರ್ಥನೆಂದು ಹೆಸರಿಡಲಾಯಿತು. ಆದರೆ, ಮುಂದೆ ತನ್ನ ಕುಲದ ಹೆಸರಿನಿಂದ, ಗೌತಮ ಬುದ್ಧನೆಂದು ಅವನು ಪ್ರಸಿದ್ಧನಾದ. ರಾಜಕುಮಾರನ ಜನನದಿಂದ ಜನರಲ್ಲಿ ಉಂಟಾಗಿದ್ದ ಆನಂದ ಹಠಾತ್ತನೆ ಮಾಯವಾಯಿತು. ಮಗು ಹುಟ್ಟಿದ ಒಂದು ವಾರದಲ್ಲಿ ತಾಯಿ ಮಹಾಮಾಯ ಇದ್ದಕ್ಕಿದ್ದಂತೆ ತೀರಿಕೊಂಡಳು. ಬಳಿಕ, ಗೌತಮ ಮಲತಾಯಿ ಮಡಿಲಲ್ಲಿ ಬೆಳೆದ.

ಗೌತಮ, ಬೇರೆ ಬೇರೆ ಹುಡುಗರ ಜೊತೆ ಆಟಕ್ಕೆ ಸೇರುತ್ತಿರಲಿಲ್ಲ. ಒಬ್ಬನೇ ಕುಳಿತು, ಗಹನವಾದ ವಿಚಾರಗಳ ಚಿಂತನೆಯಲ್ಲಿ ಮೈಮರೆಯುತ್ತಿದ್ದ. ಪ್ರಾಪಂಚಿಕ ವಿಷಯಗಳಲ್ಲಿ ಗೌತಮನಿಗೆ ಆಸಕ್ತಿ ಹುಟ್ಟಿಸಲು, ರಾಜ, ಏನೇನೋ ಪ್ರಯತ್ನ ಮಾಡಿದ. ಆದರೆ ಪ್ರಯೋಜನವಾಗಲಿಲ್ಲ. ರಾಜಕುಮಾರ ಗೌತಮ ಪ್ರಾಪ್ತ ವಯಸ್ಸಿಗೆ ಬಂದ. ಯಶೋಧರ

ಎಂಬ ರೂಪವತಿ ಕನ್ಯೆಯನ್ನು ತಂದು, ರಾಜ, ಮಗನಿಗೆ ಮದುವೆ ಮಾಡಿದ. ಜೀವನದ ಸುಖ-ಸಂತೋಷಗಳನ್ನು ಅನುಭವಿಸುವುದಕ್ಕಾಗಿ ಗೌತಮನಿಗೆ ರಾಜ ಎಲ್ಲ ಅನುಕೂಲತೆಗಳನ್ನೂ ಮಾಡಿಕೊಟ್ಟ. ಆದರೆ ಒಂದೂ ಫಲಿಸಲಿಲ್ಲ. ಸತ್ಯಶೋಧನೆಯಲ್ಲಿ ತಲ್ಲೀನನಾಗಿದ್ದ ಮಗನ ಮನಸ್ಸನ್ನು ಬೇರೆಡೆಗೆ ತಿರುಗಿಸಲು ರಾಜನಿಗೆ ಸಾಧ್ಯವಾಗಲಿಲ್ಲ.

ಕ್ಷತ್ರಿಯ ವಂಶದಲ್ಲಿ ಹುಟ್ಟಿದ ಗೌತಮನಿಗೆ ಕ್ಷತ್ರಿಯ ಸಹಜವಾದ ಗುಣಗಳಿರಲಿಲ್ಲ. ಬೇಟೆಯಾಡುವುದರಲ್ಲಿ ಅವನಿಗೆ ಆಸಕ್ತಿ ಇರಲಿಲ್ಲ. ಪಶು-ಪಕ್ಷಿಗಳನ್ನು ಕೊಲ್ಲಲು ಅವನಿಗೆ ಮನಸ್ಸು ಬರುತ್ತಿರಲಿಲ್ಲ. ಅವುಗಳಿಗೆ ಅವನು ಕರುಣೆ ತೋರುತ್ತಿದ್ದ. ಒಮ್ಮೆ ಅವನ ಸೋದರ ದೇವದತ್ತ, ಹಾರುತ್ತಿದ್ದ ಹಂಸವೊಂದಕ್ಕೆ ಬಾಣ ಬಿಟ್ಟ. ಬಾಣದಿಂದ ಗಾಯಗೊಂಡ ಪಕ್ಷಿ ಗೌತಮನ ಬಳಿ ಬಂದು ಬಿತ್ತು. ಗೌತಮ ಆ ಪಕ್ಷಿಯನ್ನು ಎತ್ತಿಕೊಂಡು ಅದರ ಮೈ ಸವರಿದ.

ಅದರ ದೇಹದಿಂದ ಬಾಣವನ್ನು ತೆಗೆದ. ಗಾಯಕ್ಕೆ ಬಟ್ಟೆ ಕಟ್ಟಿ ಶುಶ್ರೂಷೆ ಮಾಡಿದ. ಅಷ್ಟರಲ್ಲಿ ದೇವದತ್ತ ಅಲ್ಲಿಗೆ ಬಂದು ತಾನು ಹೊಡೆದ ಹಂಸ ತನಗೆ ಬೇಕೆಂದು ಹಠ ಹಿಡಿದ. "ಪಕ್ಷಿ, ಅದರ ಪ್ರಾಣ ಉಳಿಸಿದವನಿಗೆ ಸಲ್ಲಬೇಕು, ಅದನ್ನು ಕೊಲ್ಲಲು ಬಂದವನಿಗಲ್ಲ" ಎಂದು ಗೌತಮ ನುಡಿದ.

ರಾಜಕುಮಾರರ ಜಗಳ ರಾಜನವರೆಗೂ ಹೋಯಿತು. ರಾಜ ಒಂದು ಉಪಾಯ ಹೂಡಿದ. ಹಂಸವನ್ನು ಆಸ್ಥಾನಕ್ಕೆ ತರಿಸಿ, ಅದನ್ನು ಮಧ್ಯದಲ್ಲಿ ಒಂದು ಪೀಠದ ಮೇಲಿರಿಸುವಂತೆ ಹೇಳಿದ. ಹಂಸ ಯಾರ ಬಳಿ ಹೋಗುವುದೋ ಅವರಿಗೆ ಅದು ಸಲ್ಲತಕ್ಕದ್ದೆಂದು ರಾಜ ಹೇಳಿದ. ಮೊದಲು ದೇವದತ್ತ ಹಂಸವನ್ನು ಕರೆದ. ಅವನ ಧ್ವನಿ ಕೇಳುತ್ತಿದ್ದಂತೆ ಪಕ್ಷಿ ನಡುಗಲಾರಂಭಿಸಿತು. ಅನಂತರ ಗೌತಮ ಅದನ್ನು ಕರೆದ. ಹಂಸ ನಿಧಾನವಾಗಿ ನಡೆದು ಬಂದು ಗೌತಮನ ತೊಡೆಯೇರಿತು. ತನ್ನನ್ನು ಕಾಪಾಡಿದ ಗೌತಮನೇ ಅದಕ್ಕೆ ಬೇಕಾಯಿತು. ಆದ್ದರಿಂದ ಹಂಸ ಅವನಿಗೇ ಸಲ್ಲಬೇಕು ಎಂದು ದೊರೆ ತೀರ್ಮಾನಿಸಿದ.

ಜಗತ್ತಿನಲ್ಲಿ ದುಃಖ ತುಂಬಿರುವುದನ್ನು ಕಂಡು ಗೌತಮನ ಮನಸ್ಸು ತುಂಬ ನೊಂದಿತು. ಒಂದು ದಿನ, ವೃದ್ಧನೊಬ್ಬ ಕಷ್ಟಪಟ್ಟುಕೊಂಡು ನಡೆಯುತ್ತಿದ್ದ ದೃಶ್ಯವನ್ನು ಅವನು ನೋಡಿದ. ಮತ್ತೊಂದು ದಿನ ಪ್ರಜ್ಞೆ ಇಲ್ಲದೇ ಬಿದ್ದಿದ್ದ ಒಬ್ಬ ರೋಗಿಯನ್ನು ಕಂಡ. ಇನ್ನೊಂದು ದಿನ, ದಹನ ಕ್ರಿಯೆಗಾಗಿ ಸ್ಮಶಾನಕ್ಕೆ ಒಯ್ಯುತ್ತಿದ್ದ ಒಂದು ಶವವನ್ನು ನೋಡಿದ. ಇವೆಲ್ಲವನ್ನು ಕಂಡ ಗೌತಮನನ್ನು, "ನೋವು ಎಂದರೇನು ? ಜಗತ್ತಿನಲ್ಲಿ

ಏಕೆ ನೋವು, ನರಳಾಟ ಮತ್ತು ದುಃಖ ತುಂಬಿಕೊಂಡಿವೆ? ಇವುಗಳಿಂದ ತಪ್ಪಿಸಿಕೊಳ್ಳುವುದು ಹೇಗೆ?" ಎನ್ನುವ ಪ್ರಶ್ನೆಗಳು ಪದೇ ಪದೇ ಕಾಡತೊಡಗಿದವು. ಒಮ್ಮೆ ಗೌತಮ ಶಾಂತ ಮುಖ ಭಾವದ ಒಬ್ಬ ಸನ್ಯಾಸಿಯನ್ನು ಕಂಡ. ವೃದ್ಧಾಪ್ಯ, ರೋಗ-ರುಜಿನ ಮತ್ತು ಸಾವು ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಿರುವವನ ಹಾಗೆ ಆ ಸನ್ಯಾಸಿಯು ಗೌತಮನಿಗೆ ಕಾಣಿಸಿದ. ಪ್ರಾಪಂಚಿಕ ಸುಖ-ಸಂತೋಷಗಳನ್ನು ತ್ಯಜಿಸಿ, ತಾನೂ ಸನ್ಯಾಸಿಯಾಗಲು ಗೌತಮ ನಿರ್ಧರಿಸಿದ.



ಅಷ್ಟು ಹೊತ್ತಿಗೆ ಗೌತಮನಿಗೆ ರಾಹುಲ ಎಂಬ ಮಗ ಹುಟ್ಟಿದ್ದ. ಪುಟ್ಟ ಮಗನ ಮೇಲಿನ ಪ್ರೀತಿ ಮತ್ತು ಮುದ್ದು ಮಡದಿಯ ಮೇಲಿನ ವ್ಯಾಮೋಹ ಅವನಿಗೆ ಸತ್ಯ ಶೋಧನೆಗಿಂತ ಹೆಚ್ಚೆನಿಸಲಿಲ್ಲ. ಒಂದು ರಾತ್ರಿ ಯಶೋಧರ ಮತ್ತು ರಾಹುಲ

ನಿದ್ರಿಸುತ್ತಿದ್ದರು. ಆಗ ಗೌತಮ ವೈಭೋಗವನ್ನು ತೊರೆದು ಅರಮನೆಯಿಂದ ಹೊರ ನಡೆದ. ರಾಜೋಚಿತ ಉಡುಪುಗಳನ್ನು ಕಳಚಿ ಹಾಕಿದ. ಉದ್ದನೆಯ ಗುಂಗುರು ಕೂದಲನ್ನು ತೆಗೆಸಿ ಹಾಕಿದ. ಜ್ಞಾನದ ಬೆಳಕನ್ನು ಹುಡುಕಿಕೊಂಡು ಕಗ್ಗತ್ತಲ ರಾತ್ರಿಯಲ್ಲಿ ಹೊರಟ. ಒಂದು ಪುಣ್ಯ ಕ್ಷೇತ್ರದಿಂದ ಇನ್ನೊಂದು ಪುಣ್ಯ ಕ್ಷೇತ್ರಕ್ಕೆ, ಆಶ್ರಮದಿಂದ ಆಶ್ರಮಕ್ಕೆ ಅಲೆದಾಡಿದ. ಆದರೆ ಅವನನ್ನು ಕಾಡುತ್ತಿದ್ದ ಪ್ರಶ್ನೆಗಳಿಗೆ ಯಾರಿಂದಲೂ ಉತ್ತರ ಸಿಗಲಿಲ್ಲ. ಕಡೆಗೆ ಗಯಾದ ಹತ್ತಿರ ನಿರಂಜನ ನದಿಯ ಅಂಚಿನಲ್ಲಿದ್ದ ಒಂದು ಅರಣ್ಯಕ್ಕೆ ಬಂದ. ಗೌತಮ ಆರು ವರ್ಷಗಳ 'ದೀರ್ಘ ಕಾಲ ಆ ಅರಣ್ಯದಲ್ಲಿದ್ದ. ಆಹಾರ ಮತ್ತು ನಿದ್ರೆಯನ್ನು ತೊರೆದಿದ್ದ. ದೇಹ ಕೃಶವಾಯಿತು. ಕಡೆಗೆ, ದೇಹದಂಡನೆಯಿಂದ ದಿವ್ಯ ಜ್ಞಾನ ಸಾಧಿಸಲು ಸಾಧ್ಯವಿಲ್ಲವೆಂಬ ಅರಿವು ಅವನಲ್ಲುಂಟಾಯಿತು. ಈ ಅರಿವು ಬಂದ ದಿನ ಸುಜಾತ ಎಂಬ ಹೆಂಗಸು ಗೌತಮನಿಗೆ ಒಂದು ಬಟ್ಟಲು ಪಾಯಸವನ್ನು ಮಾಡಿಕೊಟ್ಟಳು. ಹುಲ್ಲು ಕೊಯ್ಯುವವನೊಬ್ಬ ಹಾಸಿ ಮಲಗಲು ಒಂದು ಕಂತೆ ಹುಲ್ಲು ಕೊಟ್ಟ. ಗೌತಮ ಇವೆರಡನ್ನೂ ಸ್ವೀಕರಿಸಿದ. ಕ್ರಮೇಣ ಗೌತಮನ ದೇಹಸ್ಥಿತಿ ಉತ್ತಮಗೊಂಡಿತು. ಅನಂತರ ಗೌತಮ ಬೋಧಿವೃಕ್ಷದ ಕೆಳಗೆ ಧ್ಯಾನಾಸಕ್ತನಾಗಿ ಕುಳಿತ. ತನ್ನ ಪ್ರಶ್ನೆಗಳಿಗೆ ಉತ್ತರ ದೊರೆಯುವವರೆಗೂ ಅಲ್ಲಿಂದ ಹೋಗುವುದಿಲ್ಲವೆಂದು ಅವನು ದೃಢಸಂಕಲ್ಪ ಮಾಡಿದ.

ಒಂದು ಮುಂಜಾನೆ, ಅದೇ ಜಾಗದಲ್ಲಿ, ಗೌತಮ ಜ್ಞಾನದ ಬೆಳಕು ಕಂಡ. ಜೀವನದಲ್ಲಿರುವ ದುಃಖ ಮತ್ತು ನೋವು, ಅವಕ್ಕೆ ಕಾರಣ, ಅವನ್ನು ಪರಿಹರಿಸುವುದು ಹೇಗೆ? ಎಂಬೀ ಪ್ರಶ್ನೆಗಳಿಗೆ ಪರಿಹಾರಗಳನ್ನು ಕಂಡುಕೊಂಡ. ಅಂದು ಅವನಿಗೆ ಜ್ಞಾನೋದಯವಾಯಿತು. ಈ ಘಟನೆ ನಡೆದಿದ್ದು ಅವನ ಮೂವತ್ತೈದನೇ ಜನ್ಮ ದಿನದಂದು. ಅಂದು ವೈಶಾಖ ಮಾಸದ ಹುಣ್ಣಿಮೆಯ ದಿನವಾಗಿತ್ತು. ಗೌತಮ ದಿವ್ಯಜ್ಞಾನ ಪಡೆದ ನಂತರ ಗೌತಮಬುದ್ಧನಾದ.

ಬುದ್ಧ ಅನಂತರ ಸಾರನಾಥಕ್ಕೆ ತೆರಳಿದ. ಅಲ್ಲಿ ಅವನಿಗೆ ಐವರು ಶಿಷ್ಯರಾದರು. ಬುದ್ಧ ತನ್ನ ಶಿಷ್ಯರಿಗೆ ಜೀವನದ ಯಥಾರ್ಥವನ್ನು ಬೋಧಿಸಿದ. ಅನಂತರ ಅವನು 'ಸಂಘ' ಎಂಬ ಪಂಥ ಸ್ಥಾಪಿಸಿದ. ಬುದ್ಧ ಸಂಚಾರ ಕೈಗೊಂಡು ಎಲ್ಲೆಲ್ಲೂ ಜನರಿಗೆ ಜೀವನದ ಸತ್ಯಾಂಶಗಳನ್ನು ಬೋಧಿಸುತ್ತಾ ಬಂದ. ಅವನ ಅನುಯಾಯಿಗಳ ಸಂಖ್ಯೆ ಹೆಚ್ಚಿತು. ವಿದ್ವಾಂಸರು, ಸನ್ಯಾಸಿಗಳು, ಆಡಳಿತಗಾರರು ಮತ್ತು ಮಂತ್ರಿಗಳು ಎಲ್ಲರೂ ಅವನ ಪಂಥಕ್ಕೆ ಸೇರಿದರು. ಬುದ್ಧ ತನ್ನ ತಂದೆಯ ಸಂಸ್ಥಾನಕ್ಕೆ ಬಂದ. ಈ ಸಲ

ರಾಜಕುಮಾರನಾಗಿ ಅಲ್ಲ; ಬೌದ್ಧ ಭಿಕ್ಷುವಾಗಿ. ಅವನ ತಂದೆ, ಮಲತಾಯಿ, ಮಡದಿ ಮತ್ತು ಮಗ ಎಲ್ಲರೂ ಅವನ ಪಂಥವನ್ನು ಸೇರಿದರು.

ಬೇರೆ ಬೇರೆ ಧರ್ಮಗಳಿಗೆ ಸೇರಿದ ಜನರು ತಮ್ಮ ಧರ್ಮ ಸಂಸ್ಥಾಪಕರ ಜನ್ಮ ದಿನ, ಪುಣ್ಯ ತಿಥಿ ಮತ್ತು ಅವರ ಜೀವನದ ವಿವಿಧ ಘಟನೆಗಳನ್ನು ಆಚರಿಸುವರು. ಬೌದ್ಧರು ಈ ಮೂರು ಘಟನೆಗಳನ್ನೂ ಒಂದೇ ದಿನ ಅಂದರೆ ವೈಶಾಖ ಹುಣ್ಣಿಮೆಯಂದು ಆಚರಿಸುವರು. ಅಂದು ಅವರು ಮಿಂದು ಬಿಳಿ ಬಟ್ಟೆಗಳನ್ನು ಮಾತ್ರ ಧರಿಸುವರು. ಬುದ್ಧ ಪೂರ್ಣಿಮಾ ಹಬ್ಬದ ದಿನ ಅವರು ಬೌದ್ಧ ವಿಹಾರಗಳಲ್ಲಿ ಸೇರುತ್ತಾರೆ. ಅವರು ಅಂದು ಇಡೀ ದಿನ ಅಲ್ಲೇ ಇರುತ್ತಾರೆ. ಬುದ್ಧನ ಜೀವನ ಮತ್ತು ಉಪದೇಶಗಳ ಬಗ್ಗೆ ಉಪನ್ಯಾಸ ಏರ್ಪಡಿಸಲಾಗುತ್ತದೆ. ಕೆಲವರು ಬೌದ್ಧ ಭಿಕ್ಷುಗಳನ್ನು ತಮ್ಮ ಮನೆಗೆ ಕರೆಸಿ, ಅವರಿಂದ ಪುರಾಣ ಪಠಣ ಮಾಡಿಸುವರು. ಕೊಲೆ ಮಾಡುವುದಿಲ್ಲ, ಕಳವು ಮಾಡುವುದಿಲ್ಲ, ಸುಳ್ಳು ಹೇಳುವುದಿಲ್ಲ, ಮದ್ಯಪಾನ ಮಾಡುವುದಿಲ್ಲ ಮತ್ತು ವ್ಯಭಿಚಾರ ಮಾಡುವುದಿಲ್ಲ ಎಂದು ಅವರು ಪ್ರತಿಜ್ಞೆ ಮಾಡುವರು. ಇವಕ್ಕೆ ಪಂಚಶೀಲ ತತ್ವಗಳೆಂದು ಹೆಸರು.

ಈ ಹಬ್ಬದಂದು ಬೌದ್ಧರು ಮಾಂಸ ತಿನ್ನುವುದಿಲ್ಲ. ಪಾಯಸವನ್ನು ಮಾಡಿ ಬಡಜನರಿಗೆ ಹಂಚುವರು. ತಾವೂ ಕುಡಿಯುವರು. ಸಾರ್ವಜನಿಕ ಸ್ಥಳಗಳಲ್ಲಿ ಚಪ್ಪರ ಹಾಕಿ ಕುಡಿಯುವ ನೀರನ್ನು ಕೊಡುತ್ತಾರೆ. ಅಂದು ವಿಶೇಷವಾಗಿ ಪ್ರಾಣಿದಯೆ ತೋರಿಸುವರು. ಪಂಜರದೊಳಗಿನ ಹಕ್ಕಿಗಳನ್ನು ಕೊಂಡು ಆ ಹಕ್ಕಿಗಳನ್ನು ಪಂಜರದಿಂದ ಹೊರಗೆ ಬಿಡುತ್ತಾರೆ. ಕಟುಕರಿಗೆ ಹಣ ಕೊಟ್ಟು ಅವರು ಪ್ರಾಣಿವಧೆ ಮಾಡದಂತೆ ನೋಡಿಕೊಳ್ಳುತ್ತಾರೆ.

ಅಂದು ಬೌದ್ಧರು ಮನೆಗಳನ್ನು ಅತ್ಯಾಕರ್ಷಕವಾಗಿ ಶೃಂಗರಿಸುವರು. ಬೊಂಬಿನಿಂದ ವೈಶಾಖ 'ವಕಟ'ಗಳನ್ನು ತಯಾರಿಸಿ, ತಾರೆಗಳ ತೋರಣ ಕಟ್ಟುವರು. ಕೆಲವರು ಜಾತಕದ ಕಥೆಗಳ ಕೆಲವು ಪ್ರಸಂಗಗಳನ್ನು ನಿರೂಪಿಸುವ ದೃಶ್ಯಗಳನ್ನೊಳಗೊಂಡ ಕಾಗದಗಳನ್ನು ಮತ್ತು ಬಟ್ಟೆಗಳನ್ನು ಗೋಡೆಗಳ ಮೇಲೆ ಹಾಕಿ ಅಲಂಕರಿಸುವರು. ಬುದ್ಧ ರಾಜಕುಮಾರ ಗೌತಮನಾಗಿ ಹುಟ್ಟುವುದಕ್ಕೆ ಮುಂಚಿನ ಅವತಾರಗಳ ಮೇಲೆ ಜಾತಕದ ಕಥೆಗಳು ಆಧಾರಿತವಾಗಿವೆ.

ಈ ದೊಡ್ಡ ಹಬ್ಬವನ್ನು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಆಚರಿಸಲಾಗುವುದು. ನಾವು ದೀಪಾವಳಿಯನ್ನು ಹೇಗೆ ಆಚರಿಸುತ್ತೇವೋ ಅದೇ ರೀತಿ

ಶ್ರೀಲಂಕಾದಲ್ಲಿ ಈ ಹಬ್ಬವನ್ನು ಆಚರಿಸಲಾಗುವುದು. ಮನೆಗಳನ್ನು ವಿದ್ಯುದ್ದೀಪಗಳಿಂದ ಅಲಂಕರಿಸಲಾಗುವುದು. ಎಷ್ಟೇ ಬಡವರಾದರೂ ಒಂದು ಹಣತೆಯನ್ನು ಹಚ್ಚುವರು.

ಜಪಾನ್‌ನಲ್ಲಿ ಬೌದ್ಧರು ಏಪ್ರಿಲ್ ಎಂಟರಂದು ಬುದ್ಧ ಜಯಂತಿಯನ್ನು ಆಚರಿಸುವರು. ವಸಂತ ಮಾಸದ ಹೂಗಳಿಂದ ಬೌದ್ಧವಿಹಾರದ ಆಕೃತಿಗಳನ್ನು ರಚಿಸುವರು. ಅವುಗಳ ಮೇಲೆ ಬುದ್ಧನ ಪ್ರತಿಮೆ ಇಡುವರು. ಸ್ನಾನ ಮಾಡಿ ಅದನ್ನು ಭಕ್ತಿಯಿಂದ ಪೂಜಿಸುವರು.

ಬರ್ಮಾದಲ್ಲಿ ಬೌದ್ಧರು ತಿಂಗಳಲ್ಲಿ ಒಂದು ದಿನವನ್ನು ಬುದ್ಧನ ಆರಾಧನೆಗಾಗಿ ಮೀಸಲಿಡುವರು. ಬೋಧಿವೃಕ್ಷದ ಕೆಳಗೆ ಬುದ್ಧನಿಗೆ ಜ್ಞಾನೋದಯವಾದುದರಿಂದ ಬೋಧಿವೃಕ್ಷಕ್ಕೆ ಅವರು ಶ್ರದ್ಧೆಯಿಂದ ನೀರೆರೆದು ಪೋಷಿಸುವರು.

ಬುದ್ಧ ಪೂರ್ಣಿಮಾ ಹಬ್ಬದ ಆಚರಣೆಯ ವೈಖರಿಯನ್ನು ಕಾವ್ಯಗಳಲ್ಲಿ ಮತ್ತು ಕಾದಂಬರಿಗಳಲ್ಲಿ ಕೂಲಂಕಷವಾಗಿ ವರ್ಣಿಸಲಾಗಿದೆ. ವರ್ಣಚಿತ್ರಗಳಲ್ಲಿ ಅತ್ಯುತ್ತಮವಾಗಿ ನಿರೂಪಿಸಲಾಗಿದೆ. ಬುದ್ಧ ಪೂರ್ಣಿಮಾ ಕೇವಲ ಸಂತೋಷ-ಸಂಭ್ರಮಗಳ ದಿನವಲ್ಲ. ಗೌತಮ ಬುದ್ಧನ ಜೀವನ ಮತ್ತು ಬೋಧನೆಗಳ ಮೇಲೆ ಬೆಳಕು ಬೀರುವ ದಿನ.

ಮೂಲ ಹಿಂದಿ: ವಿಷ್ಣು ಪ್ರಭಾಕರ್



ಬಿಹು

ಬಿಹು ಅಸ್ಸಾಂನ ಜನರ ಅತಿ ದೊಡ್ಡ ಹಬ್ಬ. ಬೇರಾವ ಹಬ್ಬದಲ್ಲೂ ಜನರಲ್ಲಿ ಇಷ್ಟೊಂದು ಉತ್ಸಾಹ ಕಂಡುಬರುವುದಿಲ್ಲ. ಎಲ್ಲ ವಯಸ್ಸಿನವರು ಈ ಹಬ್ಬದಲ್ಲಿ ನಕ್ಕು ನಲಿಯುತ್ತಾರೆ. ಜಾತಿ-ಮತಗಳ ಬೇಧ-ಭಾವವಿಲ್ಲದೇ ಎಲ್ಲ ವರ್ಗಗಳ ಜನರು ಒಟ್ಟಿಗೆ ಕಲೆತು ಈ ಹಬ್ಬವನ್ನು ಆಚರಿಸುವರು.

ಸಾಮಾನ್ಯವಾಗಿ ವಸಂತ ಕಾಲದಲ್ಲಿ ಬರುವ ಬೊಹಾಗ್ ಬಿಹುಗೆ 'ಬಿಹು' ಎನ್ನುವರು. ಆದರೆ, ಅಸ್ಸಾಮೀಯರು ಮೂರು ಬಿಹು ಹಬ್ಬಗಳನ್ನು ಆಚರಿಸುವರು. ಏಪ್ರಿಲ್ ಮಧ್ಯ ಭಾಗದಲ್ಲಿ ಆಚರಿಸಲಾಗುವ ಬೊಹಾಗ್ ಬಿಹುವಲ್ಲದೇ, ಮಾಘ್ ಬಿಹು ಮತ್ತು ಕಟಿ ಬಿಹುಗಳನ್ನು ಸಹ ಅವರು ಆಚರಿಸುತ್ತಾರೆ. ಮಾಘ್ ಬಿಹು ಜನವರಿ ತಿಂಗಳ ಮಧ್ಯ ಭಾಗದಲ್ಲಿ ಬರುತ್ತದೆ. ಕಟಿ ಬಿಹು ಅಕ್ಟೋಬರ್ ತಿಂಗಳ ಮಧ್ಯಭಾಗದಲ್ಲಿ ಬರುತ್ತದೆ. ಈ ಮೂರು ಹಬ್ಬಗಳನ್ನು ಅನುಕ್ರಮವಾಗಿ ವಸಂತಕಾಲ, ಚಳಿಗಾಲ ಮತ್ತು ಶರತ್‌ಕಾಲಗಳಲ್ಲಿ ಆಚರಿಸಲಾಗುವುದು. ಇವುಗಳಲ್ಲಿ ಬೊಹಾಗ್ ಬಿಹುಗೆ ಹೆಚ್ಚು ಮಹತ್ವವಿದೆ. ಇದು

ಅಸ್ಸಾಮೀಯರ ಅತಿ ದೊಡ್ಡ ಹಬ್ಬ. ಇತರ ಎರಡು ಮುಖ್ಯ ಹಬ್ಬಗಳೆಂದರೆ ಮಾಘ್ ಬಿಹು ಮತ್ತು ಕಟಿ ಬಿಹು.

ಬೊಹಾಗ್ ಬಿಹುವಿನಲ್ಲಿ ವಸಂತೋತ್ಸವ, ಹೊಸ ವರ್ಷ ಮತ್ತು ರೈತರ ಹಬ್ಬ ಮೂರೂ ಮಿಳಿತಗೊಂಡಿವೆ. ಅಸ್ಸಾಂನಲ್ಲಿ ವಸಂತಕಾಲ ಅತ್ಯಂತ ರಮ್ಯವಾಗಿರುತ್ತದೆ. ಎಲ್ಲೆಲ್ಲೂ ಹಚ್ಚ ಹಸಿರು ತುಂಬಿರುತ್ತದೆ. ಮರಗಿಡಗಳು ಚಿಗುರುತ್ತವೆ. ಅರಳುವ ಹೂವಿನ ಸುಗಂಧ ವಾತಾವರಣವನ್ನು ತುಂಬಿಕೊಂಡಿರುತ್ತದೆ. ಇಡೀ ನಿಸರ್ಗ ಹೊಸ ಶೋಭೆಯಿಂದ ಕಂಗೊಳಿಸುತ್ತದೆ. ಗುಡ್ಡಗಾಡುಗಳಲ್ಲಿ ಮತ್ತು ಬಯಲು ಪ್ರದೇಶಗಳಲ್ಲಿ ಹಕ್ಕಿಗಳ ಮಧುರಗಾನ ಉಲ್ಲಾಸಗೊಳಿಸುತ್ತದೆ. ಇಂತಹ ಒಂದು ಸನ್ನಿವೇಶ ಬೊಹಾಗ್ ಬಿಹುವನ್ನಾಚರಿಸಲು ಜನರನ್ನು ಉತ್ತೇಜಿಸುತ್ತದೆ. ಈ ಹಬ್ಬದಲ್ಲಿ ಜನರು ಹಾಡಿ ಹಿಗ್ಗುವರು. ಕುಣಿದು ನಲಿಯುವರು. ಆಟಗಳನ್ನಾಡಿ ಆನಂದಿಸುವರು. ಆದ್ದರಿಂದಲೇ ಈ ಹಬ್ಬವನ್ನು 'ರಂಗಲಿ ಬಿಹು' ಎಂದು ಕರೆಯಲಾಗುತ್ತದೆ.

ಅಸ್ಸಾಮೀಯರ ಪಂಚಾಂಗದಲ್ಲಿ ಬರುವ ಮೊದಲ ತಿಂಗಳು ಬೊಹಾಗ್. ಕಡೆಯ ತಿಂಗಳು ಚೋಟ್. ಆದ್ದರಿಂದ ಬೊಹಾಗ್ ಬಿಹು ಹೊಸ ವರ್ಷದ ಆರಂಭದ ಸಂಕೇತ. ಆದ್ದರಿಂದ ಜನರು ಹೊಸ ವರ್ಷದಲ್ಲಿ ಕುಟುಂಬದ ಮತ್ತು ಸಮುದಾಯದ ಕ್ಷೇಮ ಹಾಗೂ ಅಭ್ಯುದಯವನ್ನು ಬಯಸುವರು. ಇದಕ್ಕಾಗಿ ಹಿರಿಯರನ್ನು ಪ್ರಾರ್ಥಿಸಿ, ಅವರ ಆಶೀರ್ವಾದಗಳನ್ನು ಪಡೆಯುವರು.

ಸಾಮಾನ್ಯವಾಗಿ ಇದೇ ಸಮಯದಲ್ಲಿ ನೈಋತ್ಯ ಮಾರುತ ಬೀಸಿ, ಅಸ್ಸಾಂನಲ್ಲಿ ಮೊದಲ ಮಳೆಯಾಗುತ್ತದೆ. ಪಾರಂಪರಿಕ ಕಥೆಗಳಲ್ಲಿ ಬರುವ ಬರ್ಡೊಯ್ ಚಿಲ ಎಂಬ ಹೆಂಗಸಿನಿಂದಾಗಿ ಈ ಮಾರುತ ಬೀಸುವುದೆಂದು ಅಸ್ಸಾಮೀಯರ ನಂಬಿಕೆ. ಆಕೆ ಬಿಹು ಸಮಯದಲ್ಲಿ ತನ್ನ ತವರುಮನೆಗೆ ಹೋಗಿ ಅಲ್ಲಿ ಸ್ವಲ್ಪ ದಿವಸಗಳಿದ್ದ ನಂತರ ತನ್ನ ಅತ್ತೆ-ಮಾವಂದಿರ ಮನೆಗೆ ಮರಳುವಳೆಂದು ಭಾವಿಸಲಾಗುತ್ತದೆ. ಬಿಹು ಸಮಯದಲ್ಲಿ ಬೀಸುವ ಈ ತೀವ್ರ ಗಾಳಿಯ ಕಾರಣಗಳನ್ನು ತಿಳಿದುಕೊಳ್ಳಲು ಮಕ್ಕಳಿಗೆ ತುಂಬಾ ಆಸಕ್ತಿ. ಈ ಗಾಳಿ ತರುವ ಮಳೆ ಒಣಗಿದ ಭೂಮಿಗೆ ನೀರೆರೆಯುತ್ತದೆ. ಆಗ ಭೂಮಿ ಬಿತ್ತನೆಗೆ ಸಿದ್ಧವಾಗುತ್ತದೆ. ಬೊಹಾಗ್ ಬಿಹು ಬೇಸಾಯದ ಕೆಲಸ ಪ್ರಾರಂಭವಾಗುವುದರ ಸಂಕೇತ. ಈ ಹಬ್ಬದಲ್ಲಿ ಅನುಸರಿಸುವ ವಿಧಿಗಳು ಮುಖ್ಯವಾಗಿ ಬೇಸಾಯಕ್ಕೆ ಸಂಬಂಧಪಟ್ಟಿರುತ್ತವೆ.

ಬೊಹಾಗ್ ಬಿಹುವಿನ ಜನಪ್ರಿಯತೆ ಈ ಹಾಡಿನಿಂದ ವ್ಯಕ್ತವಾಗುತ್ತದೆ:

ಮೂಗ ನೂಲಿನ ಉರುಳೆ ಪ್ರಿಯ
ನೇಯ್ಗೆಯ ಲಾಳಿ ಇನ್ನೂ ಪ್ರಿಯ
ಬೊಹಾಗ್ ಬಿಹು ಎಲ್ಲಕ್ಕಿಂತ ಹೆಚ್ಚು ಪ್ರಿಯ
ಅದನ್ನಾಚರಿಸದೆ ಬಿಡುವುದು ಹೇಗೆ - ಇತ್ಯಾದಿ

ಬಿಹು ಹಬ್ಬಕ್ಕಾಗಿ ಸಿದ್ಧತೆಗಳು ಬಹು ಮುಂಚೆಯೇ ಆರಂಭವಾಗುತ್ತವೆ. ಸಿದ್ಧತೆಗಳು ಒಂದು ತಿಂಗಳ ಕಾಲ ನಡೆಯುತ್ತವೆ. ಹಬ್ಬದ ವಿಧಿಗಳು ಚೋಟ್ ಮಾಸದ ಕಡೇ ದಿನ (ವಿಸುವ ಸಂಕ್ರಾಂತಿ ದಿನ) ಆರಂಭವಾಗಿ ಬೊಹಾಗ್ ಮಾಸದ ಕೆಲವು ದಿನಗಳವರೆಗೆ ನಡೆಯುತ್ತವೆ.

ಈ ಬಿಹುವಿನ ಮೊದಲ ದಿನವನ್ನು 'ಗೋರು ಬಿಹು' ಎಂದು ಕರೆಯುವರು. ಅಂದು ದನ-ಕರುಗಳನ್ನು ಪೂಜಿಸಲಾಗುವುದು. ಬೆಳಗ್ಗೆ ದನದ ಕೊಟ್ಟಿಗೆಯನ್ನು ಸ್ವಚ್ಛಗೊಳಿಸಲಾಗುವುದು. ಹಸುವಿನ ಕಾಲು ತೊಳೆಯಲಾಗುವುದು. ಕೊಂಬುಗಳಿಗೆ ಮತ್ತು ಗೊರಸುಗಳಿಗೆ ಎಣ್ಣೆ ಹಚ್ಚಲಾಗುವುದು. ಹಾರ ಹಾಕಿ ಅಲಂಕರಿಸಲಾಗುವುದು. ಅನಂತರ ದನ-ಕರುಗಳನ್ನು ಹತ್ತಿರದ ನದಿ ಅಥವಾ ಕೆರೆಯ ಬಳಿ ಕರೆದುಕೊಂಡು ಹೋಗಲಾಗುವುದು. ರಸ್ತೆಯಲ್ಲಿ ದಿಘಲಟಿ ಮತ್ತು ಮಖಿಯಾತಿ ಎಂಬ ಗಿಡಗಳ ಸಣ್ಣ ಕೊಂಬೆಗಳಿಂದ ದನಕರುಗಳಿಗೆ ಮೆತ್ತಗೆ ಹೊಡೆಯಲಾಗುವುದು.

ಸೋರೆಕಾಯಿ, ಬದನೆಕಾಯಿ ಮತ್ತಿತರ ಕಾಯಿಪಲ್ಲೆಗಳನ್ನು ಬಿದಿರಿನ ಗಳುಗಳಿಗೆ ಸಿಕ್ಕಿಸಿ, ಅವುಗಳ ಮುಂದೆ ಎಸೆಯಲಾಗುವುದು. ಆಗ ಈ ರೀತಿಯ ಪದ್ಯವನ್ನು ಹಾಡಲಾಗುವುದು:

ಉದ್ದದ ಎಲೆಗಳ ದಿಘಲಟಿಯಿಂದ
ಹೊಡೆವೆವು ಹೊಡೆವೆವು ಹಸುವನ್ನು
ತಿನ್ನುತ ಸೋರೆಯ, ತಿನ್ನುತ ಬದನೆಯ
ವರುಷ ವರುಷವೂ ಬೆಳೆಯುತ ನೀನು
ಅಪ್ಪನ ಅಮ್ಮನ ಮೀರಿಸುತ
ದೊಡ್ಡ ಹಸುವಾಗಿ ಬೆಳೆಯಲಿ ಬೇಕು.... ಇತ್ಯಾದಿ

ಈ ಕಾರ್ಯದಲ್ಲಿ ಮಕ್ಕಳೇ ಹೆಚ್ಚಾಗಿ ಪಾಲ್ಗೊಳ್ಳುವರು. ದೊಡ್ಡವರು ಮಕ್ಕಳ ಕೆಲಸದ ಉಸ್ತುವಾರಿ ವಹಿಸುವರು.

ನದಿ ಅಥವಾ ಕೆರೆಯಲ್ಲಿ ಹಸುಗಳನ್ನು ತೊಳೆಯುವರು. ಹಸುಗಳ ಜೊತೆ

ಹೋದವರೆಲ್ಲರೂ ಸ್ನಾನ ಮಾಡುವರು. ಅನಂತರ ದನಕರುಗಳಿಗೆ ಕಟ್ಟಿದ ಹಳೇ ಹಗ್ಗಗಳನ್ನು ಬಿಚ್ಚಿ, ಅವುಗಳನ್ನು ಆರಾಮವಾಗಿ ತಿರುಗಾಡಲು ಬಿಡುವರು.

ಮಕ್ಕಳು ಮನೆಗೆ ಬಂದ ನಂತರ ಹಿರಿಯರಿಗೆ ನಮಸ್ಕರಿಸಿ, ಅವರ ಆಶೀರ್ವಾದಗಳನ್ನು ಪಡೆಯುವರು. ಕುಟುಂಬದ ಹಿರಿಯರು ಸ್ನಾನ ಮಾಡಿ, ಮನೆ ದೇವರ ಗುಡಿಯಲ್ಲಿ ಅಥವಾ ಸಾರ್ವತ್ರಿಕ ಪ್ರಾರ್ಥನಾ ಮಂದಿರದಲ್ಲಿ ಪ್ರಾರ್ಥನೆ ಸಲ್ಲಿಸುವರು. ಅವರು ಅಂದು ಉದ್ದಿನ ಬೇಳೆ, ಅರಿಶಿನ, ಬೇವಿನ ಸೊಪ್ಪು ಇತ್ಯಾದಿಗಳನ್ನು ಅರೆದು ಅದನ್ನು ಮೈಗೆ ಹಚ್ಚಿಕೊಂಡು ಸ್ನಾನ ಮಾಡುವರು.

ಸಂಜೆ ದನ-ಕರುಗಳು ಹಿಂದಿರುಗುವ ಹೊತ್ತಿಗೆ ಕೊಟ್ಟಿಗೆಯಲ್ಲಿ ಮಣ್ಣಿನ ಹಣತೆಯನ್ನು ಹಚ್ಚಿಡಲಾಗುವುದು. ಹಸುಗಳಿಗೆ ಹೊಸ ಹಗ್ಗಗಳನ್ನು ಕಟ್ಟಲಾಗುವುದು. ಅವುಗಳನ್ನು ಪೂಜಿಸಿ, ಅವಕ್ಕೆ ಸಿಹಿ ತಿಂಡಿಗಳನ್ನು ತಿನ್ನಿಸಲಾಗುವುದು. ಅನಂತರ ಕೊಟ್ಟಿಗೆಯಲ್ಲಿ ದಟ್ಟ ಹೊಗೆ ಹಾಕಲಾಗುವುದು. ಸೊಳ್ಳೆ ಮತ್ತು ಇತರ ಉಪದ್ರವಕಾರಿ ಕೀಟಗಳನ್ನು ಓಡಿಸಿ ದನಕರುಗಳನ್ನು ರೋಗದಿಂದ ರಕ್ಷಿಸುವುದೇ ಇದರ ಉದ್ದೇಶ.

ಇದರ ಮಾರನೇ ದಿನ ಅಂದರೆ ಬೊಹಾಗ್‌ನ ಮೊದಲ ದಿನ, ಮಾನು ಬಿಹು (ಮಾನವರ ಬಿಹು) ಆಚರಿಸಲಾಗುವುದು. ಅಂದೂ ಸಹ ಹಿರಿಯರಿಗೆ ಗೌರವಗಳನ್ನು ಸೂಚಿಸಲಾಗುವುದು. ಬಂಧು-ಮಿತ್ರರು ಮನೆಗೆ ಭೇಟಿ ಕೊಡುವರು. ಬಿಹು ಹಬ್ಬದಲ್ಲಿ, ಚಿಡ (ಅವಲಕ್ಕಿ), ಮೊಸರು ಮತ್ತು ಸಿಹಿ ತಿಂಡಿಗಳನ್ನೊಳಗೊಂಡ ವಿಶೇಷ ಭೋಜನವಿರುತ್ತದೆ.

ಬಿಹು ಹಬ್ಬದಲ್ಲಿ ಉಡುಗೊರೆಗಳನ್ನು ಕೊಡುವ ಪದ್ಧತಿ ಉಂಟು. ಇದಕ್ಕೆ ಬಿಹುವನ್ ಎನ್ನುವರು. ಈ ಉಡುಗೊರೆಗಾಗಿ ಮನೆಯ ಮಗ್ಗದಲ್ಲಿ ಹೆಂಗಸರು ನೇಯ್ದ ಗಮೋಚ್ (ಕರವಸ್ತ್ರ)ಗಳನ್ನೇ ಹೆಚ್ಚಾಗಿ ಕೊಡಲಾಗುತ್ತದೆ. ಬಟ್ಟೆ-ಬರೆಗಳನ್ನು ಅಥವಾ ಇತರ ವಸ್ತುಗಳನ್ನು ಸಹ ಉಡುಗೊರೆಯಾಗಿ ನೀಡುವರು. ಈ ಉಡುಗೊರೆ ಪ್ರೀತಿ ಮತ್ತು ಗೌರವದ ಸಂಕೇತ. ಅಮ್ಮಂದಿರು, ಅಕ್ಕಂದಿರು ಮತ್ತು ಹಿತೈಷಿಗಳು ನೀಡುವ ಈ ಉಡುಗೊರೆಗಳಿಗಾಗಿ ಮಕ್ಕಳು ಕಾದಿರುತ್ತಾರೆ.

ಬಿಹು ಹಬ್ಬದ ಮೂರನೇ ದಿನವನ್ನು ಗೋಸಾಯಿನ್ ಬಿಹು (ದೇವರ ಬಿಹು) ಎಂದು ಕರೆಯುವರು. ಅಂದು ಧಾರ್ಮಿಕ ಪೂಜೆಗಳು ನಡೆಯುತ್ತವೆ. ಅನಂತರ, ಏಳನೇ ದಿನದವರೆಗೆ ವಿಶೇಷ ವಿಧಿಗಳೇನೂ ಇರುವುದಿಲ್ಲ. ಬಿಹು ಹಬ್ಬದ ಏಳನೇ ದಿನಕ್ಕೆ ಸಾತ್‌ಬಿಹು ಎಂದು ಹೆಸರು. ಈ ದಿನಕ್ಕೆ ತುಂಬಾ ಮಹತ್ವವುಂಟು. ಅಂದು ಏಳು ಬಗೆಯ

ಸೊಪ್ಪುಗಳನ್ನು ಸೇರಿಸಿ ಅಡಿಗೆ ಮಾಡುವರು. ಇದಕ್ಕೆ 'ಸಾತ್‌ಸಾಕ್' ಎನ್ನುವರು. ಕೆಳಗಣ ಅಸ್ಸಾಂನ ಕೆಲವು ಭಾಗಗಳಲ್ಲಿ ಹಳ್ಳಿಯ ಹಿರಿಯ ಹೆಂಗಸರು ಹಳ್ಳಿಯ ಹತ್ತಿರದ ಕೆಲವು ಪ್ರದೇಶಗಳಿಂದ ಈ ಸೊಪ್ಪುಗಳನ್ನು ಕಿತ್ತು ತರುತ್ತಾರೆ. ಈ ಸಂದರ್ಭದಲ್ಲಿ ಅವರು ಪ್ರತಿ ದಿವಸ ಹಾಡುವರು. ಕೆಲವು ವೇಳೆ ಕುಣಿಯುವುದೂ ಉಂಟು.

ಕ್ರೀಡೆಗಳು ಸಹ ಬಿಹು ಸಮಾರಂಭಗಳ ಒಂದು ಮುಖ್ಯ ಆಕರ್ಷಣೆಯಾಗಿರುತ್ತವೆ. ಈ ಸಂದರ್ಭದಲ್ಲಿ 'ಕಾನಿ ಜೂಜ್' (ಮೊಟ್ಟೆ ಪಂದ್ಯ) ಎಂಬ ವಿಶೇಷ ಪಂದ್ಯವಿರುತ್ತದೆ. ಇಬ್ಬರು ವ್ಯಕ್ತಿಗಳು ಕೈಯಲ್ಲಿ ಒಂದೊಂದು ಮೊಟ್ಟೆ ಇಟ್ಟುಕೊಳ್ಳುವರು. ಒಬ್ಬ ಮತ್ತೊಬ್ಬನ ಕೈಯಲ್ಲಿರುವ ಮೊಟ್ಟೆಗೆ ಹೊಡೆಯುವನು. ಹೆಂಗಸರು ಕವಡೆ ಮತ್ತು ಚದುರಂಗದ ಆಟವಾಡುವರು. ಧೋಪ್ (ಚೆಂಡಾಟ) ಮತ್ತು ಹೌವ್ (ಕಬಡ್ಡಿಯಂತಹ ಒಂದು ಆಟ) ಸಹ ಬಿಹು ಹಬ್ಬದಲ್ಲಿ ಆಡುವ ಜನಪ್ರಿಯ ಆಟಗಳು. ಮಕ್ಕಳು ಈ ಆಟಗಳನ್ನು ನೋಡುವರು ಮತ್ತು ಉತ್ಸಾಹದಿಂದ ಪಾಲ್ಗೊಳ್ಳುವರು.

ಅಸ್ಸಾಂನ ಇತರ ಹಬ್ಬಗಳಿಗೂ ಮತ್ತು ಬೊಹಾಗ್ ಬಿಹು ಹಬ್ಬಕ್ಕೂ ಒಂದು ಮುಖ್ಯ ವ್ಯತ್ಯಾಸವಿದೆ. ಬೊಹಾಗ್ ಬಿಹುವಿನಲ್ಲಿ ವಿಶೇಷ ಬಿಹು ಹಾಡುಗಳನ್ನು ಹಾಡುವರು. ವಿಶೇಷ ಕುಣಿತಗಳು ಸಹ ಇರುತ್ತವೆ. ಪ್ರಣಯವೇ ಈ ಹಾಡುಗಳ ಮುಖ್ಯ ವಿಷಯವಾಗಿರುತ್ತದೆ. ಈ ಸುಂದರ ಜಾನಪದ ಗೀತೆಗಳು ಲಯಬದ್ಧವಾಗಿದ್ದು, ಕೇಳಲು ತುಂಬಾ ಇಂಪಾಗಿರುತ್ತವೆ. ಈ ಜಾನಪದ ಗೀತೆಗಳನ್ನು ಢೋಲ್ (ತಮಟೆ), ಪೇಪ (ಎಮ್ಮೆ ಕೊಂಬಿನಿಂದ ಮಾಡಿದ ಒಂದು ವಾದ್ಯ), ಟಾಕ (ಬಿದಿರಿನಿಂದ ಮಾಡಿದ ಬಡಿಗೆ), ತಾಳ್ (ಝುಲ್ಲರಿಗಳು), ಗಾಗನ (ಜ್ಯೂಸ್ ಹಾರ್ಪ್) ಮತ್ತು ಚಪ್ಪಾಳೆ ಬಡಿತ - ಇವುಗಳ ಹಿಮ್ಮೇಳದಲ್ಲಿ ಹಾಡುವರು. ಬಿಹು ಕುಣಿತ ಮನಸೆಳೆಯುತ್ತದೆ. ಈ ಕುಣಿತ ಯುವ ಜನರ ಶಕ್ತಿ ಮತ್ತು ಹುರುಪನ್ನು ಪ್ರತಿಬಿಂಬಿಸುತ್ತದೆ. ಈ ಗೀತೆಗಳನ್ನು ಮತ್ತು ನೃತ್ಯಗಳನ್ನು ಪಟ್ಟಣಗಳ ಯುವಕ-ಯುವತಿಯರೇ ಸಾಮಾನ್ಯವಾಗಿ ಹಾಡುವರು ಮತ್ತು ಪ್ರದರ್ಶಿಸುವರು. ಕೆಲವು ವೇಳೆ ಈ ಯುವಕ ಯುವತಿಯರು ಒಟ್ಟಾಗಿ ಕುಣಿಯುವರು ಮತ್ತು ಕೆಲವು ಸಂದರ್ಭಗಳಲ್ಲಿ ಪ್ರತ್ಯೇಕವಾಗಿ ಕುಣಿಯುವರು.

ಬೊಹಾಗ್ ಬಿಹು ಸಮಯದಲ್ಲಿ ಸಾಮಾನ್ಯವಾಗಿ ಹಾಡುವ ಇನ್ನೊಂದು ಬಗೆಯ ಗೀತೆಗಳ ಹೆಸರು ಹುಚಡಿ. ಹುಚಡಿ ಹಾಡುಗಳು ಹೆಚ್ಚಾಗಿ ಧಾರ್ಮಿಕ ಅಂಶಗಳನ್ನು ನಿರೂಪಿಸುತ್ತವೆ. ಹಳ್ಳಿಯ ಯುವಕರು ಮತ್ತು ಮಧ್ಯ ವಯಸ್ಕರು ಈ ಹಾಡುಗಳನ್ನು ಸಾಮೂಹಿಕವಾಗಿ ಹಾಡುವರು. ಈ ಹಾಡಿನ ಕುಣಿತ ಬಹಳ ಸರಳವಾಗಿರುತ್ತದೆ. ಅದರಲ್ಲಿ

ಘನತೆ ಇರುತ್ತದೆ. ನಾಯಕನನ್ನು ಮಧ್ಯೆ ನಿಲ್ಲಿಸಿ, ಅವನ ಸುತ್ತ, ಲಯಬದ್ಧವಾಗಿ ಕುಣಿಯುವರು.



ಹುಚಡಿ ಗಾಯಕರ ತಂಡಗಳನ್ನು ಹಾರ್ದಿಕವಾಗಿ ಬರಮಾಡಿಕೊಳ್ಳುವರು. ಕಿರಿಯರು ಮತ್ತು ಹಿರಿಯರು ಮೊದಲ್ಗೊಂಡು ಎಲ್ಲರೂ ಅವರಿಗೆ ಗೌರವ ತೋರಿಸುವರು. ಅವರಿಗೆ ಕಾಣಿಕೆಗಳನ್ನು ಕೊಟ್ಟು ಆಶೀರ್ವಾದ ಪಡೆಯುವರು.

ಬಿಹು ಹಾಡುಗಳು ಮತ್ತು ಕುಣಿತಗಳು ಹಾಗೂ ಹುಚಡಿ ಮೇಲಣ ಮತ್ತು ಮಧ್ಯ ಅಸ್ಸಾಂ ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತವೆ. ಕೆಳಗಣ ಅಸ್ಸಾಂನಲ್ಲಿ ಈ ಕಾರ್ಯಕ್ರಮ ಕಾಣಬರುವುದಿಲ್ಲ. ಆದರೆ, ಬೊಹಾಗ್ ಬಿಹು ಸಂದರ್ಭದಲ್ಲಿ ಇತರ ಪ್ರದೇಶಗಳಲ್ಲಿ ಕಂಡುಬರದಂತಹ ಒಂದು ವಿಶೇಷ ಕಾರ್ಯಕ್ರಮ ಕೆಳಗಣ ಅಸ್ಸಾಂನಲ್ಲಿ ನಡೆಯುತ್ತದೆ. ಬಿಹು ದಿನಗಳು ಆರಂಭವಾಗುತ್ತಿದ್ದಂತೆ ಒಂದು ಮೇಳವನ್ನು ಏರ್ಪಡಿಸಲಾಗುತ್ತದೆ. ಕಾಮರೂಪ್ ಪ್ರದೇಶದಲ್ಲಿ ಈ ಮೇಳಕ್ಕೆ ಬಥೇಲಿ ಅಥವಾ ಸುವಾರಿ ಎಂದು ಹೆಸರು. ಮಂಗಲ್‌ದಾಯ್ ಪ್ರದೇಶದಲ್ಲಿ ಈ ಮೇಳಕ್ಕೆ ದೆವುಲ್ ಎನ್ನುವರು. ಗೋಲ್ ಪಾಡಾ ಪ್ರದೇಶದ ಕೆಲವು ಭಾಗಗಳಲ್ಲಿ, ಬಿಹು ಆರಂಭವಾದ ಏಳನೇ ದಿನ, ಸಾತ್ ಬಿಸುವರ್ ಮೇಳ ನಡೆಯುತ್ತದೆ.

ಅಸ್ಸಾಂನ ವಿವಿಧ ಬುಡಕಟ್ಟುಗಳ ಜನರು ಸಹ ಬಿಹು ಹಬ್ಬದಲ್ಲಿ ಅಥವಾ ಸುಮಾರು ಅದೇ ಸಮಯದಲ್ಲಿ ಬಿಹುವನ್ನೇ ಹೋಲುವ ಹಬ್ಬವನ್ನಾಚರಿಸುವರು. ಈ ಹಬ್ಬ ಆಯಾ ಜನರ ಸಂಪ್ರದಾಯಗಳು ಮತ್ತು ಕಟ್ಟಳೆಗಳನ್ನು ಅನುಸರಿಸುತ್ತದೆ. ಇವುಗಳಲ್ಲಿ ಬೊಡೋ ಕಚಾಡಿಗಳ ಬೊಯ್‌ಸಾಗು, ರಭಾಗಳ ಬಾಯ್‌ಖು ಮತ್ತು ಮಿಸ್‌ಹಿಂಗ್‌ಗಳ ಅಲಿ ಆಯ್ ಲಿಗಾಂಗ್ ಸೇರಿವೆ.

ಬಿಹು ಮೂಲತಃ ಹಳ್ಳಿಗರ ಹಬ್ಬ. ಆದರೆ ಕಾಲ ಬದಲಾವಣೆಯಾಗುತ್ತಿದ್ದಂತೆ ಅವುಗಳ ಆಚರಣೆಯ ರೀತಿಯೂ ಬದಲಾಗುತ್ತಿದೆ. ಈಗಿನ ಕಾಲದಲ್ಲಿ ನಗರ ಪ್ರದೇಶಗಳಲ್ಲಿ ಮತ್ತು ಇತರ ದೊಡ್ಡ ಊರುಗಳಲ್ಲಿ ಬೊಹಾಗ್ ಬಿಹು ಹಬ್ಬಕ್ಕಾಗಿ ಸಾರ್ವಜನಿಕ ಸಮಾರಂಭಗಳನ್ನು ಏರ್ಪಡಿಸಲಾಗುವುದು. ಈ ಸಮಾರಂಭಗಳ ಅಂಗವಾಗಿ ಸಂಗೀತ, ನೃತ್ಯ, ಕ್ರೀಡಾ ಸ್ಪರ್ಧೆಗಳು ಮುಂತಾದ ಕಾರ್ಯಕ್ರಮಗಳಿರುತ್ತವೆ. ಮುಖ್ಯವಾಗಿ ಬಿಹು ಹಾಡುಗಳ ಮತ್ತು ನೃತ್ಯಗಳ ಪ್ರದರ್ಶನವಿರುತ್ತದೆ. ಆದರೂ ಅಸ್ಸಾಂನೊಳಗೆ ಮತ್ತು ಹೊರಗೆ ವಾಸಿಸುವ ವಿವಿಧ ಜನಾಂಗಗಳ ಸಂಸ್ಕೃತಿಯನ್ನು ನಿರೂಪಿಸುವ ಕಾರ್ಯಕ್ರಮಗಳನ್ನು ಸಹ ಸೇರಿಸಲಾಗುವುದು.

ಮಾಘ್ ಬಿಹು, ಸುಗ್ಗಿಕಾಲದ ಹಬ್ಬ. ಇದನ್ನು ಫಸಲು ಬಂದ ಬಳಿಕ ಚಳಿಗಾಲದಲ್ಲಿ ಆಚರಿಸಲಾಗುವುದು. ಆಗ ಹಳ್ಳಿಯವರಿಗೆ ಬೇಸಾಯದ ಕೆಲಸ ಮುಗಿದು ಬಿಡುವಿರುತ್ತದೆ. ಪುಷ್ಕಳವಾದ ಭೋಜನ ಈ ಹಬ್ಬದ ಮುಖ್ಯ ಅಂಶವಾಗಿರುತ್ತದೆ. ಆದ್ದರಿಂದ ಇದನ್ನು 'ಭೋಗಲಿ ಬಿಹು' ಎಂದು ಕರೆಯುವರು. ಈ ಹಬ್ಬದ ಅಂಗವಾಗಿ ಬೆಂಕಿಯನ್ನು ಹಚ್ಚುವುದು ಒಂದು ಮುಖ್ಯ ಕಾರ್ಯಕ್ರಮವಾಗಿರುತ್ತದೆ. ಬಿಹು ಹಬ್ಬದ ಹಿಂದಿನ ದಿನ ಸಂಜೆ (ಉರುಕ ದಿನ) ಪ್ರತಿಯೊಂದು ಮನೆಯಲ್ಲಿ ವಿಶೇಷ ಭೋಜನವನ್ನು ತಯಾರಿಸುವರು. ಇದರಲ್ಲಿ ಮೀನು, ಮಾಂಸ ಮತ್ತು ಇತರ ವಿಶೇಷ ಪದಾರ್ಥಗಳಿರುತ್ತವೆ. ಮೀನನ್ನು ಅದೇ ದಿನ ಬೆಳಿಗ್ಗೆ ನದಿ ಅಥವಾ ಸರೋವರದಲ್ಲಿ ಹಿಡಿಯಲಾಗುತ್ತದೆ. ಕೆಲವು ಪ್ರದೇಶಗಳಲ್ಲಿ ಗ್ರಾಮಸ್ಥರು ಮೀನು ಹಿಡಿಯಲು ಒಟ್ಟಾಗಿ ಹೋಗುವರು. ಹೀಗೆ ಗುಂಪಾಗಿ ಹೋಗುವುದರಿಂದ ಅವರು ತುಂಬ ಆನಂದವನ್ನು ಅನುಭವಿಸುವರು. ವಿಶೇಷವಾಗಿ ನಿರ್ಮಿಸಿದ ಚಪ್ಪರದೊಳಗೆ ಮತ್ತು ಅದರ ಸುತ್ತಮುತ್ತ ಕುಳಿತು ಯುವಜನರು ಮತ್ತು ಮಕ್ಕಳು ಸಾಮೂಹಿಕವಾಗಿ ಊಟ ಮಾಡುವರು. ಈ ಚಪ್ಪರಗಳನ್ನು ಹಾಕಲು ಹುಲ್ಲು, ಒಣ ಬಾಳೆ ಎಲೆ ಮತ್ತು ಹಸಿ ಬಿದಿರನ್ನು ಬಳಸಲಾಗುವುದು. ಈ ಯುವಜನರು ಇಡೀ ರಾತ್ರಿ ಅಲ್ಲೇ ಇದ್ದು, ಬೆಂಕಿ ಹಾಕಿ, ಹರಟೆ

ಹೊಡೆದುಕೊಂಡು ಕಾಲ ಕಳೆಯುವರು. ಉರುವಲಿಗಾಗಿ ಅನೇಕ ಪದಾರ್ಥಗಳನ್ನು ಮುಂಚಿತವಾಗಿಯೇ ಸಂಗ್ರಹಿಸಿರುತ್ತಾರೆ. ಕೆಲವನ್ನು ತಮಾಷೆಯಾಗಿ ಕದಿಯುವುದೂ ಉಂಟು. ಮರುದಿನ ಮುಂಜಾನೆ ಪ್ರತಿಯೊಬ್ಬರೂ ಸ್ನಾನ ಮಾಡುವರು. ಅನಂತರ ಚಪ್ಪರಗಳಿಗೆ ಬೆಂಕಿ ಹಚ್ಚಲಾಗುವುದು. ಅದು ಚಟಪಟ ಶಬ್ದ ಮಾಡಿಕೊಂಡು ಧಗಧಗ ಉರಿಯುತ್ತದೆ. ಈ ದೃಶ್ಯವನ್ನು ನೋಡಿ ಎಲ್ಲರೂ ಆನಂದಿಸುವರು. ಕೆಲವರು ತಮ್ಮ ತಮ್ಮ ಮನೆಯಲ್ಲಿ ಬೆಂಕಿ ಹಾಕಿ, ಅಗ್ನಿ ದೇವರನ್ನು ಪೂಜಿಸುವರು. ದೇವರಿಗಾಗಿ ಈ ಬೆಂಕಿಯಲ್ಲಿ ತಿನ್ನುವ ಪದಾರ್ಥಗಳನ್ನು ಎಸೆಯುವರು.

ಪ್ರತಿ ಮನೆಯಲ್ಲಿ ಹೆಂಗಸರು ಬಿಹು ಹಬ್ಬದ ವಿಶೇಷ ತಿಂಡಿಗಳನ್ನು ತಯಾರಿಸುವರು. ಚಿಡ (ಅವಲಕ್ಕಿ), ಪಿದ (ಅಕ್ಕಿ ದೋಸೆ), ಲಾಡು ಹಾಗೂ ವಿವಿಧ ಧಾನ್ಯಗಳನ್ನೊಳಗೊಂಡ ಹುರಿಗಾಳು - ಈ ಪದಾರ್ಥಗಳನ್ನು ಮಧ್ಯಾಹ್ನದ ಊಟದಲ್ಲಿ ತೆಗೆದುಕೊಳ್ಳುವರು. ಊಟಕ್ಕೆ ಬಂಧು-ಮಿತ್ರರನ್ನು ಆಮಂತ್ರಿಸಲಾಗುವುದು. ಈ ಕಾರ್ಯಕ್ರಮ ಕೆಲವು ದಿನಗಳವರೆಗೆ ಮುಂದುವರಿಯುವುದು. ಈ ಬಿಹು ಹಬ್ಬದಲ್ಲಿಯೂ ಕಿರಿಯರು ದೊಡ್ಡವರಿಗೆ ಗೌರವ ತೋರಿಸಿ ಅವರ ಹರಕೆಯನ್ನು ಪಡೆಯುವುದು ವಾಡಿಕೆ. ಹಿರಿಯರು ದೇವಾಲಯಗಳಲ್ಲಿ ಮತ್ತು ಸಾಮುದಾಯಿಕ ಮಂದಿರಗಳಲ್ಲಿ ಪ್ರಾರ್ಥನೆ ಸಲ್ಲಿಸುವರು.

ಕಟಿ ಬಿಹು ಕೇವಲ ಒಂದು ದಿನದ ಸಮಾರಂಭ. ಅಹಿನ್ ಮಾಸದ (ಅಕ್ಟೋಬರ್-ನವೆಂಬರ್) ಕಡೇ ದಿನ ಈ ಹಬ್ಬವನ್ನು ಆಚರಿಸಲಾಗುವುದು. ಈ ಹಬ್ಬದ ಸಮಯದಲ್ಲಿ ಭತ್ತದ ಬೆಳೆ ಇನ್ನೂ ಕುಯ್ಲಿಗೆ ಬಂದಿರುವುದಿಲ್ಲ. ಕಣಜಗಳು ಹೆಚ್ಚು ಕಡಿಮೆ ಖಾಲಿ ಇರುತ್ತವೆ. ಆದ್ದರಿಂದ ಇದನ್ನು ಕಂಗಾಲಿ ಬಿಹು (ಬಡ ಬಿಹು) ಎನ್ನುವರು. ಈ ಹಬ್ಬದಲ್ಲಿ ಊಟಕ್ಕೆ ಮಹತ್ವವಿಲ್ಲ.

ಈ ಹಬ್ಬದಲ್ಲಿ ಮುಖ್ಯವಾಗಿ ಮನೆಯ ಮುಂದೆ ತುಳಸಿ ಗಿಡಕ್ಕೆ ಪೂಜೆ ಮಾಡಲಾಗುವುದು. ತುಳಸಿಯ ಬೃಂದಾವನವನ್ನು ಸಗಣಿ ಮತ್ತು ಮಣ್ಣಿನಿಂದ ಸಾರಿಸಲಾಗುವುದು. ಅದರ ಹತ್ತಿರ ಒಂದು ಚಿಕ್ಕ ಬಾಳೆ ಗಿಡವನ್ನು ನೆಡಲಾಗುವುದು. ರಾತ್ರಿ ತುಳಸಿಯ ಮುಂದೆ ಮತ್ತು ಬಾಳೆ ಮರದ ರೆಂಬೆಗಳ ಮೇಲೆ ಮಣ್ಣಿನ ಹಣತೆಗಳನ್ನು ಹೊತ್ತಿಸಿ ಇರಿಸಲಾಗುವುದು. ಕಣಜದ ಹೊರಗೆ, ಹಿತ್ತಲು ಮತ್ತು ಭತ್ತದ ಗದ್ದೆಗಳಲ್ಲಿ ಸಹ ಹಣತೆಗಳನ್ನು ಹಚ್ಚಿ ಇಡುವರು. ಹೆಂಗಸರು ಮತ್ತು ಮಕ್ಕಳು ತುಳಸಿಗೆ ನಮಸ್ಕರಿಸಿ ಸರಳ ಗೀತೆಗಳನ್ನು ಹಾಡುವರು.

ತುಳಸಿಯ ಗಿಡದ ತಳದಲ್ಲಿ
ಮೇಯುತಿದೆ ಜಿಂಕೆ
ಜಿಂಕೆಯ ನೋಡಿದ ರಾಮಚಂದ್ರ
ಬಿಲ್ಲು ಬಾಣವನು ಕೈಗೆತ್ತಿಕೊಂಡ....

ಭತ್ತದ ಫಸಲಿನ ರಕ್ಷಣೆಗಾಗಿ ಕೆಲವು ಜನರು ಭತ್ತದ ಗದ್ದೆಯಲ್ಲಿ ಕೆಲವು ವಿಧಿಗಳನ್ನು ನೆರವೇರಿಸುವರು. ಕೆಲವು ವೇಳೆ ಇದಕ್ಕಾಗಿ ಅವರು ವೈದ್ಯರ ನೆರವು ಪಡೆಯುವುದುಂಟು.

ಬೀರೇಂದ್ರನಾಥ್ ದತ್ತ



ರಥ ಯಾತ್ರೆ

ಹಬ್ಬ ಹರಿದಿನಗಳು ಅತ್ಯಧಿಕ ಸಂಖ್ಯೆಯಲ್ಲಿ ಜನರನ್ನು ಒಂದೆಡೆ ಸೇರುವಂತೆ ಮಾಡುತ್ತವೆ. ಈ ಸಂದರ್ಭದಲ್ಲಿ ಜನರು ಸಡಗರ-ಸಂಭ್ರಮಗಳಿಂದ ಮತ್ತು ಭಕ್ತಿ ಭಾವದಿಂದ ನಲಿದಾಡುತ್ತಾರೆ. ಈ ಸಂತಸ-ಸಂಭ್ರಮಗಳೊಂದಿಗೆ ದೈಹಿಕ ಶಕ್ತಿಯನ್ನು ಸಹ ಬಳಸಲು ಅವಕಾಶವಿರುವ ಒಂದು ಹಬ್ಬವಿದೆ. ಅದು ಒರಿಸ್ಸಾದ ಪುರಿಯಲ್ಲಿ ನಡೆಯುವ ಜಗನ್ನಾಥನ ರಥೋತ್ಸವ. ಈ ಹಬ್ಬದಲ್ಲಿ ಭಕ್ತಾದಿಗಳು ದೇವರುಗಳನ್ನು ಹೊತ್ತ ಬೃಹತ್ ರಥಗಳನ್ನು ಎಳೆಯುತ್ತಾರೆ. ಮೂರು ಕಿಲೋಮೀಟರ್‌ಗಳಿಗೂ ಹೆಚ್ಚು ದೂರದವರೆಗೆ ಅವರು ಈ ರಥಗಳನ್ನು ಎಳೆದೊಯ್ಯುತ್ತಾರೆ.

ರಥ ಯಾತ್ರೆ ನಡೆಸುವ ಈ ಹಬ್ಬ ಪುರಿಯಲ್ಲಿ ಎಷ್ಟೋ ಹಿಂದಿನಿಂದಲೂ ನಡೆದುಕೊಂಡು ಬರುತ್ತಿದೆ. ಈಗ ಈ ಹಬ್ಬ ಪುರಿ ಪಟ್ಟಣಕ್ಕಷ್ಟೇ ಸೀಮಿತಗೊಂಡಿಲ್ಲ. ಇದು ಈಗ ಭಾರತದ ಅನೇಕ ನಗರಗಳು ಮತ್ತು ಪಟ್ಟಣಗಳಲ್ಲಿ ಮಾತ್ರವಲ್ಲದೆ, ಹೊರದೇಶಗಳಲ್ಲೂ ಆಚರಿಸಲ್ಪಡುತ್ತಿದೆ. ಹಿಂದೂ ಪಂಚಾಂಗದ ಪ್ರಕಾರ,

ಆಷಾಢಮಾಸದ ಶುಕ್ಲಪಕ್ಷದ ಎರಡನೆಯ ದಿನ ಅಂದರೆ ಜೂನ್-ಜುಲೈ ತಿಂಗಳ ಅವಧಿಯಲ್ಲಿ ಈ ರಥೋತ್ಸವ ನಡೆಯುತ್ತದೆ.

ರಥಗಳನ್ನು ಎಳೆಯುವಾಗ ಭಕ್ತಾದಿಗಳ "ಜೈ ಜಗನ್ನಾಥ್" ಎಂಬ ಘೋಷಣೆ ಗಗನ ಮುಟ್ಟುತ್ತದೆ. ನಗಾರಿ, ಜಾಗಟೆ, ಗಂಟೆ ಹಾಗೂ ಅನೇಕ ಬಗೆಯ ವಾದ್ಯಗಳ ಮಧುರ ನಿನಾದ ಎಲ್ಲೆಡೆ ಪ್ರತಿಧ್ವನಿಸುತ್ತದೆ. ಇಂತಹ ಸಂಭ್ರಮೋಲ್ಲಾಸಗಳ ಹಿನ್ನೆಲೆಯಲ್ಲಿ ಜಗನ್ನಾಥ ದೇವರನ್ನು ಅಣ್ಣ ಬಲಭದ್ರ ಮತ್ತು ತಂಗಿ ಸುಭದ್ರಳ ಸಮೇತ, ಅವನ ಸ್ಥಾನವಾದ ಗುಂಡಿಚಘರ್‌ಗೆ ಒಯ್ಯಲಾಗುತ್ತದೆ. ಈ ಮೂವರು ದೇವ-ದೇವತೆಗಳನ್ನು ಪ್ರತ್ಯೇಕ ರಥಗಳಲ್ಲಿ ಒಯ್ಯಲಾಗುವುದು.

ಈ ದೇವರ ವಿಗ್ರಹಗಳು ಗುಂಡಿಚಘರ್‌ದಲ್ಲಿ ಹದಿನೈದು ದಿನಗಳ ಕಾಲ ಇರುತ್ತವೆ. ಅನಂತರ ಅವುಗಳನ್ನು ಅದೇ ರೀತಿಯ ಸಂಭ್ರಮ-ಸಡಗರಗಳಿಂದ ದೇವಾಲಯಕ್ಕೆ ಮರಳಿ ಕರೆದೊಯ್ಯಲಾಗುತ್ತದೆ. ಈ ಮೂರು ವಿಗ್ರಹಗಳನ್ನು ಪುರಿಯಲ್ಲಿ ತಾತ್ಕಾಲಿಕವಾಗಿ ಇಡುವ ಸ್ಥಳವನ್ನು 'ಗುಂಡಿಚಘರ್' ಎಂದು ಹೇಗೆ ಕರೆಯಲಾಗುವುದೋ, ಬೇರೆ ಊರುಗಳಲ್ಲೂ ಆ ಸ್ಥಳವನ್ನು ಅದೇ ಹೆಸರಿನಿಂದ ಕರೆಯಲಾಗುತ್ತದೆ.

ಪುರಿಯಲ್ಲಿರುವ ಗುಂಡಿಚಘರ್, ರಾಣಿ ಗುಂಡಿಚಳ ಆವಾಸ ಸ್ಥಾನವಾಗಿತ್ತು. ಇದೇ ಸ್ಥಳದಲ್ಲಿ ಕುಶಲಕರ್ಮಿಯೊಬ್ಬನು, ಯಾರ ಕಣ್ಣಿಗೂ ಕಾಣಿಸಿಕೊಳ್ಳದಂತೆ ಜಗನ್ನಾಥ ವಿಗ್ರಹವನ್ನು ಕೆತ್ತಿದ್ದನು. ಈ ವಿಗ್ರಹವನ್ನು ಮರದ ದಿಮ್ಮಿಯೊಂದರಿಂದ ಕೆತ್ತಲಾಗಿತ್ತು. ಒರಿಸ್ಸಾದಲ್ಲಿ ಮತ್ತು ಭಾರತದ ಇತರ ಎಲ್ಲ ಸ್ಥಳಗಳಲ್ಲಿರುವ ಪ್ರಾಚೀನ ಕಾಲದ ದೇವಾಲಯಗಳಲ್ಲಿ ದೇವರ ವಿಗ್ರಹವನ್ನು ಶಿಲೆಯಲ್ಲಿ ಕಡೆದಿರುವಾಗ, ಜಗನ್ನಾಥನ ವಿಗ್ರಹವನ್ನು ಮಾತ್ರ, ಏಕೆ ಮರದಲ್ಲಿ ಕೆತ್ತಲಾಗಿದೆ ಎಂಬುದೊಂದು ಪ್ರಶ್ನೆ.

ಇದನ್ನು ತಿಳಿಸುವಂತಹ ಒಂದು ಕಥೆ ಇದೆ. ಬಹಳ ಹಿಂದೆ ಇಂದ್ರದ್ಯುಮ್ನನೆಂಬ ಒಬ್ಬ ರಾಜನಿದ್ದ. ಅವನು ತುಂಬ ಧರ್ಮಿಷ್ಠನಾಗಿದ್ದ. ಒಮ್ಮೆ ಅವನ ಮನಸ್ಸಿನಲ್ಲಿ ಒಂದು ವಿಚಿತ್ರ ಭಾವನೆ ಹುಟ್ಟಿಕೊಂಡಿತು. ಭಗವಾನ್ ವಿಷ್ಣುವಿನ ಜೀವಂತ ಸಾನ್ನಿಧ್ಯವುಳ್ಳ ಒಂದು ವಿಗ್ರಹವನ್ನು ಪುರಿಗೆ ಅತಿ ಸಮೀಪದಲ್ಲೇ ಅಡಗಿಸಿಡಲಾಗಿದೆ. ಅದರಲ್ಲಿರುವ ವಿಷ್ಣುವಿನ ಸಾನ್ನಿಧ್ಯವನ್ನು ಸಮಸ್ತರಿಗೂ ಬಹಿರಂಗಪಡಿಸಬೇಕಾದ ಸಮಯ ಈಗ ಬಂದಿದೆ ಎಂಬುದೇ ಆ ರಾಜನಲ್ಲಿ ಬೇರೂರಿದ್ದ ಭಾವನೆಯಾಗಿತ್ತು. ಇಂದ್ರದ್ಯುಮ್ನನಲ್ಲಿ ಈ ಭಾವನೆ ಎಷ್ಟು ಪ್ರಬಲವಾಗಿತ್ತೆಂದರೆ, ದೇವರ ವಿಗ್ರಹವನ್ನು ತಯಾರಿಸುವುದಕ್ಕೆ ಅಥವಾ ದೊರೆಯುವುದಕ್ಕೆ ಮುಂಚೆಯೇ ಅವನು ಒಂದು ಅದ್ಭುತ ದೇವಾಲಯವನ್ನು

ನಿರ್ಮಿಸತೊಡಗಿದ. (ದೇವರ ವಿಗ್ರಹವನ್ನು ತಯಾರಿಸುವುದಕ್ಕೆ ಮೊದಲೇ ದೇವಸ್ಥಾನವನ್ನು ಕಟ್ಟಿಸುವುದು ಬಹಳ ಅಸಾಮಾನ್ಯ. ರಾಜ ಇಂದ್ರದ್ಯುಮ್ನ ದೇವರಿಗೆ ವಿಚಿತ್ರ ಪ್ರಾರ್ಥನೆ ಮಾಡುತ್ತಿದ್ದ: ತನ್ನ ಉತ್ತರಾಧಿಕಾರಿಗಳು, ತಾನು ಮಾಡಿರುವ ಒಳ್ಳೆಯ ಕೆಲಸಗಳು ಹಾಗೂ ತನ್ನ ಸಾಧನೆಗಳ ಬಗ್ಗೆಯೇ ಹೆಮ್ಮೆಪಟ್ಟುಕೊಳ್ಳುತ್ತಾ ಮುಂದೆ ಬೇರಾವ ಒಳ್ಳೆಯ ಕೆಲಸವನ್ನೂ ಮಾಡದೇ ಇರಬಹುದು. ಆದ್ದರಿಂದ ತನ್ನ ವಂಶ, ತನ್ನೊಂದಿಗೆ ಅಂತ್ಯಗೊಳ್ಳಬೇಕು ಎಂಬುದು ರಾಜನ ಪ್ರಾರ್ಥನೆಯಾಗಿತ್ತು).

ಬಚ್ಚಿಡಲಾಗಿದ್ದ ವಿಗ್ರಹವನ್ನು ಹುಡುಕಿ ತರಲು ದೊರೆ, ನಾಲ್ವರು ಪಂಡಿತರುಗಳನ್ನು ನಾಲ್ಕು ದಿಕ್ಕುಗಳಿಗೆ ಕಳಿಸಿಕೊಟ್ಟನು. ಅವರಲ್ಲಿ ಅತಿ ಚಿಕ್ಕವಯಸ್ಸಿನ ವಿದ್ಯಾಪತಿ ಎಂಬ ಬ್ರಾಹ್ಮಣನಿಗೆ ಕಾಡಿನಲ್ಲಿ ದಾರಿ ತಪ್ಪಿ ಅವನು ವಿಶ್ವಾವಸು ಎಂಬ ಬುಡಕಟ್ಟು ನಾಯಕನಿದ್ದ ಮನೆಗೆ ಬಂದನು. ಅಲ್ಲಿ ವಿದ್ಯಾಪತಿ ಅಸ್ವಸ್ಥನಾದನು. ವಿಶ್ವಾವಸುಗೆ ಲೋಲಿತ ಎಂಬ ಮಗಳಿದ್ದಳು. ಅವಳು ತುಂಬ ರೂಪವತಿಯಾಗಿದ್ದಳು. ಅಸ್ವಸ್ಥನಾಗಿದ್ದ ಬ್ರಾಹ್ಮಣನನ್ನು ಚೆನ್ನಾಗಿ ಉಪಚರಿಸಿ, ಅವನು ಗುಣಮುಖನಾಗುವಂತೆ ಮಾಡಿದಳು. ಕ್ರಮೇಣ, ಈ ಬ್ರಾಹ್ಮಣ ಅವಳಲ್ಲಿ ಅನುರಕ್ತನಾಗಿ, ಅವಳನ್ನು ವಿವಾಹವಾದನು.

ಆದರೂ, ವಿದ್ಯಾಪತಿ ತನಗೆ ವಹಿಸಿದ್ದ ಕೆಲಸವನ್ನು ಮರೆತಿರಲಿಲ್ಲ. ವಿಶ್ವಾವಸು ಪ್ರತಿ ದಿನ ಸೂರ್ಯೋದಯಕ್ಕೆ ಮುಂಚೆ, ಒಂದು ಬೊಗಸೆ ಹೂವನ್ನು ಹಿಡಿದು ಒಂದು ಗಂಟೆಯ ಕಾಲ ಕಾಡಿನಲ್ಲಿ ಕಣ್ಮರೆಯಾಗುತ್ತಿದ್ದನು. ಎಂತಹ ಮಳೆ-ಗಾಳಿ ಬರಲಿ, ಅವನು ಈ ಕೆಲಸ ಮಾಡಲು ಎಂದೂ ತಪ್ಪುತ್ತಿರಲಿಲ್ಲ.

ಒಂದು ದಿನ, ವಿದ್ಯಾಪತಿ ಲೋಲಿತಳನ್ನು ಕುರಿತು "ಪ್ರತಿ ದಿನ ಮುಂಜಾನೆ ನಿಮ್ಮ ತಂದೆ ಕಾಡಿನಲ್ಲಿ ಎಲ್ಲಿಗೆ ಹೋಗ್ತಾರೆ?" ಎಂದು ಪ್ರಶ್ನಿಸಿದ.

"ಈ ವಿಷಯವನ್ನು ನಾನು ಯಾರಿಗೂ ಹೇಳುವ ಹಾಗಿಲ್ಲ. ಆದರೆ ಇದನ್ನು ನಿನ್ನಿಂದ ಹೇಗೆ ಮುಚ್ಚಿಡಲಿ?" ಎನ್ನುತ್ತಾ ಅವಳು ಹೀಗೆ ಹೇಳಿದಳು: "ಕಾಡಿನೊಳಗೆ ಒಂದು ಗುಹೆಯಿದೆ. ಆದರೆ ಆ ಗುಹೆಯನ್ನು ಪ್ರವೇಶಿಸುವ ಅವಕಾಶ ಯಾರಿಗೂ ಇಲ್ಲ. ಅದರೊಳಗೆ ನಮ್ಮ ಕುಲದೇವರಾದ ನೀಲಮಾಧವನ ವಿಗ್ರಹವಿದೆ. ಈ ವಿಗ್ರಹವನ್ನು ಆರಾಧಿಸುವ ಹಕ್ಕು ನಮ್ಮ ತಂದೆಗೆ ಮಾತ್ರ ಇದೆ. ಇದಕ್ಕೆ ಮೊದಲು, ಈ ವಿಗ್ರಹವನ್ನು ಅವರ ತಂದೆ ಮತ್ತು ತಾತ ಮಾತ್ರ ಪೂಜಿಸುತ್ತಿದ್ದರು."

ವಿದ್ಯಾಪತಿಗೆ ಆ ಗುಹೆಗೆ ಹೋಗುವ ಆಸೆಯುಂಟಾಯಿತು. ಆಗ ತನ್ನ ಪತಿಯನ್ನು ಗುಹೆಗೆ ಕರೆದೊಯ್ಯುವಂತೆ ಲೋಲಿತ ತಂದೆಯನ್ನು ಕೇಳಿಕೊಂಡಳು. ಕಣ್ಣಿಗೆ ಬಟ್ಟೆಯನ್ನು

ಕಟ್ಟಿಕೊಂಡು ಬಂದಲ್ಲಿ ಮಾತ್ರ ವಿದ್ಯಾಪತಿಯನ್ನು ಗುಹೆಯೊಳಕ್ಕೆ ಕರೆದೊಯ್ಯಲು ವಿಶ್ವಾವಸು ಒಪ್ಪಿದನು. ವಿದ್ಯಾಪತಿಯೂ ಈ ಷರತ್ತಿಗೆ ಒಪ್ಪಿಕೊಂಡನು. ಅವನು ತನ್ನನ್ನು ಕರೆದೊಯ್ಯುತ್ತಿದ್ದ ವಿಶ್ವಾವಸುವಿಗೆ ತಿಳಿಯದ ಹಾಗೆ, ಗುಹೆಯತ್ತ ಹೋಗುವ ರಸ್ತೆಯುದ್ದಕ್ಕೂ ಒಂದು ಹಿಡಿ ಸಾಸಿವೆಯನ್ನು ಉದುರಿಸಿಕೊಂಡು ಹೋದನು.

ಗುಹೆಯನ್ನು ಪ್ರವೇಶಿಸಿದ ಬಳಿಕ ವಿದ್ಯಾಪತಿಯ ಕಣ್ಣಿಗೆ ಕಟ್ಟಿದ್ದ ಬಟ್ಟೆಯನ್ನು ಬಿಚ್ಚಲಾಯಿತು. ಅಲ್ಲಿ ವಿಗ್ರಹವನ್ನು ಕಾಣುವುದಕ್ಕೆ ಮುಂಚೆಯೇ, ವಿದ್ಯಾಪತಿಗೆ ವಿಷ್ಣುದರ್ಶನವಾಯಿತು. ಇದೇ ಪುರಿಯ ದೊಡ್ಡ ದೇವಾಲಯದಲ್ಲಿ ಪ್ರತಿಷ್ಠಾಪಿಸಬೇಕಾಗಿರುವಂತಹ ವಿಗ್ರಹವೆಂಬುದು ಅವನಿಗೆ ಮನವರಿಕೆಯಾಯಿತು.

ಕೆಲವು ದಿನಗಳು ಸಂದವು. ವಿದ್ಯಾಪತಿಯು ವಿಶ್ವಾವಸು ಮತ್ತು ಲೋಲಿತಳಿಂದ ಬೀಳ್ಕೊಂಡನು. ಶೀಘ್ರದಲ್ಲೇ ವಾಪಸಾಗುವುದಾಗಿ ಅವನು ಅವರಿಗೆ ಆಶ್ವಾಸನೆ ನೀಡಿದನು. ಮುಂಗಾರು ಮಳೆ ಆಗ ತಾನೇ ಆರಂಭವಾಗಿತ್ತು. ಅವನು ದಾರಿಯುದ್ದಕ್ಕೂ ಉದುರಿಸಿಕೊಂಡು ಹೋಗಿದ್ದ ಸಾಸಿವೆ ಕಾಳುಗಳು ಮೊಳಕೆಯೊಡೆದಿದ್ದವು. ಇದರಿಂದ ಅವನಿಗೆ ಗುಹೆಗೆ ಹೋಗುವ ದಾರಿ ತಿಳಿಯಿತು. ಗುಹೆಯೊಳಗೆ ಹೋಗಿ ಅಲ್ಲಿದ್ದ ಸಣ್ಣ ವಿಗ್ರಹವನ್ನು ತೆಗೆದುಕೊಂಡು, ಅವನು ಪುರಿಯತ್ತ ಪಯಣ ಬೆಳೆಸಿದನು. ಮರುದಿನ ಬೆಳಿಗ್ಗೆ ಎಂದಿನಂತೆ ವಿಶ್ವಾವಸು ಗುಹೆಯೊಳಗೆ ಹೋದನು. ಆದರೆ ಅಲ್ಲಿದ್ದ ವಿಗ್ರಹ ಕಣ್ಮರೆಯಾಗಿದ್ದುದನ್ನು ಕಂಡು ಅವನು ವಿಸ್ಮಿತನಾದನು.

ವಿದ್ಯಾಪತಿ ವಿಗ್ರಹವನ್ನು ತಂದಾಗ, ರಾಜ ಇಂದ್ರದ್ಯುಮ್ನನ ಸಂತೋಷಕ್ಕೆ ಪಾರವಿರಲಿಲ್ಲ. ಇದನ್ನು ಇನ್ನೊಂದು ದೊಡ್ಡ ವಿಗ್ರಹದೊಳಗಿರಿಸಲು ರಾಜ ಬಯಸಿದನು. ಆದರೆ ಹೊಸ ವಿಗ್ರಹದ ಆಕೃತಿ ಅಥವಾ ಸ್ವರೂಪ ಹೇಗಿರಬೇಕೆಂಬುದು ರಾಜನ ಮುಂದಿದ್ದ ಪ್ರಶ್ನೆಯಾಗಿತ್ತು.

ಈ ಹೊಸ ವಿಗ್ರಹವನ್ನು ಮರದಲ್ಲೇ ತಯಾರಿಸಬೇಕು. ಸಮುದ್ರದ ಅಲೆಗಳು ಕೊಚ್ಚಿಕೊಂಡು ಬಂದು ದಡದ ಸಮೀಪ ಹಾಕಿದ್ದ ಮರದ ದಿಮ್ಮಿಯೊಂದರಿಂದಲೇ ಈ ವಿಗ್ರಹ ತಯಾರಾಗಬೇಕು ಎಂದು ಇಂದ್ರದ್ಯುಮ್ನನ ಕನಸಿನಲ್ಲಿ ತಿಳಿಸಲಾಯಿತು. ಅನಂತರ ರಾಜನ ಸೇವಕರು ಸಮುದ್ರದ ಬಳಿ ಹೋಗಿ, ಮರದ ದಿಮ್ಮಿಯನ್ನು ತರಲು ಪ್ರಯತ್ನಿಸಿದರು. ದಡದ ಸಮೀಪದಿಂದ ಅದನ್ನು ದಡಕ್ಕೆ ತರಲು ಅವರು ಎಷ್ಟೇ ಪ್ರಯತ್ನಿಸಿದರೂ ಅವರ ಶ್ರಮ ಫಲಕಾರಿಯಾಗಲಿಲ್ಲ.

ಇದರಿಂದ ರಾಜನಿಗೆ ತುಂಬ ದುಃಖವಾಯಿತು. ಏನೂ ತೋಚದೆ ರಾಜನು

ದೇವರನ್ನು ನೆನೆದು ಧ್ಯಾನಮಗ್ನನಾಗಿದ್ದಾಗ, ಅವನಿಗೆ ಬುಡಕಟ್ಟು ನಾಯಕ ವಿಶ್ವಾವಸು ಕಾಣಿಸಿಕೊಂಡನು. ವಿಶ್ವಾವಸು ತುಂಬ ವ್ಯಸನದಲ್ಲಿದ್ದಂತೆ ಭಾಸವಾಯಿತು. ವಿಶ್ವಾವಸುವನ್ನು ಈ ಸ್ಥಿತಿಯಲ್ಲಿ ಕಂಡ ಕೂಡಲೇ, ರಾಜನು ಅರಣ್ಯಕ್ಕೆ ಹೋಗಿ, ಅವನ ಕ್ಷಮೆ ಕೋರಿದನು. ಈ ವಿಗ್ರಹವನ್ನು ಪುರಿಗೆ ಒಯ್ಯಲಾಗಿರುವುದರಿಂದ, ದೈವೇಚ್ಛೆ ನೆರವೇರಿದೆಯೆಂಬುದು ವಿಶ್ವಾವಸುವಿಗೆ ಮನವರಿಕೆಯಾಯಿತು.

ವಿಶ್ವಾವಸುವಿನ ಸಹಾಯದಿಂದ ಮರದ ದಿಮ್ಮಿ ತನ್ನಷ್ಟಕ್ಕೆ ತಾನೇ ದಡದ ಮೇಲೆ ಬಂದಿತು!

ಈಗ ರಾಜ ಇಂದ್ರದ್ಯುಮ್ನನಿಗೆ ಹೊಸ ವಿಗ್ರಹದ ಆಕಾರ ಹೇಗಿರಬೇಕು ಎಂಬುದರ ಚಿಂತೆ ಆರಂಭವಾಯಿತು. ಆ ರಾಜ್ಯದ ನುರಿತ ಕುಶಲಕರ್ಮಿಗಳು ಮತ್ತು ಶಿಲ್ಪಿಗಳನ್ನು ಕರೆಸಲಾಯಿತು. ಶಿಲೆಯಲ್ಲಿ ಅಥವಾ ಲೋಹದಲ್ಲಿ ಮಾತ್ರ ವಿಗ್ರಹವನ್ನು ತಾವು ಕೆತ್ತಬಲ್ಲರೇ ಹೊರತು ಮರದ ದಿಮ್ಮಿಯಿಂದ ವಿಗ್ರಹವನ್ನು ಮಾಡಲು ತಮಗೆ ಬರುವುದಿಲ್ಲವೆಂದು ಕುಶಲಕರ್ಮಿಗಳು ಹೇಳಿದರು!

ಆ ಹೊತ್ತಿಗೆ ಸರಿಯಾಗಿ ಅಪರಿಚಿತ ವೃದ್ಧನೊಬ್ಬ ಅಲ್ಲಿಗೆ ಬಂದ. ಅವನ ಬೆನ್ನು ಬಾಗಿತ್ತು. ನೋಡಲು ತುಂಬ ವಿಕಾರವಾಗಿದ್ದ. ಆ ವೃದ್ಧ, ಆ ಮರದ ದಿಮ್ಮಿಯಿಂದ ತಾನು ವಿಗ್ರಹವನ್ನು ತಯಾರಿಸಿಕೊಡುವುದಾಗಿ ಹೇಳಿದ. ಆದರೆ ಕೆಲಸ ಪೂರ್ತಿಯಾಗುವವರೆಗೂ ಯಾರೂ ಮಧ್ಯೆ ಪ್ರವೇಶಿಸಿ, ತನಗೆ ತೊಂದರೆ ಕೊಡಬಾರದೆಂಬ ಷರತ್ತನ್ನು ಹಾಕಿದನು. ಆ ವೃದ್ಧನ ಕಣ್ಣುಗಳಲ್ಲಿ ಮತ್ತು ಧ್ವನಿಯಲ್ಲಿದ್ದ ವಿಶೇಷತೆ ರಾಜನ ಮನಸೆಳೆದು, ಅವನು ಆ ಷರತ್ತಿಗೆ ಒಪ್ಪಿಕೊಂಡನು.

ಆದರೂ ಇಂದ್ರದ್ಯುಮ್ನನ ಪತ್ನಿ ರಾಣಿ ಗುಂಡಿಚದೇವಿಗೆ ಒಂದು ರೀತಿಯ ಕುತೂಹಲವುಂಟಾಯಿತು. ಆಕೆ ಪ್ರತಿ ದಿನ ಮರಗೆಲಸ ನಡೆಯುತ್ತಿದ್ದ ಕೋಣೆಯ ಬಾಗಿಲಿಗೆ ಕಿವಿಯನ್ನು ಆನಿಸಿಕೊಂಡು ಸುತ್ತಿಗೆ ಮತ್ತು ಉಳಿಯ ಹೊಡೆತದ ಶಬ್ದಗಳನ್ನು ಕೇಳಿಸಿಕೊಳ್ಳುತ್ತಿದ್ದಳು. ಒಂದು ದಿನ ಕೋಣೆಯಿಂದ ಯಾವುದೇ ಶಬ್ದವೂ ಕೇಳಿಬರಲಿಲ್ಲ. ಅದರ ಮರು ದಿನವೂ ಯಾವ ಶಬ್ದವೂ ಇಲ್ಲದೆ ಶಾಂತತೆ ಆವರಿಸಿತ್ತು. ಇದರಿಂದ ರಾಣಿಗೆ ತುಂಬ ಕಳವಳವಾಯಿತು. ವೃದ್ಧನು ಕೋಣೆಯೊಳಗೆ ಸತ್ತುಹೋಗಿದ್ದಾನೆಯೋ ಏನೋ ಎಂಬ ಶಂಕೆ ಅವಳನ್ನು ಕಾಡತೊಡಗಿತು. ಆಕೆ ಬಾಗಿಲನ್ನು ನೂಕಿ, ಅದನ್ನು ತೆರೆದಳು. ಇದರಿಂದ ಚಕಿತಗೊಂಡ ವೃದ್ಧನು ತಲೆಯೆತ್ತಿ ನೋಡಿದನು. ತಕ್ಷಣವೇ ಅವನು ಅಲ್ಲಿಂದ ಕಣ್ಮರೆಯಾದನು. ಅಲ್ಲಿಗೆ ಅವನ ಮರಗೆಲಸ ಅಪೂರ್ಣವಾಯಿತು.

ಆ ವೃದ್ಧ ಬೇರಾರೂ ಆಗಿರದೆ, ವಿಶ್ವಕರ್ಮನೇ ಆಗಿದ್ದ. ದೇವರ ವಿಗ್ರಹಗಳನ್ನು ಕೆತ್ತುವ, ದೈವ ನಿಯಮಿತ ಶಿಲ್ಪಿಯೇ ಆಗಿದ್ದ.

ವಿಗ್ರಹ ಹೇಗೆ ಅಪೂರ್ಣವಾಗಿತ್ತೋ ಅದೇ ಸ್ಥಿತಿಯಲ್ಲಿ ಆ ವಿಗ್ರಹವನ್ನು ಪ್ರತಿಷ್ಠಾಪಿಸಲು ರಾಜ ನಿರ್ಧರಿಸಿದನು. ನೀಲಮಾಧವನನ್ನು ಆ ವಿಗ್ರಹದ 'ನವಿಪದ್ಮ' ಅಂದರೆ ಹೊಕ್ಕಳೊಳಗೆ ಕೂಡಿಸಲಾಯಿತು. ನೀಲಮಾಧವನಿಗೆ 'ಪುರುಷೋತ್ತಮ' ಎಂಬ ಹೆಸರು ಬಂದಿತು. ಕಾಲ ಸಂದಂತೆ ಜನರು ಅವನನ್ನೇ 'ಜಗನ್ನಾಥ' ಎಂದು ಕರೆಯತೊಡಗಿದರು. ಇವತ್ತಿಗೂ ಸಾಮಾನ್ಯವಾಗಿ ಹನ್ನೆರಡು ವರ್ಷಗಳಿಗೊಮ್ಮೆಯಂತೆ, ಹಳೆಯ ಮರದ ವಿಗ್ರಹವನ್ನು ಹೂತಿಡಲಾಗುವುದು. ಅದರ ಸ್ಥಾನದಲ್ಲಿ ಹೊಸ ವಿಗ್ರಹವನ್ನು ಪ್ರತಿಷ್ಠಾಪಿಸಲಾಗುವುದು. ಹೊಕ್ಕಳನ್ನು, ಯಾರ ಕಣ್ಣಿಗೂ ಬೀಳದ ರೀತಿಯಲ್ಲಿ ಹೊಸ ವಿಗ್ರಹಕ್ಕೆ ವರ್ಗಾಯಿಸಲಾಗುವುದು. ಅರ್ಚಕರು ಸಹ ಕಣ್ಣು ಮುಚ್ಚಿಕೊಂಡೇ, ಹೊಕ್ಕಳನ್ನು ಹೊಸ ವಿಗ್ರಹಕ್ಕೆ ಸೇರಿಸುತ್ತಾರೆ.

ವಿದ್ಯಾಪತಿಯು ಶ್ರೀ ಜಗನ್ನಾಥನ ಅತಿ ಮುಖ್ಯ ಆರಾಧಕನಾದ. ಅಷ್ಟೇ ಅಲ್ಲದೆ, ಅವನ ಮಕ್ಕಳು ಹಾಗೂ ಬುಡಕಟ್ಟು ಕುಲಕ್ಕೆ ಸೇರಿದ ರಾಜಕುಮಾರಿ ಲೋಲಿತ ಮತ್ತು ಅವರ ಸಂತತಿಯವರೆಲ್ಲರೂ ಜಗನ್ನಾಥನ ಆರಾಧಕರಾದರು. ಈ ಸಂತತಿಯವರನ್ನು ದೈತಪತಿಗಳೆಂದು ಕರೆಯಲಾಗುತ್ತದೆ. ಅಂತರ್ಜಾತಿಯ ವಿವಾಹದ ಮೂಲಕ ಆರಂಭವಾದ ಈ ಸಂತತಿಗೆ ತನ್ನದೇ ಆದ ಐತಿಹ್ಯವಿದೆ.


ಮೂಲತಃ ಶ್ರೀ ಜಗನ್ನಾಥನು ಪುರಿ ದೇವಾಲಯದ ಏಕೈಕ ದೇವರಾಗಿದ್ದನೆಂಬುದು ಪುರಾಣೇತಿಹಾಸದಿಂದ ವೇದ್ಯವಾಗುತ್ತದೆ. ಆದರೆ ಜಗನ್ನಾಥನ ಪಕ್ಕದಲ್ಲಿ ಬಲಭದ್ರ ಮತ್ತು ಸುಭದ್ರರ ಎರಡು ವಿಗ್ರಹಗಳನ್ನು ಯಾವಾಗ ಪ್ರತಿಷ್ಠಾಪಿಸಲಾಯಿತೆಂಬುದು ಇನ್ನೂ ತಿಳಿದು ಬಂದಿಲ್ಲ.

ಶ್ರೀ ಜಗನ್ನಾಥ ವಿಷ್ಣುವಿನ ಮತ್ತು ಕೃಷ್ಣನ ಒಂದು ಸ್ವರೂಪ. ಕೃಷ್ಣಾವತಾರ ತುಂಬ ಜನಪ್ರಿಯವಾಗಿರುವುದರಿಂದ ಪುರಿಯಲ್ಲಿ ಶಾಸ್ತ್ರೋಕ್ತವಾಗಿ ನಡೆಯುವ ಅನೇಕ ವಿಧಿಗಳು ಶ್ರೀಕೃಷ್ಣನ ಜೀವನಕ್ಕೆ ಸಂಬಂಧಪಟ್ಟವಾಗಿವೆ. ಆದ್ದರಿಂದ ಪ್ರತಿ ವರ್ಷ ಪುರಿಯಲ್ಲಿ ನಡೆಯುವ ರಥೋತ್ಸವ ಶ್ರೀಕೃಷ್ಣನು ಗೋಕುಲದಿಂದ ಮಥುರಾಗೆ ಮಾಡಿದ ಪ್ರಯಾಣದ ಸಂಕೇತವಾಗಿರುತ್ತದೆ.

ರಥ ಯಾತ್ರೆ ನಡೆಸುವ ಪದ್ಧತಿ ಯಾವಾಗ ಆರಂಭವಾಯಿತೆಂಬುದು ನಮಗೆ ಸರಿಯಾಗಿ ತಿಳಿಯದು. ಈ ರಥೋತ್ಸವ ಪದ್ಧತಿ ಆರಂಭವಾಗಿ ಒಂದು ಸಾವಿರ

ವರ್ಷಗಳಿಗೂ ಹೆಚ್ಚು ಕಾಲವಾಗಿದೆಯೆಂದು ದಾಖಲೆಗಳಿಂದ ತಿಳಿದುಬರುತ್ತದೆ. ಈಗಿರುವ ಸುಂದರ ದೇವಾಲಯವನ್ನು ಹನ್ನೆರಡನೆಯ ಶತಮಾನದಲ್ಲಿ ಗಂಗ ದೊರೆಗಳು ಸ್ಥಾಪಿಸಿದರು. ಈ ದೇವಾಲಯದ ಸ್ಥಾಪನೆಯಲ್ಲಿ ಚೋಳ ಗಂಗದೇವ ಅತಿ ಮುಖ್ಯ ಪಾತ್ರ ವಹಿಸಿದನೆಂದು ನಮಗೆ ಗೊತ್ತಿದೆ. ಆದರೂ ಅದೇ ಸ್ಥಳದಲ್ಲಿ ಬೇರೊಂದು ದೇವಾಲಯ ಯಾವಾಗ ಸ್ಥಾಪಿತವಾಯಿತೆಂಬುದು ನಮಗೆ ಇನ್ನೂ ಗೊತ್ತಾಗಿಲ್ಲ.

ಅನೇಕ ದೇವಾಲಯಗಳು ಈಗ ತಮ್ಮ ಪ್ರಾಮುಖ್ಯವನ್ನು ಕಳೆದುಕೊಂಡಿವೆ. ಈ ದೇವಾಲಯಗಳಲ್ಲಿ ಕಂಡುಬರುತ್ತಿದ್ದ ವೈಭವ ಮಾಯವಾಗುತ್ತಿದೆ. ಆದರೆ ಪುರಿಯಲ್ಲಿರುವ ದೇವಾಲಯದ ರಥ ಯಾತ್ರೆ ಮಾತ್ರ, ತನ್ನ ವೈಭವವನ್ನು ಕಳೆದುಕೊಂಡಿಲ್ಲ. ಅಲ್ಲಿಯ ರಥೋತ್ಸವ ಅದೇ ಸಂಭ್ರಮ-ಸಡಗರಗಳನ್ನು ಉಳಿಸಿಕೊಂಡುಬಂದಿದೆ. ಈಚಿನ ಕೆಲವು ವರ್ಷಗಳಿಂದ, ರಥ ಯಾತ್ರೆಗೆ ಸೇರುವ ಜನರ ಸಂಖ್ಯೆ ಎರಡೂವರೆ ಲಕ್ಷಕ್ಕೂ ಅಧಿಕವಾಗಿರುತ್ತದೆ. ಮುಂಚಿನ ಕಾಲದಲ್ಲಿ ಯಾವಾಗಲಾದರೂ ಒಮ್ಮೆ ಭಕ್ತಾದಿಗಳು ಶ್ರೀ ಜಗನ್ನಾಥನ ರಥದ ಚಕ್ರಗಳಿಗೆ ಮೈಯೊಡ್ಡಿ ಮಲಗಿಬಿಡುತ್ತಿದ್ದರು. ರಥದ ಹದಿನಾರು



ಚಕ್ರಗಳು ತಮ್ಮ ಮೈಮೇಲೆ ಹರಿದು ತಮಗೆ ಸಾವು ಬಂದರೆ, ನೇರ ಸ್ವರ್ಗ ಪ್ರಾಪ್ತಿಯಾಗುವುದೆಂಬ ನಂಬಿಕೆ ಅವರಿಗಿತ್ತು. ಇದಕ್ಕೆ ಇಂಗ್ಲಿಷ್‌ನಲ್ಲಿ 'ಜಗ್ಗರ್‌ನಾಟ್' (Juggernaut) ಎಂಬ ಶಬ್ದ ಬಳಕೆಯಲ್ಲಿದೆ. ಹಾಗೆಂದರೆ ಜಗನ್ನಾಥ ದೇವರ ರಥದ ಚಕ್ರಗಳಿಗೆ ಸಿಕ್ಕಿ ಪುಣ್ಯದ ಸಾವು ಪಡೆಯುವಂತಹ ಅಚಲ ಭಕ್ತಿಯ ಪ್ರದರ್ಶನ.

ಅನೇಕ ಪುರಾಣ ಗ್ರಂಥಗಳು ಮತ್ತು ಕಥೆಗಳಲ್ಲಿ ಜಗನ್ನಾಥನನ್ನು ಒಬ್ಬ ಮಿತ್ರ, ತತ್ವಜ್ಞಾನಿ ಹಾಗೂ ಮಾರ್ಗದರ್ಶಿಯನ್ನಾಗಿ ನಿರೂಪಿಸಲಾಗಿದೆ. ಹದಿನೈದನೆಯ ಶತಮಾನದಲ್ಲಿ ಕಳಿಂಗದ ರಾಜನಾಗಿದ್ದ ಪುರುಷೋತ್ತಮ ದೇವನಿಗೆ ಸಂಬಂಧಿಸಿದಂತೆ, ಸ್ವಾರಸ್ಯಕರವಾದ ಒಂದು ಕಥೆಯಿದೆ. (ಕಳಿಂಗ, ಅಕ್ಕಪಕ್ಕದ ಪ್ರದೇಶಗಳನ್ನೂ ಒಳಗೊಂಡಂತೆ ಇಂದಿನ ಒರಿಸ್ಸಾ ರಾಜ್ಯ).

ಕಿರಿಯ ರಾಜನಾದ ಈ ಪುರುಷೋತ್ತಮ ದೇವ ಒಮ್ಮೆ ದಕ್ಷಿಣ ಭಾರತದಲ್ಲಿ ಸಂಚರಿಸುತ್ತಿದ್ದ. ಆಗ, ಅವನು ಕಂಚಿಯ ರಾಜಕುಮಾರಿ ಪದ್ಮಾವತಿಯನ್ನು ಕಂಡನು. ಅವನು ಅವಳ ರೂಪಕ್ಕೆ ಮನಸೋತನು. ಮತ್ತು ಅವಳನ್ನು ವಿವಾಹವಾಗಲು ಬಯಸಿದನು. ತನ್ನ ಮನದ ಬಯಕೆಯನ್ನು ತಿಳಿಸಲು, ರಾಜನು, ಪದ್ಮಾವತಿಯ ತಂದೆಯ ಬಳಿಗೆ ಒಬ್ಬ ಪ್ರತಿನಿಧಿಯನ್ನು ಕಳಿಸಿದನು. ಆಕೆಯ ತಂದೆ, ತನ್ನ ಮಗಳನ್ನು ರಾಜನಿಗೆ ಕೊಟ್ಟು ಮದುವೆ ಮಾಡಲು ಒಪ್ಪಿಕೊಂಡನು. ವಿವಾಹ ಸಮಾರಂಭಕ್ಕಾಗಿ ಸಕಲ ಏರ್ಪಾಡುಗಳನ್ನೂ ಮಾಡಲು ಕಂಚಿಯ ಮಂತ್ರಿಯೊಬ್ಬನು ಪುರಿಗೆ ತೆರಳಿದನು.

ಅದು ರಥ ಯಾತ್ರೆಯ ಸಮಯವಾಗಿತ್ತು. ಇದಕ್ಕೆ ಸಂಬಂಧಿಸಿದ ಶಾಸ್ತ್ರೋಕ್ತ ವಿಧಿಗಳು ಆರಂಭವಾದವು. ರಥದ ಮೇಲೆ ದೇವರ ವಿಗ್ರಹವನ್ನು ಕೂಡಿಸಬೇಕಾದ ಜಾಗದಲ್ಲಿ ರಾಜನು ಕಸಗುಡಿಸಿದನು. ರಾಜನೂ ಸಹ ದೇವರ ಅತ್ಯಂತ ವಿನಮ್ರ ಸೇವಕನೆಂಬುದೇ ಈ ಕಸಗುಡಿಸುವುದರ ಸಂಕೇತ. (ಕಸ ಗುಡಿಸುವ ಈ ಪದ್ಧತಿ ಮುಂದುವರಿದುಕೊಂಡು ಬಂದಿದೆ. ಪುರಿಯಲ್ಲಿ ಹಿಂದೆ ಆಳಿದ ಅರಸರುಗಳ ವಂಶಸ್ಥರು ಇಂದಿಗೂ ಈ ಕಸಗುಡಿಸುವ ಕಾರ್ಯವನ್ನು ನೆರವೇರಿಸುತ್ತಾರೆ).

ಆದರೆ, ಅಲ್ಲಿಗೆ ಬಂದಿದ್ದ ಕಂಚಿಯ ಮಂತ್ರಿ, ಕಸಗುಡಿಸುವುದು ರಾಜನ ಘನತೆ ಗೌರವಗಳಿಗೆ ತಕ್ಕುದಲ್ಲವೆಂದು ಭಾವಿಸಿದನು. "ಕಸ ಗುಡಿಸುವ ರಾಜನನ್ನು ನಮ್ಮ ಅಳಿಯನನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ" ಎಂದು ಅವನು ತಮ್ಮ ಒಡೆಯನಿಗೆ ತಿಳಿಸಿದನು. ಮಂತ್ರಿಯ ಈ ಮಾತನ್ನು ಕೇಳಿ, ಕಂಚಿಯ ರಾಜ, ತನ್ನ ಮಗಳನ್ನು ಅವನಿಗೆ ಕೊಟ್ಟು ವಿವಾಹ ಮಾಡುವ ಆಲೋಚನೆಯನ್ನು ಕೈಬಿಟ್ಟನು. ಇದರಿಂದ ಕೆರಳಿದ

ಪುರುಷೋತ್ತಮ ದೇವ, ತಾನೇ ಕಂಚಿಯವರೆಗೆ ಹೋದನು. ಆದರೆ ಅವನನ್ನು ಅಲ್ಲಿ ಪರಾಭವಗೊಳಿಸಲಾಯಿತು. ಪುರುಷೋತ್ತಮದೇವ ಪುರಿಗೆ ಹಿಂದಿರುಗಿದನು. ಅಲ್ಲಿಗೆ ಬಂದ ಕೂಡಲೇ ಶ್ರೀ ಜಗನ್ನಾಥನಿಗೆ ದೀರ್ಘ ದಂಡ ನಮಸ್ಕಾರ ಹಾಕಿದನು. ತನಗೆ ಜಯವಾಗಬೇಕು ಇಲ್ಲವೇ ಸಾವು ಉಂಟಾಗಬೇಕು. ಇದರಲ್ಲಿ ಯಾವುದಾದರೂ ಒಂದನ್ನು ತನಗೆ ಅನುಗ್ರಹಿಸಬೇಕು ಎಂದು ಅವನು ದೇವರಲ್ಲಿ ಪ್ರಾರ್ಥಿಸಿದನು. ಜಗನ್ನಾಥನು ಅವನಿಗೆ ಕನಸಿನಲ್ಲಿ ಕಾಣಿಸಿಕೊಂಡು ಕಂಚಿಯ ರಾಜನ ಮೇಲೆ ನಡೆಸುವ ಹೋರಾಟದಲ್ಲಿ ಖಂಡಿತ ಗೆಲವು ದೊರೆಯುವುದೆಂಬ ಆಶ್ವಾಸನೆ ನೀಡಿದನು.

ಅತಿ ಶೀಘ್ರದಲ್ಲೇ ರಾಜನಿಗೆ ತನಗೆ ವಿಜಯವಾಗುವ ಮತ್ತೊಂದು ಆಶ್ವಾಸನೆ ದೊರೆಯಿತು. ಅವನು ತನ್ನ ಸೈನ್ಯದ ಹಿಂದೆ ಅಶ್ವಾರೂಢನಾಗಿ ಹೋಗುತ್ತಿದ್ದಾಗ ಚಿಲಿಕ ಎಂಬ ಸರೋವರದ ಬಳಿ ಹಾಲು ಮಾರುವವಳೊಬ್ಬಳು, ಸ್ವಲ್ಪ ನಿಲ್ಲುವಂತೆ ಅವನಿಗೆ ಸಂಜ್ಞೆ ಮಾಡಿದಳು. "ಈ ಮೊದಲು ಇಬ್ಬರು ಕುದುರೆ ಸವಾರರು ಈ ಮಾರ್ಗದಲ್ಲಿ ಹೋದರು. ಅವರಲ್ಲಿ ಒಬ್ಬನು ಕಪ್ಪಗಿದ್ದನು. ಇನ್ನೊಬ್ಬನು ಬೆಳ್ಳಗಿದ್ದನು. ಅವರಿಬ್ಬರೂ ನನ್ನ ಬಳಿಯಿದ್ದ ಮೊಸರನ್ನು ಮೆದ್ದು ನನಗೆ ಈ ಉಂಗುರವನ್ನು ಕೊಟ್ಟರು. ನಮ್ಮ ಹಿಂದೆಯೇ ಮತ್ತೊಬ್ಬರು ಕುದುರೆ ಮೇಲೆ ಬರುತ್ತಾರೆ. ಅವರು ನಿನಗೆ ಬರಬೇಕಾದ ಹಣವನ್ನು ಕೊಟ್ಟು, ಈ ಉಂಗುರವನ್ನು ವಾಪಸ್ ಪಡೆದುಕೊಳ್ಳುತ್ತಾರೆ ಎಂದು ಸಹ ಅವರಿಬ್ಬರೂ ಹೇಳಿದರು" ಎಂದು ಹಾಲು ಮಾರುವವಳು ತಿಳಿಸಿದಳು. "ಆ ಇಬ್ಬರು ಅಶ್ವಾರೋಹಿಗಳು ರಾಜನ ಪರವಾಗಿ ಹೋರಾಡಲು ಕಂಚಿಗೆ ಹೋಗುವ ತರಾತುರಿಯಲ್ಲಿದ್ದರು" ಎಂದು ಸಹ ಅವಳು ಹೇಳಿದಳು.

ರಾಜನು ಹಾಲು ಮಾರುವವಳು ಕೊಟ್ಟ ವಜ್ರದುಂಗುರವನ್ನು ಗುರುತಿಸಿದ. ಸ್ವಲ್ಪ ಮುಂಚೆಯಷ್ಟೇ ಅವನು ಆ ಉಂಗುರವನ್ನು ಜಗನ್ನಾಥನಿಗೆ ಅರ್ಪಿಸಿದ್ದನು. ಮುಂಚೆ ಹೋದ ಆ ಇಬ್ಬರು ಅಶ್ವಾರೋಹಿಗಳು ಜಗನ್ನಾಥ ಮತ್ತು ಬಲಭದ್ರರಲ್ಲದೇ ಬೇರಾರು ಅಲ್ಲವೆಂಬುದು ರಾಜನಿಗೆ ಖಚಿತವಾಯಿತು!

ಪುರುಷೋತ್ತಮದೇವನು ಕಂಚಿಯಲ್ಲಿ ನಡೆದ ಹೋರಾಟದಲ್ಲಿ ಜಯಶಾಲಿಯಾದನು.

ಅವನು ರಾಜಕುಮಾರಿ ಪದ್ಮಾವತಿಯನ್ನು ಸೆರೆ ಹಿಡಿದು ಪುರಿಗೆ ಹಿಂದಿರುಗಿದನು. ಆದರೆ ತಾನು ಮೊದಲು ಅನುಭವಿಸಿದ ಅಪಮಾನಕ್ಕೆ ಇದು ಅವಳಿಗೆ ತಕ್ಕ ಶಾಸ್ತಿಯಲ್ಲವೆಂದು ರಾಜ ಅಭಿಪ್ರಾಯಪಟ್ಟನು. ಆದ್ದರಿಂದ ರಾಜಕುಮಾರಿಯನ್ನು

ಕಸಗುಡಿಸುವವನೊಬ್ಬನಿಗೆ ಕೊಟ್ಟು ವಿವಾಹ ಮಾಡಿಸುವಂತೆ ಅವನು ತನ್ನ ಮಂತ್ರಿಗೆ ಆಜ್ಞಾಪಿಸಿದನು.

ಮಂತ್ರಿ ಬಹಳ ಬುದ್ಧಿವಂತನಾಗಿದ್ದ. ಅವನು ಕೆಲವು ತಿಂಗಳ ಕಾಲ ಏನೂ ಮಾಡದೆ ಸುಮ್ಮನಿದ್ದ. ಮತ್ತೊಮ್ಮೆ ರಥ ಯಾತ್ರೆಯ ಸಮಯ ಬಂದಿತು. ರಾಜ ರಥವನ್ನೇರಿ, ದೇವರನ್ನು ಕೂಡಿಸುವ ಜಾಗದ ಕಸವನ್ನು ಗುಡಿಸಲು ವೇದಿಕೆಗೆ ಬಂದಿಳಿದನು. ಆ ಸಮಯದಲ್ಲಿ, ಎರಡು ಸುಕೋಮಲ ಕೈಗಳಿಂದ ರಾಜನ ಕುತ್ತಿಗೆಗೆ ಹಾರ ಬಿದ್ದಿತು. ಹಾರವನ್ನು ಹಾಕಿದ ಹುಡುಗಿಯ ಹಿಂದೆಯೇ ಮಂತ್ರಿಯೂ ನಿಂತಿದ್ದ. ಆಗ ಅವನು ರಾಜನನ್ನು ಕುರಿತು, "ಮಹಾಪ್ರಭು, ರಾಜಕುಮಾರಿ ಪದ್ಮಾವತಿಯ ಕೈಹಿಡಿಯಲು ತಮಗಿಂತಲೂ ಉತ್ತಮನಾದ ಕಸಗುಡಿಸುವ ವ್ಯಕ್ತಿಯನ್ನು ನಾನೆಲ್ಲಿ ಹುಡುಕಿ ತರಲಿ?" ಎಂದನು. ಹೀಗೆ ಕಂಚಿಯ ರಾಜಕುಮಾರಿ ಕಳಿಂಗ ರಾಜ್ಯದ ರಾಣಿಯಾದಳು.


ಪುರಿ ದೇವಾಲಯದಲ್ಲಿರುವ ವಿಗ್ರಹಗಳು ಆರಂಭದಲ್ಲಿ ಬೌದ್ಧ ಧರ್ಮದ ಸಂಕೇತಗಳಾಗಿದ್ದವೆಂದು ಕೆಲವು ಇತಿಹಾಸಕಾರರ ಅಭಿಪ್ರಾಯ. ಈ ವಿಗ್ರಹಗಳು ಬುದ್ಧ, ಬೌದ್ಧ ಧರ್ಮ ಮತ್ತು ಸಂಘ ಇವುಗಳ ಪ್ರತೀಕಗಳಾಗಿದ್ದವು. ಈ ಇತಿಹಾಸಕಾರರು ನಂಬಿರುವ ಪ್ರಕಾರ, ಪುರಿ, ಬುದ್ಧನ ಹಲ್ಲು ಇದ್ದಂತಹ ದಂತಪುರಿಯಾಗಿತ್ತು. (ಇದನ್ನು ನವಿಪದ್ಮ ಒಳಗೊಂಡಿತ್ತು). ಹಿಂದೊಮ್ಮೆ ಈ ಪ್ರದೇಶದಲ್ಲಿ ಬೌದ್ಧ ಧರ್ಮ ಬಹಳ ಪ್ರಬಲವಾಗಿತ್ತು. ಆದರೆ ಬೌದ್ಧ ಯುಗಕ್ಕೆ ಮುಂಚೆ ಮತ್ತು ನಂತರ, ತಂತ್ರವಾದ ಮತ್ತು ಜೈನಧರ್ಮ ಸಹ ಈ ಪ್ರದೇಶದ ಮೇಲೆ ತಮ್ಮ ಪ್ರಭಾವ ಬೀರಿದ್ದವು. ಈ ದೇವಾಲಯ ವಿವಿಧ ಕಾಲಗಳಲ್ಲಿ ವಿವಿಧ ಧರ್ಮಗಳ ಕೇಂದ್ರವಾಗಿದ್ದುದರ ಸಾಧ್ಯತೆಯೂ ಇದೆ. ಈ ದೇವಾಲಯ ಎಲ್ಲವನ್ನೂ ತನ್ನೊಳಗೆ ಲೀನವಾಗಿಸಿಕೊಂಡು, ಕಡೆಗೆ ತನ್ನದೇ ಆದ ವಿಶಿಷ್ಟ ಸ್ವರೂಪವನ್ನು ಪಡೆದುಕೊಂಡಿದೆ.


ಶಂಕರಾಚಾರ್ಯರು ಮತ್ತು ರಾಮಾನುಜರು (ಇವರಿಬ್ಬರೂ ಪುರಿಯಲ್ಲಿ ಆಶ್ರಮ ಸ್ಥಾಪಿಸಿದರು) ಹಾಗೂ ನಾನಕ್ ಮತ್ತು ತುಳಸಿದಾಸರಂತಹ ಮಹಾಪುರುಷರು ಪುರಿಯಲ್ಲಿರುವ ವಿಚಿತ್ರ ವಿಗ್ರಹದಲ್ಲಿ ದೈವೀಕ ಗುಣಗಳನ್ನು ಕಂಡುಕೊಂಡರು. ಜಗನ್ನಾಥನನ್ನೇ ದಿಟ್ಟಿಸಿ ನೋಡುತ್ತಿದ್ದಾಗ ಚೈತನ್ಯದೇವ ಕಣ್ಮರೆಯಾದರೆಂಬ ನಂಬಿಕೆಯಿದೆ. ಈ ವಿಗ್ರಹಗಳ ರೂಪಗಳು ಕೆಲವರಿಗೆ ಪ್ರಾಚೀನ ಬುಡಕಟ್ಟು ಜನರ ಕಲಾಕೃತಿಯಂತೆ ಕಂಡುಬಂದರೆ, ಇನ್ನು ಕೆಲವರಿಗೆ ವೈಚಾರಿಕತೆಯನ್ನು ಪ್ರತಿಬಿಂಬಿಸುವ ಆಧುನಿಕ ಕಲಾಕೃತಿಯಂತೆ ಕಂಡುಬರುತ್ತದೆ. ಆಧ್ಯಾತ್ಮವಾದಿಗಳು ಮಾತ್ರ ಕಂಡುಕೊಳ್ಳಬಲ್ಲಂತಹ

ಅಂತರ್ಗತವಾದ ಭವ್ಯತೆಯನ್ನು ಈ ವಿಗ್ರಹಗಳು ಹೊಂದಿವೆಯೇ? ಧಾರ್ಮಿಕ ಭಾವವುಳ್ಳ ಅನೇಕ ಕವಿವರ್ಯರು ಈ ವಿಗ್ರಹಗಳೊಳಗಿರುವ ಸೌಂದರ್ಯದ ಸಿರಿಯನ್ನು ತಮ್ಮ ಕವಿತೆಗಳಲ್ಲಿ ವರ್ಣಿಸಿದ್ದಾರೆ.

ಪುರಿಯ ಜಗನ್ನಾಥ ವಿಗ್ರಹ ಭೂತ, ವರ್ತಮಾನಗಳನ್ನಷ್ಟೇ ಅಲ್ಲದೆ ಭವಿಷ್ಯವನ್ನೂ ಸಾರುತ್ತದೆ. ಈ ದೇವಾಲಯದಲ್ಲಿ ಪ್ರತಿ ದಿನ ರಾತ್ರಿಯ ವೇಳೆ ಜಯದೇವನ *ಗೀತ-ಗೋವಿಂದ*ವನ್ನು ಹಾಡಲಾಗುತ್ತದೆ. ಈ ಗೀತೆಯು ವಿಷ್ಣುವಿನ ಹತ್ತು ಅವತಾರಗಳ ವರ್ಣನೆಯನ್ನೊಳಗೊಂಡಿದೆ. ಭವಿಷ್ಯವನ್ನು ಸೂಚಿಸುವ ಕಲ್ಕಿ ಕಡೆಯ ಅವತಾರವಾಗಿದೆ. ಕಲ್ಕಿ ಮಾನವನಲ್ಲಿರುವ ಎಲ್ಲ ಅಸಂಸ್ಕೃತ ಹಾಗೂ ಅನಾಗರಿಕ ಅವಗುಣಗಳನ್ನು ನಾಶಪಡಿಸಿ, ಅವನಲ್ಲಿ ಪರಿಪೂರ್ಣ ಗುಣಗಳು ಮೂಡಿಬರಲು ಅವಕಾಶವಾಗುವಂತೆ ಮಾಡುವನು. ಬಹುಶಃ ಜಗನ್ನಾಥನ ಈಗಿನ ಅಪರಿಪೂರ್ಣ ಸ್ವರೂಪವು ನಾಳಿನ ಪ್ರಜ್ಞಾವಂತ ಮಾನವನ ಉದಯದೊಂದಿಗೆ ಪರಿಪೂರ್ಣಗೊಳ್ಳಲಿದೆ.

ಮನೋಜ್ ದಾಸ್





ರಕ್ಷಾ ಬಂಧನ್

ಶ್ರಾವಣ ಮಾಸದ (ಜೂನ್-ಜುಲೈ) ಹುಣ್ಣಿಮೆ ದಿನ, ಶ್ರಾವಣಿ ಮತ್ತು ರಕ್ಷಾ-ಬಂಧನ್ ಹಬ್ಬವನ್ನು ಆಚರಿಸಲಾಗುವುದು. ಶ್ರಾವಣಿ ಎನ್ನುವುದು ಜನಿವಾರ ಬದಲಾಯಿಸುವ ಹಬ್ಬ. ಇವು ಒಂದೇ ಹಬ್ಬದ ಎರಡು ಹೆಸರುಗಳೆಂಬ ಭಾವನೆ ಇದೆ. ಆದರೆ ಇದು ನಿಜವಲ್ಲ. ಶ್ರಾವಣಿಯನ್ನು ವಿಶೇಷವಾಗಿ ಬ್ರಾಹ್ಮಣರು ಆಚರಿಸುವರು. ಧರ್ಮಶಾಸ್ತ್ರದಲ್ಲಿ ಇದಕ್ಕೆ ಋಷಿತರ್ಪಣ ಅಥವಾ ಉಪಾಕರ್ಮ ಎಂಬ ಹೆಸರಿದೆ. ಇದು ಅತಿ ಪ್ರಾಚೀನ ಕಾಲದಿಂದ ಇರುವ ವೈದಿಕ ಹಬ್ಬ. ಇವೆರಡು ಹಬ್ಬಗಳಲ್ಲಿ ರಕ್ಷಾ ಬಂಧನ್ ಹೆಚ್ಚು ಪ್ರಚಲಿತವಾದದ್ದು.

ರಕ್ಷಾ ಬಂಧನದ ಆರಂಭ ಏಕಾಯಿತು, ಹೇಗಾಯಿತು ಮತ್ತು ಎಲ್ಲಾಯಿತು ಎನ್ನುವುದಕ್ಕೆ ಸರಿಯಾದ ಪುರಾವೆ ಇಲ್ಲ. ಈ ಹಬ್ಬಕ್ಕೆ ಸಂಬಂಧಿಸಿದಂತೆ ಒಂದು ಪುರಾಣ ಕಥೆ ಇದೆ. ಒಮ್ಮೆ ರಾಕ್ಷಸರಿಗೂ, ದೇವತೆಗಳಿಗೂ ಭೀಕರ ಯುದ್ಧವಾಯಿತು. ಯುದ್ಧದಲ್ಲಿ ಅಸುರರೇ ಮೇಲುಗೈ ಪಡೆದು ಗೆಲ್ಲುವ ಸ್ಥಿತಿಯಲ್ಲಿದ್ದರು.

ಇದರಿಂದ ಚಿಂತಾಕ್ರಾಂತನಾದ ಇಂದ್ರ ತನ್ನ ಆಸ್ಥಾನಕ್ಕೆ ತನ್ನ ಗುರುವಾದ

ಬೃಹಸ್ಪತಿಯನ್ನು ಕರೆಸಿ, ಅವನ ಸಲಹೆ ಕೇಳಿದ. ಇಂದ್ರನ ಮಡದಿ ಇಂದ್ರಾಣಿಯೂ ಅಲ್ಲಿದ್ದಳು. ಬೃಹಸ್ಪತಿ ಮಾತಾಡುವುದಕ್ಕೆ ಮುಂಚೆ, ಇಂದ್ರಾಣಿ ಎದ್ದು ನಿಂತು "ದೇವತೆಗಳನ್ನು ಗೆಲ್ಲಿಸುವ ತಂತ್ರ ನನಗೆ ಗೊತ್ತು. ನಾವೇ ಯುದ್ಧದಲ್ಲಿ ಗೆಲ್ಲುತ್ತೇವೆ. ಇದು ಖಂಡಿತ" ಎಂದಳು.

ಅದರ ಮರುದಿನ, ಶ್ರಾವಣ ಮಾಸದ ಹುಣ್ಣಿಮೆ ರಾತ್ರಿಯಾಗಿತ್ತು. ಇಂದ್ರಾಣಿ ಮಂತ್ರ ಪುರಸ್ಸರವಾಗಿ ತಯಾರಿಸಿದ ಒಂದು ರಕ್ಷೆಯನ್ನು ತನ್ನ ಪತಿಯ ಕೈಗೆ ಕಟ್ಟಿದಳು. ರಕ್ಷೆಯನ್ನು ಕಟ್ಟಿಕೊಂಡಿದ್ದ ಇಂದ್ರ ಯುದ್ಧರಂಗಕ್ಕೆ ಕಾಲಿಟ್ಟಿದ್ದೇ ತಡ ಅಸುರರು ಚದುರಿ, ಪರಾರಿಯಾದರು. ಅಸುರರು ತಲೆಬಾಗಿದರು. ದೇವತೆಗಳು ಗೆದ್ದರು.

ಈಗಿನ ರಕ್ಷಾಬಂಧನ್ ಇಂತಹ ಒಂದು ನಂಬಿಕೆಯ ಆಧಾರದ ಮೇಲೆ ರೂಢಿಗೆ ಬಂದಿರಬಹುದು. ಶಾಸ್ತ್ರಗಳಲ್ಲಿ ಕೊಟ್ಟಿರುವ ವಿಧಿಗಳಿಗೆ ಅನುಗುಣವಾಗಿ, ದಾರವನ್ನು ಮಂತ್ರಿಸಿ, ಶ್ರಾವಣ ಮಾಸದ ಹುಣ್ಣಿಮೆಯೆಂದು ಒಬ್ಬ ವ್ಯಕ್ತಿಗೆ ಕಟ್ಟಿದರೆ, ಆ ವ್ಯಕ್ತಿ ಸುಖ-ಸಂತೋಷಗಳಿಂದ ಮತ್ತು ಆರೋಗ್ಯದಿಂದ ಬಾಳುವನೆಂಬ ನಂಬಿಕೆ ಇದೆ.

ಈ ಹಬ್ಬ ರೂಢಿಯಲ್ಲಿ ಬಂದಿದ್ದಕ್ಕೆ ಕಾರಣ ಏನೇ ಇರಲಿ, ಇದನ್ನು ಅಕ್ಕ-ತಂಗಿಯರು, ಅಣ್ಣ-ತಮ್ಮಂದಿರಿಗೆ ಪ್ರೀತಿ-ವಾತ್ಸಲ್ಯ ತೋರಿಸುವ ಒಂದು ಪವಿತ್ರ ದಿನವನ್ನಾಗಿ ಆಚರಿಸಲಾಗುತ್ತದೆ. ಒಬ್ಬ ಸೋದರ ಎಲ್ಲೇ ಇರಲಿ, ಸಪ್ತ-ಸಾಗರಗಳಾಚೆ ಇದ್ದರೂ ಸರಿ, ಅಂದು ಅವನು ತನ್ನ ಕೈಗೆ ಸೋದರಿ ಕಳಿಸಿದ ಬಣ್ಣದ ದಾರವನ್ನು ಕಟ್ಟಿಕೊಳ್ಳಲೇಬೇಕು. ಒಬ್ಬರಿಗೊಬ್ಬರಿಗೆ ಪರಿಚಯವಿಲ್ಲದಿದ್ದರೂ ಚಿಂತೆ ಇಲ್ಲ. ಹೆಣ್ಣು ಮಗಳೊಬ್ಬಳು ಒಬ್ಬ ಹುಡುಗನ ಕೈಗೆ ರಾಖಿ ಕಟ್ಟಿದರಾಯಿತು. ಅವರಿಬ್ಬರೂ ಅಣ್ಣ-ತಂಗಿಯರಾಗುತ್ತಾರೆ. ಅಂದಿನಿಂದ ರಕ್ತ ಸಂಬಂಧಿಗಿಂತಲೂ ಹತ್ತಿರದವರಾಗುತ್ತಾರೆ. ಇದು ಈ ಹಬ್ಬಕ್ಕಿರುವ ಪಾವಿತ್ರ್ಯವನ್ನು ತೋರಿಸುತ್ತದೆ.

ಹಬ್ಬಕ್ಕೆ ಅನೇಕ ದಿನಗಳ ಮೊದಲೇ ಅಂಗಡಿಗಳಲ್ಲಿ ರಾಖಿಗಳ ಮಾರಾಟ ಆರಂಭವಾಗುತ್ತದೆ. ಚಿಕ್ಕ ಚಿಕ್ಕ ಊರುಗಳಲ್ಲಂತೂ ಇಂತಹ ಅಂಗಡಿಗಳನ್ನು ಸಾಲು-ಸಾಲಾಗಿ ಕಾಣಬಹುದು. ನಾನಾ ಬಣ್ಣಗಳು, ಆಕಾರಗಳು ಹಾಗೂ ವಿನ್ಯಾಸಗಳಿಂದ ಥಳಥಳಿಸುವ ರಾಖಿಗಳನ್ನು ನೋಡಬಹುದು. ಬೆಳ್ಳಿ ಮತ್ತು ಚಿನ್ನದ ಜರಿ ದಾರಗಳಿರುವ, ಕೆಂಪು, ಹಳದಿ, ಕಡುಗೆಂಪು, ಹಸಿರು ಮತ್ತು ನೀಲಿ ಬಣ್ಣಗಳ ರಾಖಿಗಳು ಮಾರಾಟವಾಗುತ್ತವೆ. ಎಲ್ಲ ವಯಸ್ಸಿನ ಹೆಂಗಸರು ಮತ್ತು ಮಕ್ಕಳು ಈ ಅಂಗಡಿಗಳ ಮುಂದೆ ಕಿಕ್ಕಿರಿದಿರುತ್ತಾರೆ. ಈ ಸಂಭ್ರಮವನ್ನು ನೋಡುವುದೇ ಒಂದು ಆನಂದ. ರಾಖಿಯ

ಬೆಲೆ ಐದು ಪೈಸೆಯಿಂದ ಐದು ರೂಪಾಯಿಯವರೆಗೆ ಇರುತ್ತದೆ. ಹೆಚ್ಚಿನ ಬೆಲೆಯ ರಾಖಿಗಳು, ಬೆಳ್ಳಿ ಮತ್ತು ಚಿನ್ನದ ಜರತಾರಿಗಳಿಂದ ಹೆಚ್ಚು ಮೋಹಕವಾಗಿರುತ್ತವೆ.

ಸಿಹಿತಿಂಡಿಗಳ ಮಾರಾಟ ಭರಾಟೆಯಿಂದ ನಡೆಯುತ್ತದೆ. ಮಿಠಾಯಿ ಅಂಗಡಿಗಳಲ್ಲಿ ಆಕರ್ಷಕವಾಗಿ ಜೋಡಿಸಿಟ್ಟ ಸಿಹಿ ತಿಂಡಿಗಳು ಮನಸೆಳೆಯುತ್ತವೆ ಮತ್ತು ಬಾಯಲ್ಲಿ ನೀರು ತರಿಸುತ್ತದೆ. ಹಲ್ಲುಗಳಿಗೆ ಮತ್ತು ಹೊಟ್ಟೆಗೆ ಒಳ್ಳೆಯದಲ್ಲವೆಂಬ ಡಾಕ್ಟರರ ಸಲಹೆ ಮರೆತುಹೋಗುತ್ತದೆ. ಸಿಹಿತಿಂಡಿ ಇಲ್ಲದೇ ಈ ಹಬ್ಬ ನಡೆಯದು.

ಈ ಹಬ್ಬದ ದಿನ (ಜುಲೈ-ಆಗಸ್ಟ್ ತಿಂಗಳ ಹುಣ್ಣಿಮೆಯ ರಾತ್ರಿ) ಹೆಣ್ಣು ಮಕ್ಕಳ ಉತ್ಸಾಹಕ್ಕೆ ಮಿತಿ ಇಲ್ಲ. ಅಂದು ಅವರು ಮುಂಜಾವಿಗೆ ಮುಂಚೆಯೇ ಏಳುತ್ತಾರೆ. ಬೇಗನೇ ಸ್ನಾನ ಮಾಡಿ, ಒಳ್ಳೆಯ ಬಟ್ಟೆಗಳನ್ನು ಧರಿಸುತ್ತಾರೆ. ಅಷ್ಟು ಹೊತ್ತಿಗೆ ಅಣ್ಣ-ತಮ್ಮಂದಿರೂ ಸಹ ಸ್ನಾನ ಮುಗಿಸಿ, ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ಹೆಣ್ಣು ಮಕ್ಕಳು ಒಂದು ತಟ್ಟೆಯ ತುಂಬ ಸಿಹಿ ತಿಂಡಿಗಳನ್ನು ಇಟ್ಟು, ಅದರ ಮೇಲೆ ರಾಖಿಯನ್ನು ಇರಿಸುವರು. ತಲೆಯ ಮೇಲೆ ದುಪ್ಪಟವನ್ನು ಹಾಕಿಕೊಂಡು, ಸೋದರನ ಮುಂದೆ ಕುಳಿತುಕೊಳ್ಳುವರು. ಸೋದರನ ಹಣೆಗೆ ಕುಂಕುಮ, ಕೇಸರಿ ಮತ್ತು ಅಕ್ಕಿಹಿಟ್ಟಿನ ತಿಲಕ ಇಡುವರು. ಬಣ್ಣಬಣ್ಣಗಳಿಂದ ಥಳಥಳಿಸುವ ರಾಖಿಯನ್ನು ಅವನ ಕೈಗೆ ಕಟ್ಟುವರು. ಒಂದು ಚೂರು ಸಿಹಿ ತಿಂಡಿಯನ್ನು ಸೋದರನ ಬಾಯಿಯಲ್ಲಿಡುವರು. ಸೋದರ ತನ್ನ ಪ್ರೀತಿ-ವಾತ್ಸಲ್ಯಗಳ ಸಂಕೇತವಾಗಿ, ಸೋದರಿಗೆ ಅದೇ ತಟ್ಟೆಯಲ್ಲಿ ಸ್ವಲ್ಪ ಹಣ ಇಡುವನು. ಈ ಹಣ ಒಂದು ರೂಪಾಯಿ ಆಗಿರಬಹುದು ಅಥವಾ ಇನ್ನೂ ಹೆಚ್ಚಿನ ಮೊತ್ತವಾಗಿರಬಹುದು. ಹೆಣ್ಣು ಮಕ್ಕಳು, ಅಣ್ಣತಮ್ಮಂದಿರಿಗೆ ರಾಖಿ ಕಟ್ಟುವ ತನಕ, ಇಬ್ಬರೂ ಆಹಾರ ತೆಗೆದುಕೊಳ್ಳುವುದಿಲ್ಲ. ಅಂದು ಸಂಜೆಯವರೆಗೂ ಸೋದರ ರಾಖಿಯನ್ನು ಬಿಚ್ಚುವುದಿಲ್ಲ. ಈ ಹಬ್ಬದ ದಿನ ಪೂರಿಗಳನ್ನು ಕರಿಯುವುದು ಮತ್ತು ಸೇವಿಗೆಯ ಪದಾರ್ಥಗಳನ್ನು ತಯಾರಿಸುವುದು ವಾಡಿಕೆ.

ಹೆಣ್ಣು ಮಕ್ಕಳು ಸೋದರನಿಗೆ ರಾಖಿ ಕಟ್ಟಿ, ಅವನಿಗೆ ಆಯುರಾರೋಗ್ಯ, ಸುಖ-ಸಂತೋಷ ಹಾಗೂ ಕೈಗೊಂಡ ಕೆಲಸದಲ್ಲಿ ಯಶಸ್ಸು ದೊರೆಯಲೆಂದು ಕೇಳಿಕೊಳ್ಳುವರು. ಸೋದರನೂ ಸಹ ತನ್ನ ಸೋದರಿಯ ಮಾನ-ಮರ್ಯಾದೆಗಳನ್ನು ಕಾಪಾಡಲು ಕೊನೆಯುಸಿರಿನವರೆಗೆ ಹೋರಾಡುವ ಪ್ರತಿಜ್ಞೆ ತೊಡುತ್ತಾನೆ.

ರಕ್ಷಾ ಬಂಧನದ ದಿನ ಬ್ರಾಹ್ಮಣರು ಮತ್ತು ಪುರೋಹಿತರು ತಮ್ಮ ಹಿತೈಷಿಗಳಿಗೆ ರಾಖಿ ಕಟ್ಟಿ ಅವರಿಂದ ಕಾಣಿಕೆಗಳನ್ನು ಸ್ವೀಕರಿಸುವರು. ದೇಶದ ಕೆಲವು ಭಾಗಗಳಲ್ಲಿ ಜನ

ತಮ್ಮ ಮನೆಯ ಗೋಡೆಗಳ ಮೇಲೆ ಚಿತ್ರಗಳನ್ನು ಬರೆದು, ಕುಂಕುಮದಿಂದ ಪೂಜಿಸುವರು. ಮನೆಯ ಮುಂಬಾಗಿಲ ಎರಡೂ ಪಕ್ಕಗಳಲ್ಲಿ, ಹಸ್ತಗಳ ಅಚ್ಚೊತ್ತಿ, ಅದಕ್ಕೆ ರಾಖಿಗಳನ್ನು ಅಂಟಿಸುವರು.



ಭಾರತದಲ್ಲಿ ಇದೇ ಹಬ್ಬವನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಆಚರಿಸಲಾಗುವುದು. ರಕ್ಷಾ ಬಂಧನವನ್ನು - ರಾಖಿ, ರಾಖ್ರಿ, ಸಾಲುನೊ ಎಂಬ ವಿವಿಧ ಹೆಸರುಗಳಿಂದ ಕರೆಯಲಾಗುವುದು.

ರಕ್ಷಾ ಬಂಧನ್ ಹಬ್ಬದಲ್ಲಿ ಬಾಣ-ಬಿರುಸುಗಳ ಆರ್ಭಟವಿಲ್ಲ. ತಮಟೆ-ಮದ್ದಲೆಗಳ ಬಡಿತವಿಲ್ಲ. ಬಣ್ಣದ ದೀಪಗಳ ಅಲಂಕಾರವಿಲ್ಲ. ಆದಾಗ್ಯೂ, ಈ ಹಬ್ಬ ತನ್ನದೇ ಆದ ಪ್ರಾಮುಖ್ಯವನ್ನು ಹೊಂದಿದೆ. ಅಕ್ಕ-ತಂಗಿಯರು ರಾಖಿ ಕಟ್ಟಿದಾಗ ಅವರಿಗೆ

ಅಣ್ಣ-ತಮ್ಮಂದಿರು ಕೊಡುವ ಹಣ, ಬಹಳ ಅಲ್ಪ ತೋರಬಹುದು. ಆದರೆ ಹೆಣ್ಣು ಮಕ್ಕಳು ಈ ಹಣವನ್ನು ಜಗತ್ತಿನ ಅಷ್ಟೈಶ್ವರ್ಯಕ್ಕಿಂತಲೂ ಹೆಚ್ಚೆಂದು ಪರಿಗಣಿಸುವರು. ನಿಷ್ಪ್ರಯೋಜಕವಾಗಿ ಕಾಣುವ ಈ ದಾರದ ಮಹತ್ವವನ್ನು ಪ್ರದರ್ಶಿಸಿರುವ ಅನೇಕ ಘಟನೆಗಳು ನಮ್ಮ ದೇಶದ ಇತಿಹಾಸದಲ್ಲಿ ಕಂಡುಬರುತ್ತವೆ. ಮಹಾರಾಣಿ ಕರ್ಮವತಿಯ (ಅಥವಾ ಕರುಣವತಿ) ಕಥೆ ಇಂತಹ ಘಟನೆಗೊಂದು ನಿದರ್ಶನ. ಒಮ್ಮೆ ಗವರ್ನರ್ ಬಹಾದೂರ್ ಷಾ ಆಕೆಯ ರಾಜ್ಯಕ್ಕೆ ಮುತ್ತಿಗೆ ಹಾಕಿದ. ಅವನು ಭಾರಿ ಪಡೆಗಳ ಸಹಿತ ದಂಡೆತ್ತಿ ಬರುತ್ತಿದ್ದುದನ್ನು ಕಂಡು ಮಹಾರಾಣಿ ಧೈರ್ಯಗುಂದಿದಳು. ಆಕೆ ಹಠಾತ್ತನೆ ಚಕ್ರವರ್ತಿ ಹುಮಾಯೂನನ್ನು ನೆನೆದಳು. ಅವನಿಗೆ ಒಂದು ರಾಖಿಯನ್ನು ಕಳುಹಿಸಿಕೊಟ್ಟಳು. ಬಹಾದ್ದೂರ್ ಷಾನ ವಿರುದ್ಧದ ಹೋರಾಟದಲ್ಲಿ ಹಿಂದೂ ರಾಣಿಯೊಬ್ಬಳ ಸಹಾಯಕ್ಕಾಗಿ ಹುಮಾಯೂನ್ ಹೋಗುತ್ತಿರಲಿಲ್ಲ. ಆದರೆ ಅವನ ಮೇಲೆ ರಾಖಿಯ ಪ್ರಭಾವ ಎಷ್ಟು ಪ್ರಬಲವಾಗಿತ್ತೆಂದರೆ ತತ್‌ಕ್ಷಣವೇ ಅವನು ಮೇವಾರ್‌ಗೆ ಹೊರಟ. ಹುಮಾಯೂನ್ ಅಲ್ಲಿಗೆ ತಲುಪುವ ಹೊತ್ತಿಗೆ ರಾಣಿ ಬೆಂಕಿ ಹಚ್ಚಿಕೊಂಡು ಆತ್ಮಾರ್ಪಣೆ ಮಾಡಿಕೊಂಡಿದ್ದಳು. ಇದರಿಂದ ಚಕ್ರವರ್ತಿಗೆ ಬಹಳ ದುಃಖವಾಯಿತು. ಅವನು ಬಹಾದೂರ್ ಷಾನನ್ನು ಹಿಂಬಾಲಿಸಿಕೊಂಡು ಹೋದ. ಅವನನ್ನು ಹಿಡಿದು ಅವನ ಸೈನ್ಯವನ್ನು ನಾಶಪಡಿಸಿದ. ಅನೇಕ ಮೊಗಲ್ ಚಕ್ರವರ್ತಿಗಳು ಹಿಂದೂ ಮಹಿಳೆಯರಿಂದ ರಾಖಿಗಳನ್ನು ಸ್ವೀಕರಿಸಿ ಅವನ ಮಾನ-ಮರ್ಯಾದೆಗಳನ್ನು ಕಾಪಾಡುವ ಪ್ರತಿಜ್ಞೆ ತೊಟ್ಟ ಪ್ರಕರಣಗಳು ಮೊಗಲರ ಇತಿಹಾಸದಲ್ಲಿವೆ. ರಾಜಸ್ತಾನದ ಇತಿಹಾಸದಲ್ಲಿ, ತಮಗೆ ರಾಖಿ ಕಟ್ಟಿದ ಮಹಿಳೆಯರ ಮಾನ ಸಂರಕ್ಷಣೆಗಾಗಿ, ಅನೇಕ ಪುರುಷರು ಪ್ರಾಣತ್ಯಾಗ ಮಾಡಿರುವ ಉದಾಹರಣೆಗಳಿವೆ. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಅನೇಕ ಮಹಿಳೆಯರು ತಮ್ಮ ಗಂಡಂದಿರ ಕೈಗೆ ರಾಖಿ ಕಟ್ಟುತ್ತಿದ್ದರು. ರಾಖಿ ಕಟ್ಟಿಸಿಕೊಂಡ ನಂತರ, ಅವರು ಭಾರತದ ವಿಮೋಚನೆಗಾಗಿ ಪ್ರಾಣಾರ್ಪಣೆಗೂ ತಾವು ಸಿದ್ಧವೆಂದು ಪ್ರತಿಜ್ಞೆ ಮಾಡುತ್ತಿದ್ದರು. ರಕ್ಷಾ ಬಂಧನ್ ಹಬ್ಬವನ್ನು ಒಂದು ರಾಷ್ಟ್ರೀಯ ಹಬ್ಬವನ್ನಾಗಿ ಮಾಡಲು ಬಂಗಾಳದ ಹಿರಿಯ ನಾಯಕ ಸುರೇಂದ್ರನಾಥ ಬ್ಯಾನರ್ಜಿ ಪ್ರಯತ್ನಿಸಿದ್ದಕ್ಕೆ ಬಹುಶಃ ಇದೇ ಕಾರಣವಿರಬಹುದು.

ಎಷ್ಟೋ ಅಣ್ಣ-ತಮ್ಮಂದಿರಿಗೆ ಅಕ್ಕ-ತಂಗಿಯರಿರುವುದಿಲ್ಲ ಮತ್ತು ಎಷ್ಟೋ ಅಕ್ಕ-ತಂಗಿಯರಿಗೆ ಅಣ್ಣ-ತಮ್ಮಂದಿರಿರುವುದಿಲ್ಲ. ಇವರಿಗಾಗಿ ನಾವು ಎಷ್ಟು ಅನುಕಂಪ ತೋರಿದರೂ ಸಾಲದು. ಇಂತಹವರು ದೇವರಲ್ಲಿ ಐಶ್ವರ್ಯ ಬೇಡುವುದಿಲ್ಲ. ತಮಗೆ ತಮ್ಮ ಅಥವಾ ತಂಗಿಯನ್ನು ಕರುಣಿಸಬೇಕೆಂದು ಬೇಡುವರು.

ಮೂಲ ಹಿಂದಿ: ಪೃಥ್ವಿರಾಜ್ ಮೊಂಗಾ

ಓಣಂ

ಮಳೆಗಾಲ ಮುಗಿದು ರಮ್ಯವಾಗಿ ಕಂಗೊಳಿಸುವ ನಿಸರ್ಗ. ಎಲ್ಲೆಲ್ಲೂ ಹಚ್ಚಹಸುರಿನ ಸೊಬಗು. ಪಶ್ಚಿಮ ಘಟ್ಟಗಳ ಶ್ರೇಣಿಯಲ್ಲಿ ಇಣುಕು ಹಾಕುವ ಹೊಂಬಿಸಿಲಿನ ಕಿರಣಗಳು. ಅರಬ್ಬಿ ಸಮುದ್ರದ ದಂಡೆಯ ಮೇಲೆ ಉರುಳುತ್ತಾ ಬರುವ ಅಲೆಗಳ ಸಪ್ಪಳ. ಮಿರುಗುಟ್ಟುವ ಮರಳು ರಾಶಿ. ಸುಯ್ಯನೆ ಬೀಸುವ ಗಾಳಿಗೆ ತಲೆದೂಗುವ ತೆಂಗಿನ ಮರಗಳು. ಕೊಂಬೆಯಿಂದ ಕೊಂಬೆಗೆ ಹಾರಿ, ಚಿಲಿಪಿಲಿಗುಟ್ಟುವ ಪಕ್ಷಿಗಳ ಮಧುರ ಇಂಚರ. ಹಗಲಿನಲ್ಲಿ ಪ್ರಜ್ವಲಿಸುವ ಬಿಸಿಲು. ರಾತ್ರಿ ಮೋಡವಿಲ್ಲದ ಶುಭ್ರ ಆಕಾಶ. ಇಂತಹ ಒಂದು ಸುಂದರ ಸನ್ನಿವೇಶದಲ್ಲಿ ಓಣಂ ಹಬ್ಬ ಬರುತ್ತದೆ.

ಹಬ್ಬದ ದಿನ, ಮುಂಜಾನೆಯೇ ಮಕ್ಕಳ ಸಡಗರ ಆರಂಭ. ಹೂವು ತರಲು ಮಕ್ಕಳು ಸುತ್ತಮುತ್ತಲ ಬೆಟ್ಟಗಳು, ಕಣಿವೆಗಳು ಮತ್ತು ತೋಟಗಳಿಗೆ ಹೋಗುವರು. ಈ ಮಕ್ಕಳ ಕಲಕಲ ಮಾತು ಮತ್ತು ಹಾಡು ದೂರದಿಂದಲೇ ಕೇಳಿಬರುತ್ತದೆ. ಅವರು ನಾನಾ ಬಗೆಯ ಹೂವುಗಳೊಡನೆ ಮನೆಗೆ ಹಿಂದಿರುಗುವರು. ಆ ಹೂವುಗಳಲ್ಲಿ ತುಂಬೆ ಹೂವು ಅತಿ

ವಿಶೇಷ. ತಮ್ಮ ಮನೆಯ ಮುಂದೆ ಸಗಣಿಯಿಂದ ಸಾರಿಸಿದ ನೆಲದ ಮೇಲೆ ಅವರು ಈ ಹೂವುಗಳನ್ನು ನಾನಾ ವಿನ್ಯಾಸಗಳಲ್ಲಿಟ್ಟು ಅಲಂಕರಿಸುವರು.

ಓಣಂ ಹೂವುಗಳ ಹಬ್ಬ. ವಸಂತೋತ್ಸವವೂ ಹೌದು. ನಾನಾ ಬಣ್ಣಗಳ ಪುಷ್ಪಾಲಂಕರಣ, ಈ ಹಬ್ಬದ ವೈಶಿಷ್ಟ್ಯ. ಈ ಹಬ್ಬವನ್ನು ಶ್ರಾವಣ ಮಾಸದಲ್ಲಿ (ಆಗಸ್ಟ್-ಸೆಪ್ಟೆಂಬರ್) ಆಚರಿಸಲಾಗುವುದು. ಫಸಲು ಬಂದು, ರೈತರ ಮನೆಯ ಕಣಜಗಳು ತುಂಬಿರುತ್ತವೆ. ರೈತರು ಬಿಡುವಾಗಿರುತ್ತಾರೆ. ಸಂತೋಷ-ಸಂಭ್ರಮಗಳಿಂದ ಹಬ್ಬವಾಚರಿಸಲು ಇದು ಅವರಿಗೆ ಒಳ್ಳೆಯ ಸಮಯ.

ಎಲ್ಲ ಹಬ್ಬಗಳಿಗೂ ಪುರಾಣದ ಹಿನ್ನೆಲೆ ಇದೆ. ಹಾಗೆಯೇ ಓಣಂಗೂ ಒಂದು ಕಥೆ ಇದೆ. ಹಿಂದೆ ಮಹಾಬಲಿ ಎಂಬ ದೊರೆ ಕೇರಳವನ್ನಾಳುತ್ತಿದ್ದ. ಅವನ ಆಳ್ವಿಕೆಯಲ್ಲಿ ಜನ ಸುಖವಾಗಿದ್ದರು. ಹೀಗಾಗಿ ಚಕ್ರವರ್ತಿ ಜನರ ಪ್ರೀತಿ ಸಂಪಾದಿಸಿದ್ದ. ಕ್ರಮೇಣ ಮಹಾಬಲಿಯ ಚಕ್ರಾಧಿಪತ್ಯ ಮೂರು ಲೋಕಗಳಿಗೂ ವಿಸ್ತರಿಸಿತು. ಇದರಿಂದ ದೇವತೆಗಳಿಗೆ ಮತ್ಸರವುಂಟಾಯಿತು. ಬಲಿಚಕ್ರವರ್ತಿಯನ್ನು ಸಿಂಹಾಸನದಿಂದ ಉರುಳಿಸಲು ದೇವೇಂದ್ರ ಪಿತೂರಿ ನಡೆಸಿದ.

ತ್ರಿಮೂರ್ತಿಗಳಲ್ಲೊಬ್ಬನಾದ ವಿಷ್ಣು ಈ ಕಾರ್ಯಕ್ಕೆ ನೇಮಿತನಾದ. ವಿಷ್ಣು ವಾಮನನೆಂಬ ಬ್ರಾಹ್ಮಣ ಹುಡುಗನ ವೇಷ ತಾಳಿ ಬಲಿಚಕ್ರವರ್ತಿಯ ಬಳಿ ಬಂದ. ತಾನಿಡುವ ಮೂರು ಹೆಜ್ಜೆಗಳಷ್ಟು ಜಾಗವನ್ನು ತನಗೆ ಕೊಡಬೇಕೆಂದು ವಾಮನ ಬಲಿಚಕ್ರವರ್ತಿಯನ್ನು ಕೇಳಿಕೊಂಡ. ಬಲಿ, ಇದಕ್ಕೆ ಕೂಡಲೇ ಒಪ್ಪಿಕೊಂಡ. ವಾಮನ ಹಠಾತ್ತನೆ ಬೃಹದಾಕಾರವಾಗಿ ಬೆಳೆಯಲಾರಂಭಿಸಿದ. ಕಡೆಗೆ ಅವನ ಗಾತ್ರ ಇಡೀ ಬ್ರಹ್ಮಾಂಡದಷ್ಟು ದೊಡ್ಡದಾಯಿತು. ಅವನು ಒಂದು ಹೆಜ್ಜೆಯನ್ನು ಭೂಮಿಯ ಮೇಲೆ ಮತ್ತು ಇನ್ನೊಂದು ಹೆಜ್ಜೆಯನ್ನು ದೇವಲೋಕದ ಮೇಲಿಟ್ಟ. ಮೂರನೇ ಹೆಜ್ಜೆಯನ್ನು ಎಲ್ಲಿಡಬೇಕು ?

ಅವನು ಮಹಾಬಲಿಯ ಕಡೆ ನೋಡಿದ. ನಿಷ್ಠಾವಂತನಾದ ಮಹಾಬಲಿ ಎಂದಿಗೂ ಮಾತಿಗೆ ತಪ್ಪಿ ನಡೆದುಕೊಂಡವನಲ್ಲ. ಮೂರನೇ ಹೆಜ್ಜೆಯನ್ನು ತನ್ನ ತಲೆಯ ಮೇಲಿಡುವಂತೆ ಚಕ್ರವರ್ತಿ ವಾಮನನನ್ನು ಕೇಳಿಕೊಂಡ. ವಾಮನ ಬಲಿಯ ತಲೆಯ ಮೇಲೆ ಕಾಲಿಟ್ಟ ಕೂಡಲೇ ಅವನು ಕೆಳಕ್ಕೆ ಹೋಗಲಾರಂಭಿಸಿದ. ಕೆಳಮುಖವಾಗಿ ಹೋಗಿ ಬಲಿಚಕ್ರವರ್ತಿ ಪಾತಾಳ ಲೋಕವನ್ನು ಮುಟ್ಟಿದ.

ಕಣ್ಮರೆಯಾಗುವುದಕ್ಕೆ ಮೊದಲು ಬಲಿಚಕ್ರವರ್ತಿ ವಿಷ್ಣುವಿನಲ್ಲಿ ಒಂದು ವರ ಬೇಡಿದ.

ತನ್ನ ಪ್ರೀತಿಯ ಜನರನ್ನು ನೋಡಲು ವರ್ಷಕ್ಕೊಮ್ಮೆ ಭೂಮಿಗೆ ಬರುವ ಅವಕಾಶವನ್ನು ಕರುಣಿಸಬೇಕೆಂದು ಬಲಿಚಕ್ರವರ್ತಿ ಬೇಡಿದ. ಇದಕ್ಕೆ ವಿಷ್ಣು ಒಪ್ಪಿಕೊಂಡ.

ಮಹಾಬಲಿಯ ಅಪಾರ ತ್ಯಾಗದ ಕುರುಹಾಗಿ ಓಣಂ ಹಬ್ಬವನ್ನು ಆಚರಿಸಲಾಗುತ್ತದೆ. ಮಹಾಬಲಿಯ ಕಾಲದಲ್ಲಿ ಕೇರಳದಲ್ಲಿ ಸುಖ-ಸಂತೋಷಗಳು ನೆಲೆಸಿದ್ದವು. ಆದ್ದರಿಂದ ಪ್ರತಿ ವರ್ಷ ಕೇರಳದ ಜನರು ಈ ಹಬ್ಬದಲ್ಲಿ ಬಲಿಚಕ್ರವರ್ತಿಯನ್ನು ಕೃತಜ್ಞತೆಯಿಂದ ಸ್ಮರಿಸುವರು.

ಪ್ರಾಚೀನ ಕಾಲದ ಭವ್ಯ ಪರಂಪರೆಯನ್ನು ನೆನಪಿಗೆ ತರುವ ಜಾನಪದ ಗೀತೆಗಳನ್ನು ಕೇರಳದ ಎಲ್ಲೆಡೆ ಜನರು ಇಂದಿಗೂ ಹಾಡುವರು.

ಇದು ಮಹಾಬಲಿ ಆಳಿದ ನಾಡಾಗಿತ್ತು
ಸಕಲರಿಗೂ ಸಮಾನತೆಯಿತ್ತು
ಸುಖ-ಸಂತೋಷ ತುಂಬಿತ್ತು
ಅಪಾಯವಿಲ್ಲದೆ ಕಿಂಚಿತ್ತು
ಕಪಟ-ಮೋಸ ದೂರವಾಗಿತ್ತು
ಸತ್ಯವು ಎಲ್ಲೆಡೆ ತುಂಬಿತ್ತು

ಓಣಂ ಹಬ್ಬದ ಸಮಾರಂಭಗಳು ಹತ್ತು ದಿನಗಳ ಕಾಲ ನಡೆಯುತ್ತವೆ. ಮೊದಲ ದಿನ ದೊರೆ ಮಹಾಬಲಿ ಬರುತ್ತಾನೆ. ಅವನಿಗೆ ಸಡಗರ-ಸಂಭ್ರಮಗಳ ಸ್ವಾಗತ ದೊರೆಯುತ್ತದೆ. ಮನೆಯ ಮುಂದೆ, ನೆಲವನ್ನು ಸಗಣಿಯಿಂದ ಸಾರಿಸಿ, ಮಹಾಬಲಿ ಮತ್ತು ವಿಷ್ಣುವಿನ ಪ್ರತಿರೂಪಗಳೆಂದು ಭಾವಿಸಲಾಗುವ ಮಣ್ಣಿನ ಕಟ್ಟೆಗಳನ್ನು ಇರಿಸಲಾಗುವುದು. ಅವನ್ನು ಬಗೆಬಗೆಯ ಹೂವುಗಳಿಂದ ಸುಂದರವಾಗಿ ಅಲಂಕರಿಸಲಾಗುವುದು.

ಸಾಂಪ್ರದಾಯಿಕ ಪೂಜಾದಿಗಳ ಬಳಿಕ, ಮನೆಯ ಹಿರಿಯ ವ್ಯಕ್ತಿ, ಕುಟುಂಬದವರಿಗೆ ಮತ್ತು ಗೆಳೆಯರಿಗೆ ಹೊಸ ಬಟ್ಟೆಯ ಉಡುಗೊರೆಗಳನ್ನು ನೀಡುವರು. ಅನಂತರ ಅವರವರ ಅನುಕೂಲಕ್ಕೆ ತಕ್ಕಂತೆ ಹಬ್ಬದಡಿಗೆ ಮಾಡಿ ಊಟ ಮಾಡುವರು.

ಓಣಂ ಹಬ್ಬದಲ್ಲಿ ನೃತ್ಯಗಳು ಮತ್ತು ಕ್ರೀಡೆಗಳೂ ಸಹ ಉಂಟು. ಈ ಹಬ್ಬಕ್ಕೆ ಸಂಬಂಧಿಸಿದಂತೆ 'ಕೈಕೊಟ್ಟಿಕ್ಕಳಿ' ಎಂಬ ವಿಶೇಷ ನೃತ್ಯವಿದೆ. 'ಅರಣ್ಮುಲ' ದೋಣಿ ಪಂದ್ಯ ಈ ಹಬ್ಬದಲ್ಲಿ ನಡೆಯುವ ಅತ್ಯಂತ ರೋಮಾಂಚಕ ಕ್ರೀಡೆ. ಈ ಪಂದ್ಯವನ್ನು ನೋಡಲು ಹತ್ತಿರದ ಮತ್ತು ದೂರದ ಊರುಗಳಿಂದ ಅತ್ಯಧಿಕ ಸಂಖ್ಯೆಯ ಜನರು



ಬರುತ್ತಾರೆ. ಸರ್ಪಾಕಾರದ ದೋಣಿಗಳನ್ನು ನೀರಿನಲ್ಲಿ ನಡೆಸಿಕೊಂಡು ಹೋಗುವುದನ್ನು ಕಂಡು ಜನರು ಆನಂದಿಸುವರು. ಈಗ ಜನರು ಹಳೆಯ ಕಾಲದ ಮನರಂಜನಾ ವಿಧಾನಗಳಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಸಿನಿಮಾ ಮತ್ತು ಇತರ ಮನರಂಜನಾ ಸಾಧನಗಳು ಹೆಚ್ಚು ಜನಪ್ರಿಯವಾಗುತ್ತಿವೆ.

ಓಣಂ ಹಬ್ಬವನ್ನು ಕ್ರಿ.ಶ. 861ರಲ್ಲೇ ಆಚರಿಸಲಾಗಿತ್ತೆಂದು ತಾಮ್ರ ಫಲಕದ ಶಾಸನಗಳಿಂದ ತಿಳಿದುಬರುತ್ತದೆ. ದಕ್ಷಿಣ ಭಾರತದ ಇತರ ಕೆಲವು ಭಾಗಗಳಲ್ಲಿ ಈ ಹಬ್ಬವನ್ನು ಇದಕ್ಕೂ ಮೊದಲು ಆಚರಿಸಲಾಗುತ್ತಿತ್ತೆಂಬುದು ಇತಿಹಾಸಕಾರರ ಅಭಿಪ್ರಾಯ.

ದೊರೆ ಮಹಾಬಲಿಯನ್ನು ಸಿಂಹಾಸನದಿಂದ ಉರುಳಿಸಿದ ವಿಷ್ಣುವನ್ನು ಸಹ ಈ ಸಂದರ್ಭದಲ್ಲಿ ಏಕೆ ಆರಾಧಿಸಲಾಗುತ್ತದೆ ಎನ್ನುವುದು ಒಂದು ಸ್ವಾರಸ್ಯದ ಪ್ರಶ್ನೆ. ಮೊದಲು ಮಹಾಬಲಿಯನ್ನು ಮಾತ್ರ ಪೂಜಿಸಲಾಗುತ್ತಿತ್ತು. ಕಾಲಾನಂತರದಲ್ಲಿ ವೈಷ್ಣವರು ಮಹಾಬಲಿಯ ಜೊತೆಗೆ ವಿಷ್ಣುವನ್ನೂ ಸಹ ಆರಾಧಿಸಲಾರಂಭಿಸಿದರು.


ಕೊಚ್ಚಿಯ ಬಳಿ ತ್ರಿಕ್ಕಾಕಾರ ಎಂಬಲ್ಲಿ ವಾಮನನ ದೇವಾಲಯವೊಂದನ್ನು ಸ್ಥಾಪಿಸಿದ

ಬಳಿಕ ಓಣಂ ಮತ್ತಷ್ಟು ಜನಪ್ರಿಯವಾಯಿತು. ಈ ದೇವಾಲಯವನ್ನು ಕ್ರಿ.ಶ. ಎಂಟನೇ ಶತಮಾನದಲ್ಲಿ ನಿರ್ಮಿಸಲಾಯಿತು.

ಈ ಹಬ್ಬ ಮೊದಲು ಅಸ್ಸಿರಿಯಾದಲ್ಲಿ ಆರಂಭವಾಗಿರಬೇಕೆಂದು ಕೆಲವು ಇತಿಹಾಸಕಾರರು ಭಾವಿಸಿದ್ದಾರೆ. ದ್ರಾವಿಡರ ಪೂರ್ವಜರು, ಬಹುಶಃ ಆ ಪ್ರದೇಶದಿಂದ ಭಾರತಕ್ಕೆ ಬಂದಿರಬಹುದು. ಮಹಾಬಲಿ ಆ ಜನರ ಮೆಚ್ಚುಗೆ ಗಳಿಸಿದ್ದ ರಾಜರಲ್ಲೊಬ್ಬನಾಗಿರಬಹುದೆಂದು ಅವರು ಭಾವಿಸಿದ್ದಾರೆ.

ಜನರ ಮನ ಸೆಳೆದಿದೆಯೆಂಬುದೊಂದೇ ಈ ಹಬ್ಬದ ಪ್ರಾಮುಖ್ಯತೆಗೆ ಕಾರಣವಲ್ಲ. ಈ ಹಬ್ಬ ಜಾತ್ಯತೀತ ಸ್ವರೂಪವನ್ನು ಹೊಂದಿದೆ. ಜಾತಿ-ಮತಗಳ ಭೇದ-ಭಾವದಿಂದ ದೂರವಾಗಿರುವ ಈ ಹಬ್ಬವನ್ನು ಹಿಂದುಗಳು, ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರು ಆಚರಿಸುವರು. ಇದು ಎಲ್ಲ ಮಲಯಾಳಿಗಳ ಆಶೆ-ಆಕಾಂಕ್ಷೆಗಳ ಸಂಕೇತ.

ಮೂಲ ಮಲಯಾಳಂ: ಕೆ.ಕೆ.ಸಿ. ನಾಯರ್



ಈದ್

ಈದ್ ಮುಸಲ್ಮಾನರ ಒಂದು ಹಬ್ಬ. ಪ್ರತಿ ವರ್ಷ ಎರಡು ಈದ್‌ಗಳು ಬರುತ್ತವೆ. ಅವಕ್ಕೆ, ಈದ್-ಉಲ್-ಫಿತರ್ ಮತ್ತು ಈದ್-ಉಲ್-ಜ್ಹುಹಾ ಎಂದು ಹೆಸರು. ಇವೆರಡು ಹಬ್ಬಗಳಲ್ಲಿ ಈದ್-ಉಲ್-ಫಿತರ್ ಹೆಚ್ಚು ಪ್ರಚಲಿತ.

ಮುಸಲ್ಮಾನರ ಧಾರ್ಮಿಕ ಪಂಚಾಂಗ ಚಾಂದ್ರಮಾನ ತಿಂಗಳುಗಳ ಮೇಲೆ ಆಧಾರಗೊಂಡಿದೆ. ಒಂಭತ್ತನೇ ತಿಂಗಳಿಗೆ ರಂಜಾನ್ ಎಂದು ಹೆಸರು. ಈ ಒಂದು ತಿಂಗಳಲ್ಲಿ ಮುಸಲ್ಮಾನರು ಸೂರ್ಯೋದಯದಿಂದ ಸೂರ್ಯಾಸ್ತಮದವರೆಗೆ ಉಪವಾಸ ಮಾಡುವರು. ಆಗ, ಅವರು ಏನನ್ನೂ ತಿನ್ನುವುದಿಲ್ಲ, ಕುಡಿಯುವುದಿಲ್ಲ ಮತ್ತು ಯಾವ ಸುಖವನ್ನೂ ಅನುಭವಿಸುವುದಿಲ್ಲ. ಈ ಅವಧಿಯಲ್ಲಿ ಔಷಧ ಮತ್ತು ನೀರನ್ನು ಸಹ ಕುಡಿಯುವಂತಿಲ್ಲ. ಸಿಗರೇಟ್, ಬೀಡಿ ಮತ್ತು ಗುಡಿಗುಡಿ ಸೇದುವುದು ಸಹ ನಿಷಿದ್ಧ. ಈ ಅವಧಿಯಲ್ಲಿ ವಿವಾದಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವರು ಪ್ರಯತ್ನಿಸುವರು. ಅವರಿವರೊಡನೆ ಜಗಳವಾಡುವುದು, ಅನ್ಯರನ್ನು ಬೈಯುವುದು, ಸುಳ್ಳು ಹೇಳುವುದು,

ವಂಚಿಸುವುದು ಇಂತಹ ದುರ್ನಡತೆಯಲ್ಲಿ ಕೈಹಾಕುವ ಹಾಗಿಲ್ಲ. ಈ ನಿಯಮಗಳನ್ನು ಉಲ್ಲಂಘಿಸಿದವರು ರಂಜಾನ್ ತತ್ವಗಳಿಗೆ ವಿರುದ್ಧವಾಗಿ ನಡೆದುಕೊಂಡಂತಾಗುವುದು. ಅವರಿಗೆ ಅಪಯಶಸ್ಸು ಉಂಟಾಗುವುದು. ಯಾರಾದರೂ ಉದ್ದೇಶಪೂರ್ವಕವಾಗಿ ಏನನ್ನಾದರೂ ತಿಂದಿದ್ದರೆ ಅಥವಾ ಕುಡಿದಿದ್ದರೆ ಪ್ರಾಯಶ್ಚಿತ್ತಕ್ಕಾಗಿ ರಂಜಾನ್ ತಿಂಗಳು ಮುಗಿದ ನಂತರವೂ ಉಪವಾಸ ಮಾಡಬೇಕಾಗುವುದು.

ಇಡೀ ರಂಜಾನ್ ತಿಂಗಳನ್ನು ದೀರ್ಘಾವಧಿಯ ಒಂದೇ ಹಬ್ಬವನ್ನಾಗಿ ಆಚರಿಸಲಾಗುವುದು. ಇದನ್ನು ಹಬ್ಬದ ಮಾಸವೆಂದು ವರ್ಣಿಸಬಹುದು. ಈ ಮಾಸವನ್ನು ಮುಸಲ್ಮಾನರು ಕಾತುರದಿಂದ ಎದುರು ನೋಡುವರು. ಒಂದು ತಿಂಗಳ ಉಪವಾಸದ ಕೊನೆಯಲ್ಲಿ ಈದ್-ಉಲ್-ಫಿತರ್ ಬರುತ್ತದೆ.

ರಂಜಾನ್‌ನ ಹೊಸ ಚಂದ್ರ ಕಾಣಿಸಿಕೊಂಡ ಕೂಡಲೇ ಈದ್ ಹಬ್ಬಕ್ಕಾಗಿ ಸಿದ್ಧತೆಗಳು ಆರಂಭವಾಗುತ್ತವೆ. ಈ ರಂಜಾನ್ ತಿಂಗಳಲ್ಲಿ ಚಿಕ್ಕವರು ಮತ್ತು ದೊಡ್ಡವರೆಲ್ಲರೂ ತರಾವ್ಹಿ ಎಂಬ ವಿಶೇಷ ಪ್ರಾರ್ಥನೆಯನ್ನು ಪಠಿಸುವರು. ಇದಲ್ಲದೇ ರಾತ್ರಿ ಹೊತ್ತು ಇಶ ಎಂಬ ಪ್ರಾರ್ಥನೆ ಮಾಡುವರು. ಕೊರಾನ್‌ನ ಕಂಠಪಾಠ ಮಾಡಿರುವವರು. ಇಡೀ ತಿಂಗಳು ಕೊರಾನ್ ಅನ್ನು ಪಠಿಸುವರು.

ಮುಂಜಾನೆಯ ಊಟಕ್ಕೆ ಸೆಹ್ರಿ ಎಂದು ಹೆಸರು. ಈ ಊಟಕ್ಕೆ ಹಾಲಿನಲ್ಲಿ ಬೇಯಿಸಿದ ತಿಂಡಿಗಳನ್ನು ಸೇವಿಸುವರು ಮತ್ತು ಚಹಾ ಅಥವಾ ನೀರನ್ನು ಕುಡಿಯುವರು. ಸೆಹ್ರಿ ಮುಗಿಯುತ್ತಿದ್ದಂತೆ ಮಸೀದಿಯ ಸ್ತಂಭಗೋಪುರದಿಂದ ಪ್ರಾರ್ಥನೆಗಾಗಿ ಕರೆ ಕೇಳಿಬರುತ್ತದೆ. ಉಪವಾಸ ಆಗ ಆರಂಭವಾಗುತ್ತದೆ. ಸೂರ್ಯ ಮುಳುಗುವವರೆಗೆ ಏನನ್ನೂ ತಿನ್ನುವ ಹಾಗಿಲ್ಲ. ಪ್ರಾರ್ಥನೆಯ ಕೂಗು ಕೇಳಿಸಿದ ಕೂಡಲೇ ಗಂಡಸರು ಮತ್ತು ಗಂಡುಮಕ್ಕಳು ಹತ್ತಿರದ ಮಸೀದಿಗೆ ಹೊರಡುವರು. ಕೈಕಾಲು ಮತ್ತು ಮುಖವನ್ನು ತೊಳೆದು, ಪ್ರಾರ್ಥನೆಗಾಗಿ ಸಾಲುಗಟ್ಟಿ ನಿಲ್ಲುವರು. ಸ್ವಲ್ಪ ಹೊತ್ತಿನ ಬಳಿಕ ಪವಿತ್ರ ಕೊರಾನ್ ಪಠಣವನ್ನು ಕೇಳುವರು. ನಂತರ ದಿನದ ಪ್ರಾರ್ಥನಾ ವಿಧಿಗಳನ್ನು ನೆರವೇರಿಸುವರು.

ಈಗ ಪ್ರತಿಯೊಬ್ಬರು ತಮ್ಮ ತಮ್ಮ ಕೆಲಸಕ್ಕೆ ಹೊರಡುತ್ತಾರೆ. ಹೆಂಗಸರು ಮನೆಗೆಲಸದಲ್ಲಿ ತೊಡಗುತ್ತಾರೆ. ಕಚೇರಿಗಳಿಗೆ ಮತ್ತು ಕಾರ್ಖಾನೆಗಳಿಗೆ ಕೆಲವರು ಹೋಗುತ್ತಾರೆ. ವ್ಯಾಪಾರಸ್ಥರು ತಮ್ಮ ತಮ್ಮ ಅಂಗಡಿಗಳಿಗೆ ಹೊರಡುತ್ತಾರೆ. ಹೀಗೆ, ಉಪವಾಸದಿಂದ ಅವರ ನಿತ್ಯದ ಕೆಲಸ ಕಾರ್ಯಗಳಿಗೆ ಕಿಂಚಿತ್ತೂ

ತೊಂದರೆಯಾಗುವುದಿಲ್ಲ. ಈ ಅವಧಿಯಲ್ಲಿ ಅವರು ಇನ್ನೂ ಹೆಚ್ಚಿನ ಉತ್ಸಾಹದಿಂದ ಕೆಲಸ ಮಾಡುವರು.

ಸೂರ್ಯಾಸ್ತಮವಾಗುತ್ತಿದ್ದಂತೆ ಮಸೀದಿಯಿಂದ ಮಘರೆಬ್ ಪ್ರಾರ್ಥನೆಗಳಿಗಾಗಿ ಕರೆ ಕೊಡಲಾಗುತ್ತದೆ. ಇದು ಅವತ್ತಿನ ಉಪವಾಸವನ್ನು ಅಂತ್ಯಗೊಳಿಸಬಹುದೆನ್ನುವುದಕ್ಕೆ ಸೂಚನೆ. ಉಪವಾಸವನ್ನು ಅಂತ್ಯಗೊಳಿಸುವುದಕ್ಕೆ ಇಫ್ತಾರ್ ಎನ್ನುವರು. ಒಂದು ಗುಟುಕು ನೀರು ಕುಡಿದು ಮತ್ತು ಒಂದಿಷ್ಟು ಖರ್ಜೂರ ಅಥವಾ ಇನ್ನಾವುದಾದರೂ ಹಣ್ಣು ತಿಂದು ಉಪವಾಸ ಕೊನೆಗೊಳಿಸುವರು. ಕೆಲವು ಹೆಂಗಸರು ಕಲ್ಲುಪ್ಪು ಬಾಯಿಗೆ ಹಾಕಿಕೊಳ್ಳುವರು. ಅನಂತರ ಇಸ್ಲಾಂ ಧರ್ಮದಲ್ಲಿ ನಿಷಿದ್ಧವಲ್ಲದಂತಹ ಯಾವುದೇ ಪದಾರ್ಥವನ್ನಾಗಲೀ ತಿನ್ನಬಹುದು ಅಥವಾ ಕುಡಿಯಬಹುದು.

ಈದ್ ಹಬ್ಬದಲ್ಲಿ ಬಗೆಬಗೆಯ ತಿನಿಸುಗಳನ್ನು ತಯಾರಿಸಲಾಗುವುದು. ಹುಣಿಸೇ ಹಣ್ಣಿನಿಂದ ತಯಾರಿಸಿದ ಗೊಜ್ಜು, ಹುರಿದ ಹಿಟ್ಟು, ಬೇಯಿಸಿದ ಕಡಲೆಕಾಳು ಮತ್ತು ಚೆನ್ನಂಗಿ ಬೇಳೆ, ಮಾಂಸದ ಕಬಾಬ್‌ಗಳು ಮತ್ತು ಸಿಹಿ ತಿಂಡಿಗಳು ಇವು ವಿಶೇಷವಾಗಿ ತಯಾರಿಸಲ್ಪಡುವ ಪದಾರ್ಥಗಳು. ರಂಜಾನ್ ಮಾಸ ಬಂದಾಗ ಬಿಸಿಲು ಹೆಚ್ಚಾಗಿದ್ದರೆ ನಾನಾ ವಿಧದ ಶರಬತ್ತುಗಳನ್ನು ತಯಾರಿಸಲಾಗುವುದು.

ಬಳಿಕ ಇಫ್ತರಿ ಎಂಬ ಸಾಯಂಕಾಲದ ಪ್ರಾರ್ಥನೆ ನಡೆಯುತ್ತದೆ. ಆ ಬಳಿಕ ರಾತ್ರಿಯ ಭೋಜನ. ಭೋಜನಾನಂತರ ರಾತ್ರಿಯ ಪ್ರಾರ್ಥನೆ (ಇಶ). ಇದರ ಜೊತೆಗೇ ತರಾವ್ಹಿ ಪ್ರಾರ್ಥನೆ ಸಹ ನಡೆಯುವುದು. ಅನಂತರ ಮಲಗುವರು.

ಹೀಗೆ ರಂಜಾನ್‌ನ ಇಪ್ಪತ್ತೊಂಬತ್ತು ಅಥವಾ ಮೂವತ್ತು ದಿನಗಳು ಕಳೆಯುತ್ತವೆ. ಇಪ್ಪತ್ತೊಂಬತ್ತು ದಿನಗಳ ನಂತರ ಹೊಸ ಚಂದ್ರ ಕಾಣಿಸಿಕೊಂಡರೆ, ಇನ್ನೊಂದು ಹೆಚ್ಚಿಗೆ ದಿನ ಉಪವಾಸ ಮಾಡುವರು. ಚಂದ್ರ ಕಾಣಿಸಿಕೊಳ್ಳುತ್ತಿದ್ದಂತೆ ಈದ್-ಉಲ್-ಫಿತರ್ ಹಬ್ಬದ ಸಡಗರ ಆರಂಭವಾಗುತ್ತದೆ. ಇಲ್ಲಿಗೆ ರಂಜಾನ್ ಮಾಸ ಮುಗಿದಂತಾಗುತ್ತದೆ. ಈದ್-ಉಲ್-ಫಿತರ್ ಎಂದರೆ ಉಪವಾಸದ ದಿನಗಳು ಮುಗಿದಿದ್ದಕ್ಕಾಗಿ ಆನಂದೋತ್ಸಾಹವನ್ನಾಚರಿಸುವುದು ಎಂದರ್ಥ.

ಚಂದ್ರ ಕಾಣಿಸಿದ ಮಾರನೇ ದಿನ ಹಬ್ಬವನ್ನು ಅತ್ಯಂತ ಸಂಭ್ರಮದಿಂದ ಆಚರಿಸಲಾಗುವುದು. ಎಲ್ಲ ಮುಸಲ್ಮಾನರು ಹೊಸ ಬಟ್ಟೆಗಳನ್ನು ಧರಿಸುವರು. ಪ್ರಾರ್ಥನೆಗಾಗಿ ಮಸೀದಿಗಳಲ್ಲಿ, ಈದ್‌ಗಾಗಳಲ್ಲಿ ಅಥವಾ ಬಯಲಿನಲ್ಲಿ ಒಟ್ಟಾಗಿ ಸೇರುವರು. ಈದ್ ನಮಾಜ್ ಮುಂಜಾನೆ ಮತ್ತು ಮಧ್ಯಾಹ್ನದ ಪ್ರಾರ್ಥನೆಗಳ ನಡುವಣ

ಅವಧಿಯಲ್ಲಿ ನಡೆಯುವುದು. ಪ್ರಾರ್ಥನೆಯ ನಂತರ, ಜನರು ಒಬ್ಬರನ್ನೊಬ್ಬರು ಆಲಂಗಿಸಿ, 'ಈದ್ ಮುಬಾರಕ್' ಎಂದು ಹೇಳಿ ಪರಸ್ಪರ ಶುಭಾಶಯ ಕೋರುವರು.

ಈದ್-ಉಲ್-ಫಿತರ್ ಹಬ್ಬದಲ್ಲಿ ಮಕ್ಕಳು ಹಿಗ್ಗಿ ಕುಣಿಯುತ್ತಾರೆ. ಈದ್ ಚಂದ್ರ ಕಾಣಿಸಿದನೆಂಬ ಸುದ್ದಿ ಕೇಳಿದ್ದೇ ತಡ ಅವರು ಮರು ದಿನ ಬೆಳಿಗ್ಗೆ ತಾವು ಧರಿಸಬೇಕಾದ ಹೊಸ ಬಟ್ಟೆಗಳನ್ನು ಹೊರಗೆ ತೆಗೆದಿಟ್ಟುಕೊಳ್ಳುತ್ತಾರೆ. ಹುಡುಗರು ಹೊಸ ಕಾಲುಚೀಲಗಳನ್ನು ಕೊಂಡರೆ, ಹುಡುಗಿಯರು ಹೊಸ ಹೇರ್‌ಪಿನ್ನುಗಳನ್ನು ಕೊಳ್ಳುವರು. ಹುಡುಗರು ಈದ್ ಪ್ರಾರ್ಥನೆಗಾಗಿ ಒಳ್ಳೊಳ್ಳೆಯ ಟೋಪಿಗಳನ್ನು ಆರಿಸಿಟ್ಟುಕೊಳ್ಳುವರು. ಹೆಣ್ಣುಮಕ್ಕಳು ತಮ್ಮ ಹೊಸ ಉಡುಪುಗಳಿಗೆ ಹೊಂದುವ ದುಪ್ಪಟ್ಟಗಳಿಗೆ ಏರ್ಪಾಡು ಮಾಡಿಕೊಳ್ಳುವ ಗಡಿಬಿಡಿಯಲ್ಲಿರುತ್ತಾರೆ. ಹೀಗೆ ಮುಸಲ್ಮಾನರ ಪ್ರತಿಯೊಂದು ಮನೆ, ಸಡಗರ-ಸಂಭ್ರಮಗಳಿಂದ ಗಿಜಿಗಿಜಿಗುಟ್ಟುತ್ತದೆ.

ಈದ್ ಹಬ್ಬದ ಹಿಂದಿನ ದಿನ ಇಡೀ ರಾತ್ರಿ ಮುಸಲ್ಮಾನರ ಅಂಗಡಿಗಳು ತೆರೆದಿರುತ್ತವೆ. ಈದ್ ಹಬ್ಬವನ್ನು ಅತ್ಯಂತ ಸಂಭ್ರಮದಿಂದ ಆಚರಿಸಲು ತಮಗೆ ಬೇಕಾದ ಯಾವ ಸಾಮಗ್ರಿಯನ್ನು ಬೇಕಾದರೂ ಕೊಳ್ಳಲು ಅವರಿಗೆ ಅವಕಾಶವಿರುತ್ತದೆ. ರಾತ್ರಿ ಎಷ್ಟೇ ತಡವಾಗಿ ಮಲಗಿದರೂ ಪ್ರತಿಯೊಬ್ಬರೂ ಅಂದು ಅತಿ ಮುಂಜಾನೆ ಏಳುತ್ತಾರೆ. ದೊಡ್ಡವರಿಗಿಂತಲೂ ಮುಂಚೆ ಮಕ್ಕಳು ಎದ್ದಿರುತ್ತಾರೆ. ಅವರು ಬೇಗನೆ ಸ್ನಾನ ಮಾಡಿ, ಹೊಸ ಬಟ್ಟೆ ಧರಿಸಿ, ಪ್ರಾರ್ಥನೆಗಾಗಿ ಮಸೀದಿಗೆ ಅಥವಾ ಈದ್‌ಗಾಗೆ ಹೊರಡಲು ಸಿದ್ಧರಾಗಿ ನಿಂತಿರುತ್ತಾರೆ. ಮಸೀದಿಗೆ ಹೋಗಲು ಅವರು ತೋರುವ ಉತ್ಸಾಹಕ್ಕೆ ಕಾರಣವುಂಟು. ಮಸೀದಿಗೆ ಹೊರಡುವ ಮುನ್ನ ಹಿರಿಯರು ಮಕ್ಕಳ ಕೈಲಿ ಹಣ ಇಡುತ್ತಾರೆ. ಇದು ಅವರು ದಿನದ ಖರ್ಚಿಗೆ ಪಡೆಯುವ ಹಣಕ್ಕಿಂತ ಹೆಚ್ಚಾಗಿರುತ್ತದೆ. ಈ ಹಣಕ್ಕೆ 'ಈದಿ' ಎಂದು ಹೆಸರು. ಮನೆಗೆ ಹಿಂದಿರುಗುವಾಗ ಮಕ್ಕಳು ಈ ಹಣವನ್ನು ಕೊಟ್ಟು ಆಟದ ಸಾಮಾನುಗಳು, ಬಲೂನ್‌ಗಳು ಮತ್ತು ಸಿಹಿತಿಂಡಿಗಳನ್ನು ಕೊಳ್ಳುವರು. ಅನಂತರ ಅವರು ತಮ್ಮ ತಾತ, ಅಜ್ಜಿಯರು ಮತ್ತು ಇತರ ಬಂಧುಗಳ ಬಳಿ ಹೋಗಿ ಇನ್ನಷ್ಟು ಹಣವನ್ನು ಮತ್ತು ಸಿಹಿತಿಂಡಿಯನ್ನು ಪಡೆಯುವರು. ಈದ್‌ಗಾಗಿ ಕೆಲವು ವಿಶೇಷ ತಿಂಡಿಗಳನ್ನು ತಯಾರಿಸುವರು. ಸೇವಿಗೆ ಪದಾರ್ಥ ಈ ವಿಶೇಷ ತಿನಿಸುಗಳಲ್ಲಿ ಅತಿ ಮುಖ್ಯ. ಸಿಹಿ ತಿಂಡಿಗಳಲ್ಲದೇ ಅನೇಕ ಉಪ್ಪು-ಖಾರದ ತಿಂಡಿಗಳನ್ನು ಸಹ ತಯಾರಿಸಲಾಗುವುದು. ಅನೇಕ ಪ್ರದೇಶಗಳಲ್ಲಿ ಈದ್ ಹಬ್ಬದ ಸಮಾರಂಭಗಳಲ್ಲಿ ಇತರ ಧರ್ಮಗಳ ಜನರು ಸಹ ಪಾಲ್ಗೊಳ್ಳುವರು.




ಈದ್-ಉಲ್-ಫಿತರ್ ಆದ ಸುಮಾರು ಎರಡು ತಿಂಗಳು ಮತ್ತು ಒಂಭತ್ತು ದಿನಗಳ ನಂತರ ಈದ್-ಉಲ್-ಜ್ಜುಹ ಹಬ್ಬ ಬರುತ್ತದೆ. ಈ ಸಂದರ್ಭದಲ್ಲಿ ಮುಸಲ್ಮಾನರು ಮೆಕ್ಕಾ ಯಾತ್ರೆ ಕೈಗೊಳ್ಳುವರು. ಈ ಯಾತ್ರೆಗೆ 'ಹಜ್' ಎಂದು ಹೆಸರು. ಈ ಹಬ್ಬದಲ್ಲಿ ಮುಸಲ್ಮಾನರು ದೇವರಿಗೆ ಆಡು ಮತ್ತು ಕುರಿಗಳನ್ನು ಬಲಿ ಕೊಡುವರು. ದೈವಾಜ್ಞೆಯ ಮೇರೆಗೆ, ಪ್ರವಾದಿ ಅಬ್ರಹ್ಯಾಂ, ತನ್ನ ಮಗ ಇಸ್ಮಾಯಿಲ್‌ನನ್ನು ಬಲಿಕೊಡಲು ಪ್ರಯತ್ನಿಸಿದ್ದರ ಕುರುಹಾಗಿ ಈ ಹಬ್ಬವನ್ನು ಆಚರಿಸಲಾಗುವುದು. ದೇವರ ಆಣತಿಯಂತೆ ಅಬ್ರಹ್ಯಾಂ ತನ್ನ ಮಗನನ್ನು ಕೊಲ್ಲುವುದರಲ್ಲಿದ್ದ: ಅಷ್ಟು ಹೊತ್ತಿಗೆ ಒಂದು ಪವಾಡ ಜರುಗಿತು. ಇಸ್ಮಾಯಿಲ್ ಜಾಗದಲ್ಲಿ ಒಂದು ಕುರಿ ನಿಂತುಕೊಂಡಿತ್ತು. ಈದ್-ಉಲ್-ಜ್ಜುಹ ಈ ಮಹಾನ್ ತ್ಯಾಗದ ಸಂಕೇತ.

ಈದ್-ಉಲ್-ಫಿತರ್‌ನಂತೆ, ಈದ್-ಉಲ್-ಜ್ಜುಹದಲ್ಲೂ, ಬೆಳಗಿನ ಪ್ರಾರ್ಥನೆಯ ಜೊತೆಗೆ ವಿಶೇಷ ಪ್ರಾರ್ಥನೆಗಳು ನಡೆಯುತ್ತವೆ. ಜನರು ಒಬ್ಬರನ್ನೊಬ್ಬರು ಆಲಂಗಿಸಿಕೊಂಡು ಶುಭಾಶಯಗಳನ್ನು ಕೋರುವರು. ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಯಾವುದಾದರೊಂದು ಪ್ರಾಣಿಯನ್ನು ಬಲಿಕೊಡುವರು. ಬಲಿ ಕೊಟ್ಟ ಪ್ರಾಣಿಯ ಮಾಂಸವನ್ನು ಬಡ-ಬಗ್ಗರಿಗೆ ಹಂಚಲಾಗುವುದು. ಈದ್-ಉಲ್-ಜ್ಜುಹಗೆ ಈದ್-ಉಲ್-ಕುರ್ಬಾನ್ ಎಂಬ ಹೆಸರು ಸಹ ಇದೆ. ಈ ಹಬ್ಬದಲ್ಲೂ ಮಕ್ಕಳಿಗೆ ಹಣ ಸಿಗುತ್ತದೆ. ಆದರೆ, ಈದ್-ಉಲ್-ಫಿತರ್‌ನಲ್ಲಿರುವಷ್ಟು ಭಾರಿ ಸಂಭ್ರಮವಿರುವುದಿಲ್ಲ.

ಇನ್ನೂ ಒಂದು ಈದ್ ಹಬ್ಬವಿದೆ. ಅದಕ್ಕೆ ಈದ್-ಇ-ಮಿಲಾದ್ ಉನ್-ನಬಿ ಎಂದು ಹೆಸರು. ಪ್ರವಾದಿ ಮೊಹಮ್ಮದ್ ಅವರ ಹುಟ್ಟುಹಬ್ಬದ ಸಂಕೇತವಾಗಿ ಈ ಹಬ್ಬ ಆಚರಿಸಲಾಗುವುದು.

ಮೂಲ ಉರ್ದು: ಅನ್ವರ್ ಕಮಾಲ್ ಹುಸೇನಿ





ಗಣೇಶ ಚತುರ್ಥಿ

"ಗಣಪತಿ ಬಪ್ಪ ಮೋರ್ಯ
ಮಂಗಳಮೂರ್ತಿ ಮೋರ್ಯ"
(ಅಪ್ಪ ಗಣಪತಿ ಮರಳಿ ಬಾ!
ಶುಭಪ್ರದಾಯಕ ಮರಳಿ ಬಾ!)

ಗಣಪತಿ ಹಬ್ಬದಲ್ಲಿ ಎಲ್ಲಿ ಕಿವಿಗೊಟ್ಟರೂ ಇದೇ ಕೂಗು. ಇಡೀ ವಾತಾವರಣ ಜಾಗಟೆ-ಝುಲ್ಲರಿಗಳ ಶಬ್ದದಿಂದ ತುಂಬಿರುತ್ತದೆ.

ಗಣೇಶ ಚತುರ್ಥಿ ಭಾದ್ರಪದ ಮಾಸದ (ಅಂದರೆ ಆಗಸ್ಟ್-ಸೆಪ್ಟೆಂಬರ್ ತಿಂಗಳ) ನಾಲ್ಕನೇ ದಿನ ಬರುತ್ತದೆ. ಅಷ್ಟು ಹೊತ್ತಿಗೆ ಮಳೆಗಾಲ ಮುಗಿದಿರುತ್ತದೆ. ಇದು ಮಹಾರಾಷ್ಟ್ರೀಯರಿಗೆ ಅತಿ ದೊಡ್ಡ ಹಬ್ಬ. ಅಂದು ಶಾಲಾ-ಕಾಲೇಜುಗಳಿಗೆ ರಜೆ. ಮನೆಮಂದಿಯೆಲ್ಲ ಬಲು ಬೇಗನೆ ಏಳುತ್ತಾರೆ. ಸ್ನಾನ ಮಾಡಿ, ಹೊಸ ಬಟ್ಟೆಗಳನ್ನು

ಧರಿಸುತ್ತಾರೆ. ಮನೆ-ಮನೆಯಲ್ಲಿ ಮೋದಕಗಳನ್ನು ಮಾಡುವರು. ಹಬ್ಬದ ಸಡಗರದಿಂದ ಮನೆ ಕಂಗೊಳಿಸುತ್ತದೆ.

ಗಣಪತಿ ಪ್ರತಿಮೆಯನ್ನು ಕೊಳ್ಳಲು ಪೇಟೆಗೆ ಹೋಗುವುದೇ ಒಂದು ಸಂಭ್ರಮ. ಮಕ್ಕಳು ಸಹ ದೊಡ್ಡವರ ಜೊತೆ ಪೇಟೆಗೆ ಹೋಗುವರು. ಪೇಟೆಯಲ್ಲಿ ಅಂದು ವಿಪರೀತ ಗಡಿಬಿಡಿ. ಎಲ್ಲಿ ನೋಡಿದರೂ ಜನರ ಗಿಜಿಗಿಜಿ ಗುಂಪು. ಮಕ್ಕಳು ಗುಂಪನ್ನು ಸೀಳಿಕೊಂಡು ಮುನ್ನುಗ್ಗುವರು. ಯಾವ ಗಣಪತಿ ಪ್ರತಿಮೆಯನ್ನು ನೋಡಿದರೂ ಮಕ್ಕಳಿಗೆ ಮುದ್ದಾಗಿ ಕಾಣುತ್ತದೆ. "ಈ ಗಣಪತಿ ಎಷ್ಟು ಮುದ್ದಾಗಿದೆ ಅಪ್ಪ, ಇದನ್ನೇ ಕೊಳ್ಳೋಣ" ಎಂದು ಅಪ್ಪನನ್ನು ಹಿಡಿದು ನಿಲ್ಲಿಸುವರು. ದೊಡ್ಡ ಗಾತ್ರದ ಗಣಪತಿ ಪ್ರತಿಮೆಯೆಂದರೆ ಮಕ್ಕಳಿಗೆ ಬಲು ಇಷ್ಟ. ಅಂಗಡಿಯಲ್ಲಿ ನಾನಾ ಗಾತ್ರಗಳ ಮತ್ತು ನಾನಾ ಬಣ್ಣಗಳ ಗಣಪತಿ ಪ್ರತಿಮೆಗಳನ್ನು ಸಾಲಾಗಿ ಇಟ್ಟಿರುತ್ತಾರೆ. ಒಂದೊಂದೂ ಅತಿ ಸುಂದರವಾಗಿರುತ್ತದೆ. ನುರಿತ ಕೆಲಸಗಾರರು ಮಾಡಿದ ಪ್ರತಿಮೆಗೆ ಹೆಚ್ಚು ಬೆಲೆ. ದೊಡ್ಡ ಗಣಪತಿ ಪ್ರತಿಮೆಯನ್ನು ಕೊಳ್ಳುವ ಮಕ್ಕಳ ಆಸೆ ಈಡೇರದು. ಕಡೆಗೆ ಅಪ್ಪ ಕೊಳ್ಳುವುದು ಸಣ್ಣ ಪ್ರತಿಮೆಯನ್ನೇ.

ಗಣಪತಿಯನ್ನು ಮಣೆಯ ಮೇಲೆ ಇರಿಸಲಾಗುವುದು. ಆ ಮಣೆಯನ್ನು ಬಣ್ಣದಿಂದ ಚಿತ್ರಿಸಲಾಗಿರುತ್ತದೆ. ಗಣಪತಿಯನ್ನು ತಾವೇ ಹಿಡಿದುಕೊಂಡು ಹೋಗುವ ಆಸೆ ಮಕ್ಕಳಿಗೆ. ಪೇಟೆಯ ಜನಸಂದಣಿಯ ಮಧ್ಯೆ ಹೋಗುವಾಗ ಪ್ರತಿಮೆ ಕೈತಪ್ಪಿ ಬೀಳಬಹುದು. ಈ ಭಯದಿಂದ ಅದನ್ನು ಮಕ್ಕಳ ಕೈಗೆ ಕೊಡುವುದಿಲ್ಲ. ಪ್ರತಿಮೆ ಭಿನ್ನವಾದರೆ ಅಶುಭವೆಂದು ಭಾವಿಸಲಾಗುವುದು. ಆದ್ದರಿಂದ ದೊಡ್ಡವರೇ ಪ್ರತಿಮೆಯನ್ನು ಒಯ್ಯುವರು. ಮಕ್ಕಳು ಜಾಗಟೆ ಬಾರಿಸಿಕೊಂಡು ಹೋಗುವರು. ಹಾಗೆ ಹೋಗುವಾಗ 'ಗಣಪತಿ ಬಪ್ಪ ಮೋರ್ಯ' ಎಂದು ಜೋರಾಗಿ ಕೂಗುವರು. ಹೀಗೆ ಗಣಪತಿ ಮೆರವಣಿಗೆಯಲ್ಲಿ ಮನೆಗೆ ಬರುತ್ತಾನೆ.

ಮಹಾರಾಷ್ಟ್ರದಲ್ಲಿ ಅಂದು ಎಲ್ಲಿ ನೋಡಿದರೂ ಇದೇ ದೃಶ್ಯ. ಗಣಪತಿ ಪ್ರತಿಮೆಯನ್ನು ಮನೆಯಲ್ಲಿ ಪ್ರತಿಷ್ಠಾಪಿಸಲಾಗುವುದು. ಅನಂತರ ಪೂಜಿಸಲಾಗುವುದು. ಪ್ರತಿಮೆಗಳ ಗಾತ್ರ ಬೇರೆ-ಬೇರೆ, ಆದರೆ ರೂಪವೊಂದೇ. ಪ್ರತಿಮೆಯನ್ನು ಒಂದು ಪೀಠದ ಮೇಲೆ ಕೂಡಿಸಲಾಗುವುದು. ಗಣಪತಿಯ ಮುಂದೆ ಒಂದು ದೊಡ್ಡ ಪಾತ್ರೆಯ ತುಂಬ ಮೋದಕಗಳನ್ನಿಡುವರು. ಅಕ್ಕಿಹಿಟ್ಟು, ಬೆಲ್ಲ, ಕಾಯಿತುರಿ, ಏಲಕ್ಕಿ, ದ್ರಾಕ್ಷಿ, ಗೋಡಂಬಿ ಮುಂತಾದ ಪದಾರ್ಥಗಳಿಂದ ಮೋದಕ ತಯಾರಿಸಲಾಗುವುದು. ಗಣಪತಿಯನ್ನು ಕೆಲವರ

ಮನೆಯಲ್ಲಿ ಮೂವತ್ತಾರು ತಾಸುಗಳವರೆಗೆ ಮಾತ್ರ ಇಟ್ಟಿರುತ್ತಾರೆ. ಮತ್ತೆ ಕೆಲವರು ಐದರಿಂದ ಒಂಭತ್ತು ದಿನಗಳವರೆಗೆ ಇಟ್ಟಿರುತ್ತಾರೆ. ಕೆಲವರ ಮನೆಯಲ್ಲಿ ಅನಂತ ಚತುರ್ಥಿವರೆಗೂ ಇಡುವುದು ವಾಡಿಕೆ. ಇದು ಅವರವರ ಮನೆಯ ಸಂಪ್ರದಾಯವನ್ನು ಅವಲಂಬಿಸಿರುತ್ತದೆ.

ಮನೆಗೆ ತಂದ ಗಣಪತಿಯನ್ನು ವಿಶೇಷವಾಗಿ ಅಲಂಕರಿಸಿದ ಒಂದು ಮಂಟಪದಲ್ಲಿ ಕೂಡಿಸುವರು. ಮಕ್ಕಳು ಬಣ್ಣ ಬಣ್ಣದ ತಳಿರು-ತೋರಣಗಳಿಂದ ಹಾಗೂ ವಿದ್ಯುದ್ದೀಪಗಳಿಂದ ಆ ಮಂಟಪವನ್ನು ಅಲಂಕರಿಸುವರು. ನೆಂಟರಿಷ್ಟರ ಮತ್ತು ಸ್ನೇಹಿತರ ಮನೆಗಳಿಗೆ ಹೋಗಿ ಗಣಪತಿಗೆ ಹೇಗೆ ಅಲಂಕಾರ ಮಾಡಿದ್ದಾರೆ ಎಂಬುದನ್ನು ನೋಡಿಕೊಂಡು ಬರುತ್ತಾರೆ.

ಗಣಪತಿ ಮನೆಯಲ್ಲಿರುವಷ್ಟು ಕಾಲವೂ ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ಪೂಜೆ, ಪ್ರಾರ್ಥನೆ ಮತ್ತು ಆರತಿ ನಡೆಯುತ್ತದೆ. ಸಂಜೆಯ ವೇಳೆ ಭಜನೆ ನಡೆಯುತ್ತದೆ. ಕೆಲವರು ಪುರೋಹಿತರನ್ನು ಕರೆಸಿ ಪೂಜೆ ಮಾಡಿಸುವರು. ಕೆಲವು ಮನೆಗಳಲ್ಲಿ ತಾವೇ ಪೂಜೆ ಮಾಡಿಕೊಳ್ಳುವರು. ಗಣಪತಿಗೆ ಇಪ್ಪತ್ತೊಂದು ಗರಿಕೆಗಳನ್ನು ಹಾಕುವುದು ಮತ್ತು ತಾವರೆ ಹೂವನ್ನು ಅರ್ಪಿಸುವುದು ಹಾಗೂ ಇಪ್ಪತ್ತೊಂದು ಮೋದಕಗಳನ್ನು ನೈವೇದ್ಯ ಮಾಡುವುದು ವಾಡಿಕೆ. ಗಣಪತಿ ವಿದ್ಯಾ ದೇವರು. ಅವನನ್ನು ಭಜಿಸಿದರೆ ನಮ್ಮ ಕಷ್ಟ ಪರಿಹಾರವಾಗುತ್ತದೆ. ನಮ್ಮ ಪ್ರಯತ್ನಗಳು ಕೈಗೂಡುತ್ತವೆ. ಯಾವ ಶುಭ ಕೆಲಸವನ್ನು ಪ್ರಾರಂಭಿಸಬೇಕಾದರೂ ಮೊದಲು ಗಣಪತಿಯನ್ನು ಪ್ರಾರ್ಥಿಸುತ್ತೇವೆ. "ಶ್ರೀ ಗಣೇಶಾಯ ನಮಃ" ಎಂದು ಹೇಳಿ ಅವನಿಗೆ ನಮಸ್ಕರಿಸುತ್ತೇವೆ.

ಮನೆಗಳಲ್ಲಿ ಮಾತ್ರವಲ್ಲದೇ, ಸಾಮೂಹಿಕವಾಗಿಯೂ ಗಣಪತಿಯನ್ನು ಇಡಲಾಗುವುದು. ಒಂದು ನಿವೇಶನದಲ್ಲಿರುವ ಜನರು ಒಟ್ಟಾಗಿ ಸೇರಿ ಗಣಪತಿ ಉತ್ಸವ ನಡೆಸುವರು. ಹೀಗೆ ಕೂಡಿಸುವ ಗಣಪತಿಯ ಪ್ರತಿಮೆ ತುಂಬಾ ದೊಡ್ಡದಾಗಿರುತ್ತದೆ. ಕೆಲವು ಪ್ರತಿಮೆಗಳು ಇಪ್ಪತ್ತು ಅಡಿಗಳಷ್ಟು ಎತ್ತರವಿರುತ್ತವೆ. ಈ ಪ್ರತಿಮೆಗಳ ರೂಪ ಸಹ ಬೇರೆ-ಬೇರೆಯಾಗಿರುತ್ತವೆ. ಪುರಾಣಗಳಲ್ಲಿ, ರಾಮಾಯಣದಲ್ಲಿ ಮತ್ತು ಮಹಾಭಾರತದಲ್ಲಿ ಗಣಪತಿ ನಾನಾ ರೂಪಗಳಲ್ಲಿ ವ್ಯಕ್ತಗೊಂಡಿದ್ದಾನೆ. ಆದ್ದರಿಂದ ಕಾಳಿಂಗ ಮರ್ದನ ಮಾಡುತ್ತಿರುವ ಕೃಷ್ಣನ ರೂಪದಲ್ಲೋ ಅಥವಾ ರಾಕ್ಷಸ ವಧೆ ಮಾಡುತ್ತಿರುವ ರೂಪದಲ್ಲೋ ಈ ಗಣಪತಿ ಪ್ರತಿಮೆಯನ್ನು ಮಾಡಬಹುದು. ಹಿಂದೂಗಳ ದೇವಾಲಯಗಳಲ್ಲಿರುವ ಪ್ರತಿಯೊಂದು ದೇವರಲ್ಲೂ ಗಣಪತಿಯ ದೈನ್ಯ ಹಾಗೂ

ದಯಾಪರ ಭಾವನೆ ಕಾಣಿಸುವುದೆಂಬ ಭಾವನೆಯಿದೆ. ಸಾಂಪ್ರದಾಯಿಕ ರೂಪದ ಗಣಪನಲ್ಲದೆ, ಆಧುನಿಕ ರೂಪದ ಗಣಪತಿ ಪ್ರತಿಮೆಗಳನ್ನು ಸಹ ಪ್ರತಿವರ್ಷ ನೋಡಬಹುದು. ಈಗ್ಗೆ ಸ್ವಲ್ಪ ವರ್ಷಗಳ ಹಿಂದೆ, ಎವರೆಸ್ಟ್ ಶಿಖರದ ಮೇಲೆ ನಿಂತ



ತೇನ್‌ಸಿಂಗನನ್ನು ಗಣಪತಿ ಹರಸುತ್ತಿರುವಂತೆ ತೋರಿಸುವ ಒಂದು ಪ್ರತಿಮೆಯನ್ನು ತಯಾರಿಸಲಾಗಿತ್ತು. ಇದು ಬಹಳ ಜನಪ್ರಿಯವಾಯಿತು.

ಗಣಪತಿ ಪೂಜೆಯನ್ನು ಒಂದು ರಾಷ್ಟ್ರೀಯ ಉತ್ಸವವನ್ನಾಗಿ ಮಾಡಿದವರು ಲೋಕಮಾನ್ಯ ಬಾಲಗಂಗಾಧರ ತಿಲಕ್. ಆಗ ಬ್ರಿಟಿಷರು ಭಾರತವನ್ನಾಳುತ್ತಿದ್ದರು. ಭಾರತೀಯರು ಧೈರ್ಯಗುಂದಿದರು. ಆತ್ಮವಿಶ್ವಾಸ ಕಳೆದುಕೊಳ್ಳುತ್ತಿದ್ದರು. ಜನರಲ್ಲಿ ಒಂದು ಹೊಸ ಹುರುಪನ್ನು ಜಾಗೃತಗೊಳಿಸಲು ಅವರು ಗಣಪತಿ ಉತ್ಸವದ ಆಚರಣೆಗೆ ಪುನಶ್ಚೇತನ ನೀಡಿದರು. ಹಬ್ಬವನ್ನಾಚರಿಸಲು ಜನರು ಒಟ್ಟಿಗೆ ಸೇರಿದಾಗ ಅವರು ವೈಮನಸ್ಯವನ್ನು ಮರೆಯುವರು. ಅವರಲ್ಲಿ ಒಗ್ಗಟ್ಟು ಮತ್ತು ಸೌಹಾರ್ದ ಉಂಟಾಗುವುದೆಂದು ತಿಲಕರು ನಂಬಿದ್ದರು.

ತಿಲಕರು ಕಲೆ ಮತ್ತು ಸಂಸ್ಕೃತಿಗಳನ್ನು ಸಹ ಪ್ರೋತ್ಸಾಹಿಸುತ್ತಿದ್ದರು. ಸುಪ್ರಸಿದ್ಧ ಗಾಯಕರಿಂದ ಸಂಗೀತ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ಖ್ಯಾತ ಕವಿಗಳಿಂದ ಕಾವ್ಯ ವಾಚನ ನಡೆಯುತ್ತಿತ್ತು. ಹೊಸ ಮತ್ತು ಹಳೇ ನಾಟಕಗಳು ಪ್ರದರ್ಶಿತವಾಗುತ್ತಿದ್ದವು. ನಾನಾ ವಿಷಯಗಳ ಮೇಲೆ ವಿಚಾರಗೋಷ್ಠಿಗಳನ್ನು ಏರ್ಪಡಿಸಲಾಗುತ್ತಿತ್ತು. ಜನರು ಸಾಮೂಹಿಕವಾಗಿ ಭಜನೆಗಳನ್ನು ಹಾಡುತ್ತಿದ್ದರು. ಧಾರ್ಮಿಕ ಉಪನ್ಯಾಸಗಳು ನಡೆಯುತ್ತಿದ್ದವು. ಇಂತಹ ಸಮಾರಂಭಗಳಲ್ಲಿ ಸಮಾಜ ಕಾರ್ಯಕರ್ತರು ಮತ್ತು ರಾಜಕಾರಣಿಗಳು ಜನರನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಮಕ್ಕಳು ಸಹ ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸುತ್ತಿದ್ದರು. ಮಕ್ಕಳ ಒಂದೊಂದು ತಂಡವೂ ವಿಶಿಷ್ಟ ಪೋಷಾಕುಗಳನ್ನು ಧರಿಸಿ ಜನರನ್ನು ರಂಜಿಸುತ್ತಿತ್ತು. ಇವುಗಳಲ್ಲಿ ಶಿವಾಜಿ ಸೈನ್ಯದಂತೆ ವೇಷ ಧರಿಸಿದ ಒಂದು ತಂಡ ಬಹಳ ಜನಪ್ರಿಯ. ಹೀಗೆ ಸಮವಸ್ತ್ರಗಳನ್ನು ಧರಿಸಿದ ಮಕ್ಕಳು ಸಂಜೆಯ ವೇಳೆಯಲ್ಲಿ ಬೀದಿ-ಬೀದಿಯಲ್ಲಿ ದೇಶಭಕ್ತಿ ಗೀತೆಗಳನ್ನು ಹಾಡಿಕೊಂಡು ಹೋಗುತ್ತಿದ್ದರು. ಗಣಪತಿ ಇಟ್ಟಿದ್ದ ಸ್ಥಳಗಳಿಗೆ ಹೋಗಿ, ಈ ಮಕ್ಕಳು ತಮ್ಮ ಕಲೆಗಳನ್ನು ಪ್ರದರ್ಶಿಸುತ್ತಿದ್ದರು. ಇವನ್ನು ನೋಡಲು ಜನರು ಒಂದೊಂದು ಕಡೆಯೂ ಅತ್ಯಧಿಕ ಸಂಖ್ಯೆಯಲ್ಲಿ ಸೇರುತ್ತಿದ್ದರು. ಹೀಗೆ ಗಣೇಶ ಚತುರ್ಥಿ ಎಳೆಯರಲ್ಲಿ ಕಲಾ ಪ್ರಜ್ಞೆಯನ್ನು ಮೂಡಿಸಲು ನೆರವಾಯಿತು.

ತಿಲಕರು ಗಣಪತಿ ಹಬ್ಬವನ್ನು ಒಂದು ಸಾರ್ವತ್ರಿಕ ಉತ್ಸವವನ್ನಾಗಿ ಮಾಡಿದರು, ನಿಜ. ಆದರೆ ಗಣಪತಿಯ ಆರಾಧನೆ ಅನಾದಿ ಕಾಲದಿಂದ ನಡೆದು ಬಂದಿರುವ ಪದ್ಧತಿ. ಗಣಪತಿ ಶೈವ ಸಂಪ್ರದಾಯದವರ ಮುಖ್ಯ ದೇವರು. ಮಾನವ ದೇಹ ಮತ್ತು ಆನೆಯ

ತಲೆ ಹೊಂದಿರುವ ಗಣಪತಿಯ ರೂಪ ಚಿರಪರಿಚಿತ. ಗಣಪನಿಗೆ ಈ ವಿಚಿತ್ರ ರೂಪ ಬಂದಿದ್ದಕ್ಕೆ ಶಿವಪುರಾಣದಲ್ಲಿ ಒಂದು ಕತೆ ಇದೆ.

ಶಿವನ ಮಡದಿ ಪಾರ್ವತಿ ಒಮ್ಮೆ ಸ್ನಾನಕ್ಕೆ ಹೋದಳು. ಬಾಗಿಲ ಬಳಿ ಕಾವಲಿಗೆ ಯಾರೂ ಇರಲಿಲ್ಲ. ಆದ್ದರಿಂದ ಮಣ್ಣಿನಿಂದ ಮಾನವ ಆಕೃತಿಯನ್ನು ಮಾಡಿ ಅದಕ್ಕೆ ಜೀವ ತುಂಬಿ ಸ್ನಾನ ಗೃಹದ ಬಾಗಿಲ ಬಳಿ ನಿಲ್ಲಿಸಿದಳು. ಯಾರನ್ನೂ ಒಳಗೆ ಬಿಡದಂತೆ ಅವಳು ಆ ಜೀವಂತ ಆಕೃತಿಗೆ ತಿಳಿಸಿದಳು. ಸ್ವಲ್ಪ ಹೊತ್ತಿನ ಬಳಿಕ ಶಿವ ಅಲ್ಲಿಗೆ ಬಂದ. ಕಾವಲು ನಿಂತಿದ್ದ ವ್ಯಕ್ತಿ ಶಿವನನ್ನು ಒಳಗೆ ಬಿಡಲಿಲ್ಲ. ಸಿಟ್ಟಿಗೆದ್ದ ಶಿವ ಕಾವಲುಗಾರನ ತಲೆ ಕಡಿದ. ಇದನ್ನು ಕಂಡು ಪಾರ್ವತಿಗೆ ತುಂಬಾ ದುಃಖವಾಯಿತು. ತನ್ನ ಕೃತ್ಯಕ್ಕೆ ಶಿವ ತುಂಬಾ ಪಶ್ಚಾತ್ತಾಪ ಪಟ್ಟ. ಅನಂತರ ಅವನು ಇಂದ್ರನ ಆನೆಯ ತಲೆಯನ್ನು ಕಡಿದು ಅದನ್ನು ಆ ಮಾನವ ದೇಹಕ್ಕೆ ಸೇರಿಸಿದ. ಈ ರೀತಿ ಗಣಪ ತನ್ನ ವಿಚಿತ್ರ ರೂಪ ಪಡೆದ.

ಗಣಪತಿ ಬುದ್ಧಿ ಕೊಡುವ ದೇವರು. ಎಲ್ಲ ವಿಘ್ನಗಳನ್ನೂ ಪರಿಹರಿಸುವವನು. ಯಾವುದೇ ಒಂದು ಕೆಲಸವಾಗಲೀ ಗಣಪತಿಯ ಪ್ರಾರ್ಥನೆಯಿಂದಲೇ ಪ್ರಾರಂಭಗೊಳ್ಳಬೇಕು. ಇದಕ್ಕೆ ಸಂಬಂಧಿಸಿದಂತೆ ಪುರಾಣದಲ್ಲಿ ಒಂದು ಕಥೆಯಿದೆ.

ಒಮ್ಮೆ ಎಲ್ಲ ದೇವತೆಗಳು ಶಿವ-ಪಾರ್ವತಿಯನ್ನು ಕಾಣಲು ಕೈಲಾಸ ಪರ್ವತಕ್ಕೆ ಹೋದರು. ಅವರು ಅಮೃತದಿಂದ ಮಾಡಿದ ಒಂದು ಮೋದಕವನ್ನು ಶಿವ ಮತ್ತು ಪಾರ್ವತಿಗೆ ಕೊಟ್ಟರು. ಅಲ್ಲೇ ಅವರ ಇಬ್ಬರು ಮಕ್ಕಳಾದ ಗಣೇಶ ಮತ್ತು ಕಾರ್ತಿಕೇಯರು ಆಟವಾಡುತ್ತಿದ್ದರು. ಮೋದಕವನ್ನು ಕಂಡು ಇಬ್ಬರೂ ಶಿವ-ಪಾರ್ವತಿಯ ಬಳಿ ಬಂದರು. ಇಬ್ಬರೂ ಮೋದಕವನ್ನು ಕೇಳಿದರು. ಆದರೆ ಇದ್ದದ್ದು ಒಂದೇ ಒಂದು. ಆಗ ಪಾರ್ವತಿ ಒಂದು ಉಪಾಯ ಹೂಡಿದಳು. ಇಬ್ಬರಲ್ಲಿ ಯಾರು ಬೇಗನೆ ಒಂದು ಭೂಪ್ರದಕ್ಷಿಣೆ ಹಾಕುವರೋ ಅವರಿಗೆ ಮೋದಕ ದೊರೆಯುವುದೆಂದು ಹೇಳಿದಳು. ಕೂಡಲೆ ಕಾರ್ತಿಕೇಯ ನವಿಲಿನ ಮೇಲೆ ಭೂಪ್ರದಕ್ಷಿಣೆಗಾಗಿ ಹೊರಟ. ಗಣೇಶ ಮಾತ್ರ ಅಲ್ಲಿಂದ ಅಲ್ಲಾಡಲಿಲ್ಲ. ಅವನು ತಂದೆ-ತಾಯಿಗೆ ಪ್ರದಕ್ಷಿಣೆ ಹಾಕಿ ನಮಸ್ಕರಿಸಿದ. ಕಾರ್ತಿಕೇಯ ವಾಪಸಾಗುವ ಹೊತ್ತಿಗೆ ಗಣೇಶನೇ ಪಂದ್ಯದಲ್ಲಿ ಗೆದ್ದಿದ್ದ. ತಂದೆ-ತಾಯಿಗಿಂತ ಮಿಗಿಲಾದ ಪ್ರಪಂಚ ಇಲ್ಲವೆನ್ನುವುದು ಅವನಿಗೆ ಗೊತ್ತಿತ್ತು. ಕಡೆಗೆ ಗಣೇಶನಿಗೇ ಮೋದಕ ದೊರೆಯಿತು. ಗಣೇಶನಿಗೆ ತಂದೆ-ತಾಯಿಯಲ್ಲಿದ್ದ ಭಕ್ತಿಯನ್ನು ಕಂಡು ಶಿವನಿಗೂ ತುಂಬ ಸಂತೋಷವಾಯಿತು. "ಯಾವುದೇ ಹೊಸ ಕಾರ್ಯವನ್ನಾರಂಭಿಸುವ ಮೊದಲು ಜನರು ನಿನ್ನನ್ನು ಪ್ರಾರ್ಥಿಸಲಿ" ಎಂದು ಹೇಳಿ ಶಿವ ಗಣಪತಿಯನ್ನು ಹರಸಿದ.

ಗಣೇಶ ಚತುರ್ಥಿ ದಿನ ಯಾರೂ ಚಂದ್ರನನ್ನು ನೋಡುವುದಿಲ್ಲ. ಹಾಗೆ ನೋಡಿದರೆ ಕಳ್ಳತನದ ಅಪವಾದ ಬರುವುದೆಂಬ ನಂಬಿಕೆ ಇದೆ. ಮಾಡಬಾರದೆಂದು ಹೇಳಿದ್ದನ್ನು ಮಾಡಿ ನೋಡುವ ಕುತೂಹಲ ಮಕ್ಕಳಿಗುಂಟು. ಚಂದ್ರನನ್ನು ನೋಡಿ ಮುಂದೇನಾಗುವುದೋ ಎಂಬ ಭಯದಿಂದ ಅವರು ಒದ್ದಾಡುತ್ತಾರೆ. ಪುರಾಣ ಕಥೆಗಳ ಆಧಾರದ ಮೇಲೆ ಇಂತಹ ನಂಬಿಕೆ ಬೆಳೆದಿದೆ. ಒಮ್ಮೆ ಗಣಪತಿ ಇಲಿಯ ಮೇಲೆ ಕುಳಿತುಕೊಂಡು ಹೋಗುತ್ತಿದ್ದ. ಗಣಪತಿ ಆಯತಪ್ಪಿ ಕೆಳಗೆ ಬಿದ್ದ. ಇದನ್ನು ನೋಡಿದ ಚಂದ್ರ ಜೋರಾಗಿ ನಕ್ಕ. ಗಣಪತಿಗೆ ಸಿಟ್ಟು ತಡೆಯಲಾಗಲಿಲ್ಲ. ಕೂಡಲೇ ಚಂದ್ರನಿಗೆ ಶಾಪ ಕೊಟ್ಟ. "ಇಂದಿನಿಂದ ನಿನ್ನ ಮುಖವನ್ನು ಯಾರೂ ನೋಡಬಾರದು, ಯಾರಾದರೂ ನಿನ್ನನ್ನು ಕದ್ದು ನೋಡಿದಲ್ಲಿ, ಅಂತಹವರು ಕಳ್ಳತನದ ಅಪವಾದಕ್ಕೊಳಗಾಗುವರು" ಎಂದು ಹೇಳಿದ. ಚೌತಿಯ ಚಂದ್ರನನ್ನು ನೋಡಿದ ಭಗವಾನ್ ಶ್ರೀಕೃಷ್ಣನಿಗೆ ಕೂಡಾ ಶಮಂತಕಮಣಿಯನ್ನು ಅಪಹರಿಸಿದ ಅಪವಾದ ಬಂದಿತ್ತು.

ಹತ್ತು ದಿನಗಳ ಕಾಲ ನಡೆಯುವ ಗಣೇಶೋತ್ಸವ ಸಮಾರಂಭಗಳಲ್ಲಿ ಗೌರೀ ಪೂಜೆ ಸಹ ನಡೆಯುತ್ತದೆ. ಮನೆಗೆಲಸ ಮಾಡುವ ಸೇವಕರು ಕುಣಿದುಕೊಂಡು ಮನೆಮನೆಗೆ ಹೋಗುವರು. ಪೂಜಾದಿಗಳು ಕೃಷ್ಣಜನ್ಮಾಷ್ಟಮಿಯಂದು ಆರಂಭವಾಗಿ, ಗಣಪತಿ ವಿಸರ್ಜನೆಯ ದಿನದವರೆಗೂ ಅಂದರೆ ಅನಂತ ಚತುರ್ದಶಿಯವರೆಗೂ ನಡೆಯುತ್ತವೆ. ಅವರು ಜನ್ಮಾಷ್ಟಮಿಯ ದಿನ 'ಗೋವಿಂದ ಆಲಾ ರೆ'ಯಲ್ಲಿ ಭಾಗವಹಿಸುವರು. ಸ್ವಲ್ಪ ದಿನಗಳ ವಿಶ್ರಾಂತಿಯ ಬಳಿಕ ಗಣೇಶೋತ್ಸವಕ್ಕಾಗಿ ಅಭ್ಯಾಸಗಳನ್ನು ಪ್ರಾರಂಭಿಸುವರು.

ದಿನದ ಕೆಲಸ ಮುಗಿಸಿಕೊಂಡು ಈ ಸೇವಕರು ಯಾವುದಾದರೂ ಅಂಗಡಿಯ ಅಥವಾ ಮನೆಯ ಹೊರಗಿನ ಖಾಲಿ ಜಾಗದಲ್ಲಿ ಸೇರಿ ಅಭ್ಯಾಸ ಮಾಡುವರು. ಸಾಮಾನ್ಯವಾಗಿ ಒಂದೊಂದು ಗುಂಪಿನಲ್ಲಿ ಹನ್ನೆರಡರಿಂದ ಹದಿನಾಲ್ಕು ಜನರಿರುತ್ತಾರೆ. ಎಂಟೊಂಭತ್ತು ಜನ ಕುಣಿದರೆ ಉಳಿದವರು ಹಾಡುತ್ತಾರೆ. ಅವರು ಕಾಲಿಗೆ ಗೆಜ್ಜೆ ಕಟ್ಟಿಕೊಂಡಿರುತ್ತಾರೆ. ತಮಟೆಯ ಬಡಿತ ಮತ್ತು ಜಾನಪದ ಗೀತೆಗಳ ಲಯಕ್ಕೆ ತಕ್ಕಂತೆ ನಾನಾ ಭಂಗಿಗಳಲ್ಲಿ ಅವರು ಕುಣಿಯುತ್ತಾರೆ. ಕುಣಿತ ಗಣಪತಿ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತದೆ. ಈ ಕುಣಿತದವರು ಹೆಚ್ಚಾಗಿ ಮಹಾರಾಷ್ಟ್ರದಲ್ಲಿನ ಕೊಂಕಣ ಪ್ರದೇಶಕ್ಕೆ ಸೇರಿದವರು.

ಈ ಕುಣಿತದವರು ಜನರಿಂದ ಹಣ ಸಂಗ್ರಹಿಸಿ ತಮಗೆ ಬೇಕಾದ ವಾದ್ಯಗಳನ್ನು ಕೊಳ್ಳುವರು. ತಾವು ನೆಲೆಸಿರುವ ಪ್ರದೇಶದಲ್ಲಿ ಇಡಲಾಗಿರುವ ಗಣಪತಿ ಪ್ರತಿಮೆಗಳ

ಮುಂದೆ ಅವರು ಕುಣಿಯುತ್ತಾರೆ. ಅವರು ಮನೆ-ಮನೆಗೆ ಹೋಗಿ ಕುಣಿದು ಹಣ ಕೇಳುವರು.

ಗಣಪತಿ ಉತ್ಸವ ಹಳ್ಳಿಗಳಲ್ಲಿ ಮತ್ತು ದೊಡ್ಡ ನಗರಗಳಲ್ಲಿ ನಡೆಯುತ್ತದೆ. ಹೊರ ಊರುಗಳಲ್ಲಿರುವ ಜನ, ಹಬ್ಬಕ್ಕೆ ಸರಿಯಾಗಿ ಸ್ವಂತ ಊರಿಗೆ ಬರುತ್ತಾರೆ. ಈ ಹಬ್ಬದಲ್ಲಿ ಉಡುಗೊರೆಗಳನ್ನು ಕೊಡುವ ಪದ್ಧತಿ ಇದೆ. ಗಣಪತಿ ಹಬ್ಬದ ಸಮಯದಲ್ಲಿ ಅಂಗಡಿಗಳಲ್ಲಿ, ರೈಲುಗಳಲ್ಲಿ, ಬಸ್ಸುಗಳಲ್ಲಿ, ಸ್ಟೀಮರುಗಳಲ್ಲಿ ಎಲ್ಲೆಲ್ಲಿ ನೋಡಿದರೂ ನೂಕು-ನುಗ್ಗಲು. ಹಳ್ಳಿಗಳಿಗಿಂತ ಪಟ್ಟಣಗಳಲ್ಲಿ ಈ ಹಬ್ಬ ಹೆಚ್ಚು ವೈಭವದಿಂದ ನಡೆಯುತ್ತದೆ. ಹಳ್ಳಿಗಳಲ್ಲಿ ಗಣಪತಿಯನ್ನು ಶಾಲಾ ಕಟ್ಟಡದಲ್ಲಿ ಅಥವಾ ಹಳ್ಳಿಯ ಯಜಮಾನರ ಮನೆಯಲ್ಲಿ ಕೂಡಿಸಲಾಗುತ್ತದೆ. ಇಲ್ಲಿ ನಡೆಯುವ ಕಾರ್ಯಕ್ರಮಗಳನ್ನು ನೋಡಲು ಅಧಿಕ ಸಂಖ್ಯೆಯ ಹಳ್ಳಿಗರು ಸೇರುತ್ತಾರೆ.

ನಗರಗಳಲ್ಲಿ ಗಣೇಶೋತ್ಸವದ ಹತ್ತು ದಿನಗಳು ಹೇಗೆ ಕಳೆಯುವುದೋ ನಮಗೆ ತಿಳಿಯುವುದೇ ಇಲ್ಲ. ಪ್ರತಿ ದಿನ ಹೊಸ ಹೊಸ ಕಾರ್ಯಕ್ರಮ. ಹೊಸ ಹೊಸ ಅಲಂಕಾರ. ಹಿರಿಯರು, ಕಿರಿಯರು, ಬಡವರು, ಬಲ್ಲಿದರು ಎಂಬ ಯಾವ ಭೇದಭಾವಗಳಿಲ್ಲದೇ, ಎಲ್ಲ ಕೋಮುಗಳ ಮತ್ತು ವರ್ಗಗಳ ಜನರು ಗಣಪತಿಯನ್ನು ನೋಡಲು ಬರುವರು. ಊರಿಗೆ ಊರೇ ಒಂದು ದೊಡ್ಡ ಮೇಳದಂತೆ ಕಾಣಿಸುತ್ತದೆ.

ಅನಂತ ಚತುರ್ದಶಿ ದಿನ ಗಣಪತಿ ಪ್ರತಿಮೆಗಳ ವಿಸರ್ಜನೆಗಾಗಿ ಅಗಾಧ ಸಿದ್ಧತೆಗಳಾಗುತ್ತವೆ. ಕೆಲವು ಜನ ತಮ್ಮ ಬಂಧು-ಮಿತ್ರರೊಡಗೂಡಿ ಪ್ರತ್ಯೇಕವಾಗಿ ಗಣಪತಿ ವಿಸರ್ಜನೆ ಮಾಡುವರು. ಇತರ ಕೆಲವು ಜನರು ಸಾರ್ವಜನಿಕ ಸ್ಥಳಗಳಲ್ಲಿಟ್ಟಿರುವ ದೊಡ್ಡ ಗಣಪತಿ ಪ್ರತಿಮೆಯ ಬಳಿ ತಮ್ಮ ಮನೆಯ ಗಣಪತಿ ಪ್ರತಿಮೆಗಳನ್ನಿಡುವರು. ಈ ಗಣಪತಿ ಪ್ರತಿಮೆಗಳನ್ನು ಸುಂದರವಾಗಿ ಅಲಂಕರಿಸಿದ ಎತ್ತಿನ ಗಾಡಿಗಳು ಅಥವಾ ಟ್ರಕ್ಕುಗಳ ಮೇಲಿಟ್ಟು ಮೆರವಣಿಗೆಯಲ್ಲಿ ಒಯ್ಯಲಾಗುವುದು. ಚಿಳ್ಳೆ-ಪಿಳ್ಳೆಗಳು ಪ್ರತಿಮೆಯ ಹಿಂದೆ ತುಂಬಿಕೊಳ್ಳುವರು. ಈ ಮೆರವಣಿಗೆ ರಸ್ತೆಗಳಲ್ಲಿ ಹಾದು ಹೋಗುವಾಗ ತಮಟೆಗಳು, ಜಾಗಟೆಗಳು ಮತ್ತು ಝುಲ್ಲರಿಗಳ ಶಬ್ದ ವಾತಾವರಣವನ್ನು ತುಂಬಿಕೊಳ್ಳುತ್ತದೆ. ಪ್ರತಿಯೊಬ್ಬರೂ "ಗಣಪತಿ ಬಪ್ಪ ಮೋರ್ಯ" ಎಂದು ಜೋರು ಧ್ವನಿಯಲ್ಲಿ ಕೂಗಿಕೊಳ್ಳುವರು.

ಗೊತ್ತುಪಡಿಸಿದ ಒಂದು ಸ್ಥಳದಲ್ಲಿ ಗಣಪತಿ ಪ್ರತಿಮೆಗಳನ್ನು ಹೊತ್ತ ಎಲ್ಲ ಟ್ರಕ್ಕುಗಳು ಮತ್ತು ಎತ್ತಿನ ಗಾಡಿಗಳು ಜಮಾಯಿಸುತ್ತವೆ. ಇವೆಲ್ಲ ಸೇರಿದರೆ ದೊಡ್ಡ

ಮೆರವಣಿಗೆಯಾಗುತ್ತದೆ. ಮೆರವಣಿಗೆಯಲ್ಲಿ ಯಾವ ಗಣಪತಿ ಎಲ್ಲಕ್ಕಿಂತ ಮುಂದಿರಬೇಕೆನ್ನುವುದು ಆಯಾ ಹಳ್ಳಿಯ ಅಥವಾ ಪಟ್ಟಣದ ಸಂಪ್ರದಾಯವನ್ನು ಅವಲಂಬಿಸಿರುತ್ತದೆ. ಅತ್ಯಂತ ಹಳೇ ದೇವಾಲಯದ ಗಣಪತಿ ಮೆರವಣಿಗೆಯಲ್ಲಿ ಎಲ್ಲಕ್ಕಿಂತ ಮುಂದಿರಬೇಕು. ಅದನ್ನು ಅಡ್ಡಪಲ್ಲಕ್ಕಿಯಲ್ಲಿ ಒಯ್ಯಲಾಗುವುದು. ಜನರು ಗುಂಪಾಗಿ ಹಾಡು ಹೇಳಿಕೊಂಡು, ತಮಟೆಗಳನ್ನು ಬಾರಿಸಿಕೊಂಡು, ಮೆರವಣಿಗೆಯಲ್ಲಿ ಹೋಗುವರು. ರಸ್ತೆಯ ಪಕ್ಕಗಳಲ್ಲಿ ನಿಂತು ನೋಡುವ ಜನ ಭಜನೆ ಮಾಡಿಕೊಂಡು ಹೋಗುವ ಜನರ ಮೇಲೆ ಬಣ್ಣಗಳನ್ನು ಎರಚುವರು.

ವರ್ಷಗಳು ಉರುಳಿದಂತೆ, ಸಾರ್ವಜನಿಕ ಗಣೇಶೋತ್ಸವಗಳ ಸಂಖ್ಯೆ ಹೆಚ್ಚುತ್ತಿದೆ. ಇದರಿಂದ ಮೆರವಣಿಗೆಗೆ ಊರು ಹಾದು ಬರಲು ತುಂಬ ಹೆಚ್ಚು ಕಾಲ ಹಿಡಿಯುತ್ತದೆ. 1978ರಲ್ಲಿ ಪುಣೆಯಲ್ಲಿ ಮೆರವಣಿಗೆಗೆ ಇಡೀ ಊರು ಹಾದು ಬರಲು ಹದಿನೆಂಟು ಗಂಟೆಗಳ ಕಾಲ ಬೇಕಾಯಿತು. ಈ ಮೆರವಣಿಗೆಯನ್ನು ನೋಡಲು ಸಾವಿರಾರು ಜನ ಸೇರುತ್ತಾರೆ. ರಸ್ತೆಗಳಲ್ಲಿ ಕಾಲೂರಲು ಕೂಡಾ ಜಾಗವಿರುವುದಿಲ್ಲ.

ಮೆರವಣಿಗೆ ನದಿ, ಸರೋವರ ಅಥವಾ ಸಮುದ್ರ ದಂಡೆಗೆ ಬರುತ್ತಿದ್ದಂತೆ "ಗಣಪತಿ ಬಪ್ಪ ಮೋರ್ಯ! ಪುರ್ಚ್ಯವರ್ಷಿ ಲೋಕರ್ಯ" ಎಂಬ ಕೂಗು ಗಗನ ಮುಟ್ಟುತ್ತದೆ.

ಮುಂದಿನ ವರ್ಷ ಬೇಗನೆ ಬರುವಂತೆ ಜನ ಗಣಪನನ್ನು ಬೇಡಿಕೊಳ್ಳುತ್ತಾರೆ. ಗಣಪತಿ ಪ್ರತಿಮೆಗಳನ್ನು ನೀರಿನಲ್ಲಿ ಮುಳುಗಿಸಿ ಜನರು ಲಘು ಉಪಹಾರವನ್ನು ಸೇವಿಸುವರು. ಅನಂತರ ತಮ್ಮ ತಮ್ಮ ಮನೆಗೆ ವಾಪಸಾಗುವರು.

ಭಾರತದ ಇತರ ಭಾಗಗಳಲ್ಲೂ ಗಣಪತಿ ಹಬ್ಬವನ್ನು ಆಚರಿಸಲಾಗುವುದು. ಮಹಾರಾಷ್ಟ್ರದಲ್ಲಿ ಮಾತ್ರ ಈ ಹಬ್ಬವನ್ನು ಸಾರ್ವಜನಿಕ ಉತ್ಸವವಾಗಿ, ದೊಡ್ಡ ಪ್ರಮಾಣದಲ್ಲಿ ಆಚರಿಸಲಾಗುತ್ತದೆ. ಮಹಾರಾಷ್ಟ್ರೀಯರು ಎಲ್ಲೇ ನೆಲೆಸಿರಲಿ, ತಮ್ಮ ರಾಜ್ಯದಲ್ಲಿ ಆಚರಿಸುವಷ್ಟೇ ಸಂಭ್ರಮದಿಂದ ಗಣಪತಿ ಹಬ್ಬವನ್ನು ಆಚರಿಸುವರು.

ಮೂಲ ಮರಾಠಿ: ಸವಿತ ಜಜೋಡಿಯಾ





ದುರ್ಗಾ ಪೂಜೆ

ಹಗಲಿನ ಅವಧಿ ಕಡಿಮೆಯಾಗುತ್ತದೆ. ಪ್ರವಾಹ ಮತ್ತು ಸಾಂಕ್ರಾಮಿಕಗಳ ಉಪಟಳ ಮುಗಿಯುತ್ತದೆ. ನೀಲಿ ಆಕಾಶದಲ್ಲಿ ಗರಿಗೆದರಿದ ಮೋಡಗಳು ಚಲಿಸುತ್ತವೆ. ದಕ್ಷಿಣದ ತಂಗಾಳಿ ಪಶ್ಚಿಮದತ್ತ ಬೀಸುತ್ತದೆ. ಭತ್ತದ ಪೈರು ತೊಡೆಯೆತ್ತರ ಬೆಳೆದು ನಿಂತಿರುತ್ತದೆ. ಸುಖ-ಸಂತೋಷಗಳ ನಿರೀಕ್ಷೆಯಲ್ಲಿ ನಾಡು ಹಿಗ್ಗಿರುತ್ತದೆ.

ಇದು ದುರ್ಗಾ ಪೂಜೆಗೆ ತಕ್ಕ ಕಾಲ. ದುಷ್ಟರನ್ನು ಸಂಹರಿಸಿ, ಸಜ್ಜನರನ್ನು ಕಾಪಾಡಿದ ದುರ್ಗಾ ತಾಯಿಯನ್ನು ಬಂಗಾಳೀಯರು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಅವರು ಈ ಹಬ್ಬವನ್ನು ಆಚರಿಸುವರು.

ಆಶ್ವಯುಜ ಮಾಸದ (ಸೆಪ್ಟೆಂಬರ್-ಅಕ್ಟೋಬರ್ ತಿಂಗಳ) ಶುಕ್ಲಪಕ್ಷದ ಏಳು, ಎಂಟು ಮತ್ತು ಒಂಭತ್ತನೇ ದಿನಗಳಲ್ಲಿ ದುರ್ಗಾಪೂಜಾ ವಿಧಿಗಳು ನಡೆಯುತ್ತವೆ. ಹತ್ತನೇ ದಿನ, ದುರ್ಗಾ ಮಾತೆಯ ಪ್ರತಿಮೆಯನ್ನು ವಿಸರ್ಜಿಸಲಾಗುವುದು. ಹುಣ್ಣಿಮೆಯ ರಾತ್ರಿ ಲಕ್ಷ್ಮೀ ಪೂಜೆ ನಡೆಯುತ್ತದೆ.

ದುರ್ಗಾ ದೇವಿ ಶಕ್ತಿ ಮತ್ತು ಸೌಂದರ್ಯಗಳ ಪ್ರತೀಕ. ದೇವಿ ಕೆರಳಿದ ಸಿಂಹದ ಮೇಲೆ ಕುಳಿತಿರುತ್ತಾಳೆ. ಹತ್ತು ಕೈಗಳಲ್ಲಿ ಹತ್ತು ಆಯುಧಗಳನ್ನು ಹಿಡಿದಿರುತ್ತಾಳೆ. ಕೋಣ ರೂಪದ ಮಹಿಷಾಸುರನ ದೇಹಕ್ಕೆ ದೇವಿಯ ತ್ರಿಶೂಲ ನಾಟಿರುತ್ತದೆ. ಇದು ದುಷ್ಟ ಸಂಹಾರದ ಸಂಕೇತ.

ದೇವಿಯ ತಲೆಯ ಮೇಲೆ ಶಿವನ ಮೂರ್ತಿ ಇರುತ್ತದೆ. ಎರಡೂ ಪಕ್ಕಗಳಲ್ಲಿ ಆಕೆಯ ನಾಲ್ವರು ಮಕ್ಕಳಿರುತ್ತಾರೆ. ಒಂದು ಕಡೆ ಸರಸ್ವತಿ ಮತ್ತು ಲಕ್ಷ್ಮಿ ಇನ್ನೊಂದು ಕಡೆ ಸಿದ್ಧಿವಿನಾಯಕ ಮತ್ತು ಕಾರ್ತಿಕೇಯ.

ಪುರಾಣಗಳಲ್ಲಿ ದುರ್ಗಾ ಮತ್ತು ಮಹಿಷಾಸುರನ ಕಥೆಯಿದೆ.

ಒಮ್ಮೆ ಒಬ್ಬ ದೊಡ್ಡ ರಾಕ್ಷಸನಿದ್ದ. ಅವನು ಭಯಾನಕ ಕೋಣನ ರೂಪದಲ್ಲಿ ದೇವತೆಗಳಿಗೆ ಹಿಂಸೆ ಕೊಡುತ್ತಿದ್ದ. ನೂರಾರು ವರ್ಷಗಳ ಹೋರಾಟದ ಬಳಿಕ, ದೇವತೆಗಳನ್ನು ಓಡಿಸಿ ಇಂದ್ರನ ಸಿಂಹಾಸನವನ್ನಾಕ್ರಮಿಸಿಕೊಂಡ. ದೇವತೆಗಳು ಬ್ರಹ್ಮನೊಡಗೂಡಿ ಶಿವನ ಮತ್ತು ವಿಷ್ಣುವಿನ ಬಳಿ ಅವರಿಗೆ ಮೊರೆಯಿಟ್ಟರು.

ಮಹಿಷಾಸುರನ ಹಾವಳಿಯನ್ನು ಕೇಳಿ ಇಬ್ಬರೂ ಸಿಟ್ಟಿನಿಂದ ಕೆರಳಿದರು. ಕೂಡಲೇ ಅವರಿಂದ ದಿವ್ಯತೇಜಸ್ಸು ಹೊರಟಿತು. ಅದು ಇಡೀ ಭೂಮಿ ಮತ್ತು ಆಕಾಶವನ್ನು ಆವರಿಸಿತು. ಕಡೆಗೆ ಈ ತೇಜಸ್ಸು ಭವ್ಯ ದೇವತೆಯ ರೂಪ ತಳೆಯಿತು. ಆ ದೇವತೆಗೆ 'ದುರ್ಗಾ' ಎಂಬ ಹೆಸರು ಬಂತು. ದೇವಿಗೆ ಅತ್ಯುತ್ತಮ ರೇಷ್ಮೆ ವಸ್ತ್ರಗಳು, ಆಭರಣಗಳು, ಆಯುಧಗಳು ಮತ್ತು ಸಮರಾಸ್ತ್ರಗಳನ್ನು ಕೊಡಲಾಯಿತು. ದುರ್ಗಾದೇವಿ ಕುಳಿತುಕೊಳ್ಳಲು ಹಿಮಾಲಯ ಒಂದು ಅಜೇಯ ಸಿಂಹವನ್ನು ಕೊಟ್ಟಿತು.

ಅನಂತರ ದೇವಿ ಬ್ರಹ್ಮಾಂಡದ ಹತ್ತು ದಿಕ್ಕುಗಳಲ್ಲಿ ತನ್ನ ಸಹಸ್ರ ಬಾಹುಗಳನ್ನು ಚಾಚಿದಳು. ಕೋಪಾವೇಷದಿಂದ ಗರ್ಜಿಸಿದಳು. ಮಹಿಷಾಸುರ ಮತ್ತು ಅವನ ಅನುಯಾಯಿಗಳು ಸರ್ವಶಸ್ತ್ರಗಳ ಸಮೇತ ಓಡಿ ಬಂದರು.

ಭೀಕರ ಹೋರಾಟ ಪ್ರಾರಂಭವಾಯಿತು. ಆಗ ಸಮುದ್ರ ಮಂಥನವಾಯಿತು. ಪರ್ವತಗಳು ಬುಡಮೇಲಾದುವು. ದೇವಿ ರಾಕ್ಷಸನ ಮೇಲೆ ಪಾಶ ಎಸೆದಳು. ಇಡೀ ಬ್ರಹ್ಮಾಂಡ ತತ್ತರಿಸಿತು. ಪಾಶ ಮಹಿಷಾಸುರನ ದೇಹವನ್ನು ಬಿಗಿಯಿತು. ಅತ್ತಿತ್ತ ಅಲುಗಾಡಲು ಸಹ ಅವನಿಗೆ ಸಾಧ್ಯವಾಗಲಿಲ್ಲ. ಆದರೂ ಜಗ್ಗದೆ, ರಾಕ್ಷಸ ನಾನಾ ರೂಪಗಳಲ್ಲಿ ಹೋರಾಟ ಮುಂದುವರಿಸಿದ. ಕಡೆಗೆ ದುರ್ಗಾದೇವಿ ಖಡ್ಗವೆತ್ತಿ ರಾಕ್ಷಸನನ್ನು ಸಂಪೂರ್ಣವಾಗಿ ಸಂಹರಿಸಿದಳು.

ಎಲ್ಲ ದೇವತೆಗಳು ಮತ್ತು ಮನುಷ್ಯರು ದೇವಿಗೆ ಕೃತಜ್ಞತೆಯಿಂದ ತಲೆಬಾಗಿದರು. ಆಗ ದಯಾಮಯಿ ದುರ್ಗ, "ನಿಮಗೆ ಬೇಕಾದ ವರ ಕೇಳಿ ನಾನು ಕೊಡುತ್ತೇನೆ" ಎಂದಳು. "ನಮಗೆ ಅಪಾಯ ಬಂದಾಗ ನಾವು ನಿನ್ನ ಮೊರೆ ಹೋಗುತ್ತೇವೆ. ನೀನು ನಮ್ಮನ್ನು ಕಾಪಾಡಬೇಕು" ಎಂದು ಕೇಳಿಕೊಂಡರು. ದೇವಿ ಅವರ ಕೋರಿಕೆಯನ್ನು ಈಡೇರಿಸಿದಳು.

ಯಾವುದೇ ಪುರಾಣ ಕಥೆಯಲ್ಲಾಗಲೀ ಸಜ್ಜನರ ಮತ್ತು ದುರ್ಜನರ ನಡುವೆ ಹೋರಾಟವಾಗುತ್ತದೆ. ಕಡೆಗೆ ಸಜ್ಜನರಿಗೇ ಜಯವಾಗುತ್ತದೆ. ದುರ್ಗಾದೇವಿಯ ಕಥೆಯಲ್ಲೂ ಇದೇ ತತ್ವವಿದೆ. ದುಷ್ಟರ ಕೈಗೆ ಸಿಕ್ಕಿ, ಕಷ್ಟಪಡುವಾಗ ದೈವ ರಕ್ಷಣೆ ದೊರೆತು ಕಷ್ಟದಿಂದ ಪಾರಾಗುವ ಕಥೆಗಳು ಎಲ್ಲ ಕಾಲದ ಜನರಿಗೂ ಮೆಚ್ಚುಗೆಯಾಗುತ್ತವೆ.

ಹಿಂದಿನ ಕಾಲದಲ್ಲಿ ಜಮೀನುದಾರರು ಮತ್ತು ಶ್ರೀಮಂತರು ಮನೆಗಳಲ್ಲೇ ದುರ್ಗಾ ಪೂಜಾ ಆಚರಿಸುತ್ತಿದ್ದರು. ಅವರು ಸ್ವಂತ ಖರ್ಚಿನಲ್ಲಿ ಈ ಹಬ್ಬವನ್ನು ಅದ್ದೂರಿಯಾಗಿ ನಡೆಸುತ್ತಿದ್ದರು. ಜಾತಿ-ಮತಗಳ ಅಥವಾ ಸಾಮಾಜಿಕ ಸ್ಥಾನಮಾನಗಳ ಭೇದ-ಭಾವಗಳಿಲ್ಲದೇ ಸಕಲರೂ ಈ ಸಮಾರಂಭದಲ್ಲಿ ಭಾಗವಹಿಸುತ್ತಿದ್ದರು.

ಬ್ರಾಹ್ಮಣರು ಪೂಜಾ ವಿಧಿಗಳನ್ನು ನೆರವೇರಿಸುತ್ತಿದ್ದರು. ಮುಸಲ್ಮಾನರು ತಮಟೆ ಬಾರಿಸುತ್ತಿದ್ದರು ಹಾಗೂ ಶಹನಾಯಿ ಊದುತ್ತಿದ್ದರು. ಈ ಸಮಾರಂಭಕ್ಕೆ ಸುತ್ತಮುತ್ತಲ ಹಳ್ಳಿಗಳ ಜನರನ್ನು ಕರೆಯಲಾಗುತ್ತಿತ್ತು. ಅವರು ಆಹ್ವಾನ ಪಡೆದು ಬಂದಿದ್ದರೂ ನಾನಾ ಕೆಲಸಗಳನ್ನು ವಹಿಸಿಕೊಳ್ಳುತ್ತಿದ್ದರು. ಕೆಲವರು ಬಿದಿರನ್ನು ತಂದುಕೊಡುತ್ತಿದ್ದರು. ಮತ್ತೆ ಕೆಲವರು ಅದನ್ನು ಸೂಕ್ತ ಅಳತೆಗೆ ಕತ್ತರಿಸಿ ಆಕಾರ ಕೊಡುತ್ತಿದ್ದರು. ಇನ್ನಷ್ಟು ಜನ ಪ್ರತಿಮೆಗೆ ಅಲಂಕಾರ ಮಾಡುತ್ತಿದ್ದರು. ಕೆಲವು ಹಳ್ಳಿಗರು ಪೂಜೆಗೆ ಹೂವುಗಳನ್ನು ಒದಗಿಸುತ್ತಿದ್ದರು. ಮತ್ತೆ ಕೆಲವರು ಹಾಲು ಮತ್ತು ಮೊಸರು ಸರಬರಾಜು ಮಾಡುತ್ತಿದ್ದರು. ದುರ್ಗಾಪೂಜೆಗೆ ಅನುಕೂಲವಾಗಿರುವಂತೆ ಈ ಜಮೀನುದಾರರ ಮನೆಯ ವಿನ್ಯಾಸವಿದ್ದುದನ್ನು ಇಂದಿಗೂ ನಾವು ಕಾಣಬಹುದು. ಈ ಮನೆಗಳಲ್ಲಿ ಪೂಜೆಗಾಗಿ ಎತ್ತರದ ಕಟ್ಟೆಗಳಿವೆ. ಸಾವಿರಾರು ಜನ ಹಳ್ಳಿಗರು ಆರಾಮವಾಗಿ ಕೂಡಲು ವಿಶಾಲವಾದ ಅಂಗಳಗಳಿವೆ, ದೊಡ್ಡ ಉಗ್ರಾಣಗಳಿವೆ. ಭಾರಿ ಗಾತ್ರದ ಕಡಾಯಿಗಳು ಮತ್ತು ಒಲೆಗಳಿರುವ ಅಡಿಗೆ ಮನೆಗಳಿವೆ. ಜಂಖಾನಗಳು ಮತ್ತು ಇತರ ಅನೇಕ ಪರಿಕರಗಳು ಸಹ ಇವೆ.

ದುರ್ಗಾ ಪೂಜಾ ಸಮಾರಂಭಕ್ಕೆ ಬಂದವರಲ್ಲಿ ಯಾರನ್ನೂ ಹಿಂದಕ್ಕೆ ಅಟ್ಟುತ್ತಿರಲಿಲ್ಲ.



ಎಲ್ಲರಿಗೂ ಸ್ವಾಗತವಿತ್ತು. ಬಂದವರಿಗೆಲ್ಲಾ ಪುಷ್ಕಳವಾದ ಊಟವಿರುತ್ತಿತ್ತು. ಬಡಬಗ್ಗರಿಗೆ ಹೊಸ ಬಟ್ಟೆಗಳನ್ನು ಹಂಚಲಾಗುತ್ತಿತ್ತು. ದುರ್ಗಾಪೂಜೆಯನ್ನು ಇಂದು ದೊಡ್ಡ ಜಮೀನ್ದಾರರು ಮತ್ತು ಶ್ರೀಮಂತರಿಗೆ ಬದಲಾಗಿ ಜನಸಾಮಾನ್ಯರು ಒಟ್ಟಾಗಿ

ಆಚರಿಸುವರು. ಈಗ ಅದನ್ನು ಒಂದು ರಾಷ್ಟ್ರೀಯ ಉತ್ಸವದಂತೆ ಆಚರಿಸಲಾಗುತ್ತಿದೆ. ಬಂಗಾಳೀಯರಲ್ಲದವರು ಮತ್ತು ಹಿಂದುಗಳಲ್ಲದವರೂ ಸಹ ಈ ಸಮಾರಂಭದಲ್ಲಿ ಭಾಗವಹಿಸುವರು.

ದುರ್ಗಾಪೂಜೆಗೆ ಅನೇಕ ವಾರಗಳ ಮುಂಚೆ ಸ್ವಯಂಸೇವಕರು ಹಣ ಸಂಗ್ರಹಣೆ ಪ್ರಾರಂಭಿಸುತ್ತಾರೆ. ಕೆಲವು ವೇಳೆ ಒಂದೇ ಪ್ರದೇಶಗಳಲ್ಲಿ ಎರಡು ಕಡೆ ಪೂಜೆಗಳು ನಡೆಯುತ್ತವೆ. ಆಗ ಒಬ್ಬರನ್ನೊಬ್ಬರು ಮೀರಿಸಲು ಪೈಪೋಟಿ ನಡೆಸುವರು. ಇದರಿಂದ ಆ ಪ್ರದೇಶದಲ್ಲಿರುವ ಜನರಿಗೆ ವಿನಾಕಾರಣ ತೊಂದರೆಯಾಗುವುದುಂಟು. ಕೆಲವು ಬಾರಿ ಭಕ್ತಿಗೀತೆಗಳಿಗೆ ಬದಲು ಚಿತ್ರ ಸಂಗೀತ ಕೇಳಿಬರುತ್ತದೆ. ಉದ್ಯಾನಗಳಿಂದ ಹೂವಿನ ಕುಂಡಗಳು ಕಣ್ಮರೆಯಾಗುತ್ತವೆ. ಮರ-ಗಿಡಗಳಿಂದ ಹೂವುಗಳು ಮಾಯವಾಗುತ್ತವೆ.

ದುರ್ಗಾಪೂಜೆಗೆ ಕೆಲವು ವಾರಗಳ ಮೊದಲೇ ಎಲ್ಲೆಲ್ಲೂ ಸಡಗರ ಆರಂಭವಾಗುತ್ತದೆ. ಜನರು ಕೂಡಿಟ್ಟ ಹಣದಿಂದ ಹೊಸ ಬಟ್ಟೆಗಳನ್ನು ಹೊಲಿಸುವರು. ಚಪ್ಪಲಿಗಳನ್ನು ಕೊಳ್ಳುವರು. ಸಿಹಿ ತಿಂಡಿಗಳನ್ನು ಹಂಚಲು ಏರ್ಪಾಡು ಮಾಡಿಕೊಳ್ಳುವರು. ಬಂಧು-ಮಿತ್ರರಿಗೆ ಅನಾಥರಿಗೆ, ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ನೀಡಲು ಉಡುಗೊರೆಗಳನ್ನು ಕೊಳ್ಳುವರು.

ಕಲ್ಕತ್ತಾ ನಗರದಲ್ಲಿ ದುರ್ಗಾ ಪೂಜೆಯ ವೈಭವ ಹೇಳ ತೀರದು. ಆ ಒಂದು ವಾರದಲ್ಲಿ ಆ ನಗರದಲ್ಲಿ ಎಲ್ಲಿ ನೋಡಿದರೂ ಜಗಜಗಿಸುವ ದೀಪಗಳು, ಕಿವಿಗಡರುವ ಸಂಗೀತ, ಸುಂದರವಾಗಿ ಅಲಂಕರಿಸಿದ ಪೂಜಾ ಮಂಟಪಗಳು, ಹೊಸ ಬಟ್ಟೆಗಳಿಂದ ಶೋಭಿಸುವ ಲಕ್ಷಾಂತರ ಪುರುಷರು, ಮಹಿಳೆಯರು ಮತ್ತು ಮಕ್ಕಳು ಒಂದೆಡೆ ಕಲೆಯುವರು, ಬಂಧು-ಮಿತ್ರರನ್ನು ಭೇಟಿಯಾಗುವರು.

ಆ ನಗರದ ನೂರಾರು ಉದ್ಯಾನಗಳಲ್ಲಿ ಮತ್ತು ಬಯಲುಗಳಲ್ಲಿ ಪ್ರತಿ ವರ್ಷ ದುರ್ಗಾ ಪೂಜಾ ಸಮಾರಂಭಗಳು ನಡೆಯುತ್ತವೆ. ಆಗ ಜನ ಸಂಚಾರವನ್ನು ನಿಯಂತ್ರಿಸುವುದೇ ಒಂದು ದೊಡ್ಡ ಸಮಸ್ಯೆ. ಮುಖ್ಯ ರಸ್ತೆಗಳಲ್ಲಿ ಒಂದೇ ದಿಕ್ಕಿನಲ್ಲಿ ಮಾತ್ರ ಸಂಚಾರ. ಧರ್ಮಾರ್ಥ ಸಂಸ್ಥೆಗಳು ಕುಡಿಯುವ ನೀರನ್ನು ಒದಗಿಸಲು ಏರ್ಪಾಡು ಮಾಡುತ್ತವೆ. ಪ್ರಥಮ ಚಿಕಿತ್ಸಾ ಸೌಲಭ್ಯಗಳನ್ನು ಸಹ ಒದಗಿಸುತ್ತವೆ. ಇಡೀ ರಾತ್ರಿ ಅಂಗಡಿಗಳು ತೆರೆದಿರುತ್ತವೆ. ಬೆಲೆಗಳು ಗಗನಕ್ಕೇರುತ್ತವೆ. ಆದರೆ ಯಾರಿಗೂ ಅದರ ಚಿಂತೆಯಿಲ್ಲ. ಜನರಲ್ಲಿ ಆನಂದೋತ್ಸಾಹವಲ್ಲದೇ, ಸೌಹಾರ್ದ ಭಾವನೆ ತುಂಬಿರುತ್ತದೆ. ಈ ಒಂದು ವಾರ ಜನ ತಮ್ಮ ಕಷ್ಟಕಾರ್ಪಣ್ಯಗಳನ್ನು ಮರೆತು ಹಾಯಾಗಿ ಕಾಲ ಕಳೆಯುವರು.

ನಕ್ಕು ನಲಿದು ಆನಂದಿಸುವುದಷ್ಟೇ ಅಲ್ಲದೇ ಅಕ್ಕ-ಪಕ್ಕದವರಿಗೆ ಮತ್ತು ಗೆಳೆಯರಿಗೆ ಜನರು ಕರ್ತವ್ಯ ಪ್ರಜ್ಞೆ ತೋರಿಸುವರು. ಒಳ್ಳೆಯ ನಿರ್ಧಾರಗಳನ್ನು ಕೈಗೊಳ್ಳುವರು. ದುಃಖದಿಂದ ನೊಂದವರಿಗೆ ಸಮಾಧಾನ ಹೇಳುವರು. ವೈರವನ್ನು ಮರೆಯುವರು. ದೇವಿಯ ಮುಖದಲ್ಲಿನ ದಿವ್ಯ ಕಳೆ ಮನಸ್ಸಿಗೆ ಧೈರ್ಯ ಕೊಡುತ್ತದೆ. ಮಾನವ ಯತ್ನ ಮೀರಿದಾಗ, ದೈವ ಪ್ರೇರಣೆಯಾಗುವುದೆಂಬ ದೃಢ ವಿಶ್ವಾಸ ಜಾಗೃತಗೊಳ್ಳುತ್ತದೆ. ಹಿಂದೆ ಮಾಡಿದ ತಪ್ಪುಗಳಿಗೆ ಪಶ್ಚಾತ್ತಾಪ ಮೂಡುತ್ತದೆ. ನಲಿವು-ಗೆಲುವುಗಳು ಹೊಸ ಮನೋಸ್ಥೈರ್ಯವನ್ನು ನೀಡುತ್ತವೆ.

ದುರ್ಗಾಪೂಜೆ ಸಂದರ್ಭದಲ್ಲಿ ಪತ್ರಿಕೆಗಳು ಅದರಲ್ಲೂ ಮುಖ್ಯವಾಗಿ ಮಕ್ಕಳ ಪತ್ರಿಕೆಗಳು ವಿಶೇಷ ಸಂಚಿಕೆಗಳನ್ನು ಹೊರತರುತ್ತವೆ. ಇವು ಕಥೆಗಳು, ಕವಿತೆಗಳು ಮತ್ತು ನಾಟಕಗಳನ್ನೊಳಗೊಂಡಿರುತ್ತವೆ. ಸುಂದರ ಚಿತ್ರಗಳಿರುತ್ತವೆ. ಅವು ತುಂಬ ಅಗ್ಗದ ಬೆಲೆಯಲ್ಲಿ ಮಾರಾಟವಾಗುತ್ತವೆ. ಖ್ಯಾತ ಲೇಖಕರ ಶ್ರೇಷ್ಠ ಮಟ್ಟದ ಲೇಖನಗಳು ಪ್ರಕಟವಾಗುತ್ತವೆ. ಮಕ್ಕಳು ತಾವು ಕೂಡಿಟ್ಟ ಹಣದಿಂದ ಈ ವಿಶೇಷಾಂಕಗಳನ್ನು ಕೊಳ್ಳುವರು. ಎಷ್ಟೋ ಕಾಲದ ನಂತರವೂ ಅವರು ಈ ವಿಶೇಷಾಂಕಗಳನ್ನು ಪದೇ ಪದೇ ಓದಿ ಆನಂದಿಸುವರು. ದೊಡ್ಡವರಿಗೂ ಸಹ ವಿಶೇಷಾಂಕಗಳು ಪ್ರಕಟವಾಗುತ್ತವೆ. ಆದರೆ ಅವು ಮಕ್ಕಳ ವಿಶೇಷಾಂಕಗಳನ್ನು ಮೀರಿಸಲಾರವು.

ಈ ಹಬ್ಬದಲ್ಲಿ ಹೆಂಗಸರಿಗೆ ಬಿಡುವಿಲ್ಲದ ಕೆಲಸ. ಅವರು ಸಂಪ್ರದಾಯದ ಪ್ರಕಾರ ಮಾಡಬೇಕಾದ ಎಲ್ಲ ಸಿಹಿ ತಿಂಡಿಗಳನ್ನು ತಯಾರಿಸುವರು. ನಾನಾ ಪದಾರ್ಥಗಳನ್ನು ಸೇರಿಸಿ ಮಾಡಿದ ಈ ಸಿಹಿ ತಿಂಡಿಗಳನ್ನು ಅವರು ಅನೇಕ ವಾರಗಳ ಕಾಲ ಇಟ್ಟಿರುತ್ತಾರೆ. ಇವು ರಾಜರಿಗೂ ಹಿಡಿಸುವಂತಹ ಜನಸಾಮಾನ್ಯರ ತಿಂಡಿಗಳು. ಮೂರು ದಿನಗಳ ಪೂಜೆಯ ಬಳಿಕ ದೇವಿಯ ಪ್ರತಿಮೆಯನ್ನು ಪೀಠದಿಂದ ಇಳಿಸಲಾಗುವುದು. ಅನಂತರ ವಿಸರ್ಜನೆಗಾಗಿ ಮೆರವಣಿಗೆಯಲ್ಲಿ ಒಯ್ಯಲಾಗುವುದು. ಆಗ ಶಂಖ ಊದುವರು. ದೇವಿಯ ಹೆಸರನ್ನು ಪದೇ ಪದೇ ಹೇಳಿ ಜೈಘೋಷ ಮಾಡುವರು. ದೇವಿಯ ಪ್ರತಿಮೆಯನ್ನು ಟ್ರಕ್ಕುಗಳು, ಕಾರುಗಳು, ಗಾಡಿಗಳು ಮತ್ತು ಟೆಂಪೋಗಳಲ್ಲಿಟ್ಟು ವಿಸರ್ಜನೆಗಾಗಿ ತೆಗೆದುಕೊಂಡು ಹೋಗುವರು. ದೇವಿಯ ಪ್ರತಿಮೆಯನ್ನು ನದಿ, ಸರೋವರ ಅಥವಾ ಕೊಳದ ನೀರಿನಲ್ಲಿ ಮುಳುಗಿಸಿದಾಗ ಎಂತಹ ಕಲ್ಲೆದೆಯವರಿಗೂ ಒಂದು ಕ್ಷಣ ಮನ ಮಿಡಿಯುತ್ತದೆ.

ಮನೆಗೆ ಮರಳುವಾಗ ಜನರು ಕೂಗುತ್ತಾ, ಹಾಡುತ್ತಾ ಹೋಗುತ್ತಾರೆ. ಅನಂತರ ವಿಜಯೋತ್ಸವ ಸಮಾರಂಭಗಳು ನಡೆಯುತ್ತವೆ. ಇದನ್ನು ಮಿತ್ರರು ಮತ್ತು

ಬಂಧು-ಬಳಗದವವರಷ್ಟೇ ಆಚರಿಸುವರು. ಒಬ್ಬರನ್ನೊಬ್ಬರು ಆಲಂಗಿಸಿಕೊಂಡು ಶುಭಾಶಯ ಹೇಳುವರು. ಒಬ್ಬರು ಮತ್ತೊಬ್ಬರಿಗೆ ಸಿಹಿ ತಿಂಡಿಗಳನ್ನು ಕೊಡುವರು. ಈ ಕಾರ್ಯಕ್ರಮ ದುರ್ಗಾ ಪೂಜೆಯ ನಂತರವೂ ಎಷ್ಟೋ ದಿನಗಳ ಕಾಲ ಮುಂದುವರಿಯುತ್ತದೆ.

ಪೂಜಾ ಸಮಾರಂಭಗಳ ಒಂದು ಪ್ರಮುಖ ಕಾರ್ಯಕ್ರಮವೆಂದರೆ ನಾಟಕ ಪ್ರದರ್ಶನ. ಪೂಜೆಗೆ ಅನೇಕ ತಿಂಗಳ ಮೊದಲೇ ನಾಟಕಗಳನ್ನು ಆರಿಸಲಾಗುವುದು. ಜನ ಮೆಚ್ಚಿದ ನಾಟಕಗಳು ಮತ್ತೆ ಮತ್ತೆ ಪ್ರದರ್ಶಿತವಾಗುತ್ತವೆ. ಇದರಿಂದ ಕಲಾವಿದರಿಗಾಗಲಿ ಅಥವಾ ಪ್ರೇಕ್ಷಕರಿಗಾಗಲೀ ಬೇಸರವಾಗದು. ಅನೇಕ ವಾರಗಳ ಮುಂಚೆ ನಾಟಕದ ಮಾತಿಗೆ ಪ್ರತಿಗಳನ್ನು ತಯಾರಿಸಲಾಗುವುದು. ಪಾತ್ರಧಾರಿಗಳನ್ನು ಆರಿಸಲಾಗುವುದು. ಅವರು ತಮ್ಮ ಪಾತ್ರದ ಮಾತುಗಳನ್ನು ಚೆನ್ನಾಗಿ ಬಾಯಿಪಾಠ ಮಾಡುವರು. ಅನಂತರ ನಾಟಕದ ಅಭ್ಯಾಸ ಆರಂಭ. ಅಭ್ಯಾಸ ಪ್ರತಿ ದಿನ ನಡೆಯುವುದು. ಶಾಲೆಗೆ ಹೋಗುವ ಮಕ್ಕಳ ಮತ್ತು ಪರೀಕ್ಷೆಗೆ ಕೂಡುವ ವಿದ್ಯಾರ್ಥಿಗಳ ತಂದೆ-ತಾಯಿಗಳಿಗೆ ಚಿಂತೆ. ಆದರೆ ದುರ್ಗಾ ಪೂಜೆ ವರ್ಷಕ್ಕೊಮ್ಮೆ ಅದರಲ್ಲೂ ದಸರಾ ರಜಾ ದಿನಗಳಲ್ಲೇ ಬರುವುದರಿಂದ ಯೋಚನೆ ಇಲ್ಲ. ಸಾಮಾಜಿಕ ದೃಷ್ಟಿಯಿಂದ ದುರ್ಗಾ ಪೂಜೆಗೆ ಹೆಚ್ಚು ಮಹತ್ವವಿದೆ. ಹಳ್ಳಿಯಾಗಲೀ, ಪಟ್ಟಣವಾಗಲೀ ಎಲ್ಲ ಜನರೂ ನಾಟಕವಾಡುವ ಪ್ರಯತ್ನಕ್ಕೆ ಸಹಕರಿಸುವರು. ಕಲಾವಿದರು, ನಿರ್ಮಾಪಕರು, ಪಾತ್ರಧಾರಿಗಳಿಗೆ ವೇಷ ತೊಡಿಸುವವರು ಮತ್ತು ಪ್ರೇಕ್ಷಕರು ಎಲ್ಲರೂ ಸ್ಥಳೀಯರು. ಇದರಲ್ಲಿ ಜಾತಿ-ಮತಗಳ ಬೇಧ-ಭಾವವಿಲ್ಲ. ಆಸನಗಳ ವಿಷಯದಲ್ಲಿಯೂ ತಾರತಮ್ಯವಿಲ್ಲ. ವೃದ್ಧರನ್ನು ಮಾತ್ರ ಮುಂದೆ ಕುರ್ಚಿಗಳ ಮೇಲೆ ಕೂಡಿಸಲಾಗುವುದು. ಉಳಿದವರೆಲ್ಲ ನೆಲದ ಮೇಲೆ ಕುಳಿತು ನಾಟಕ ನೋಡುವರು.

ಈ ಹಬ್ಬದಲ್ಲಿ ಇಡೀ ಬಂಗಾಳದ ಜನರ ಸಾಂಸ್ಕೃತಿಕ ಜೀವನ ವಿಕಸನಗೊಂಡು ಅದರ ಸುಗಂಧ ರಾಷ್ಟ್ರವೆಲ್ಲೆಡೆ ಹರಡುವುದೆಂದರೂ ಅತಿಶಯವಿಲ್ಲ.

ದುರ್ಗಾ ಪೂಜೆ ಸಮಯಕ್ಕೆ ಸರಿಯಾಗಿ ಹೊರಗಿದ್ದವರೆಲ್ಲ ತಮ್ಮ ತಮ್ಮ ಊರಿಗೆ ಬರುತ್ತಾರೆ. ಎಲ್ಲರೂ ಪುನಃ ಒಗ್ಗೂಡುವರು. ಈ ಹಬ್ಬ ವರ್ಷದ ವಿಶೇಷ. ಹಗಲಿನ ಅವಧಿ ಕಡಿಮೆಯಾಗುತ್ತದೆ. ಮಂಜು ಆರಂಭವಾಗುತ್ತದೆ. ಅಂದ ಮೇಲೆ ಆಶ್ವಯುಜದ ಆಗಮನವಾದಂತೆ. ದುರ್ಗಾ ಪೂಜೆಯನ್ನು ಜನರು ಮತ್ತೆ ಕಾತುರದಿಂದ ಎದುರು ನೋಡುವರು.

ಲೀಲಾ ಮಜೂಮ್‌ದಾರ್



ದಸರಾ

ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ ವೇಳೆಗೆ ಮುಂಗಾರು ಮೋಡಗಳು ಕ್ರಮೇಣ ಚದುರುತ್ತವೆ. ಆಗಾಗ ತುಂತುರು ಹನಿಗಳು ಬೀಳುತ್ತವೆ. ಮಬ್ಬು ಕವಿಸುವ ಮೋಡಗಳು ಮಾಯವಾಗುತ್ತವೆ. ಆಕಾಶ ಶುಭ್ರ ನೀಲಿಯಿಂದ ಕಂಗೊಳಿಸುತ್ತದೆ. ದಸರಾ ಬರುತ್ತದೆ.

ಇತರ ಹಬ್ಬಗಳಂತೆ ದಸರಾ ಹಬ್ಬವೂ ದುಷ್ಟ ಶಕ್ತಿಗಳನ್ನು ಸಂಹರಿಸಿ, ಸಜ್ಜನರನ್ನು ಉದ್ಧಾರ ಮಾಡುವ ಉದಾತ್ತ ತತ್ವವನ್ನು ಪ್ರತಿಪಾದಿಸುತ್ತದೆ. ದೇಶದಾದ್ಯಂತ ನಾನಾ ರೀತಿಗಳಲ್ಲಿ ಈ ಹಬ್ಬವನ್ನು ಆಚರಿಸಲಾಗುವುದು. ಈ ಹಬ್ಬದ ಅವಧಿ ಹತ್ತು ದಿನಗಳು ಮತ್ತು ಹತ್ತು ರಾತ್ರಿಗಳು. ಮೊದಲ ಒಂಭತ್ತು ರಾತ್ರಿಗಳಿಗೆ ನವರಾತ್ರಿ ಎನ್ನುವರು. ಕೆಲವು ಪ್ರದೇಶಗಳಲ್ಲಿ ದುರ್ಗಾ ಹಾಗೂ ಲಕ್ಷ್ಮಿಯನ್ನು ಆರಾಧಿಸಲಾಗುವುದು. ಉತ್ತರ ಭಾರತದಲ್ಲಿ ಎಲ್ಲ ಹತ್ತು ದಿನಗಳೂ ರಾಮಲೀಲಾ ನಡೆಯುತ್ತದೆ. ಇದರಲ್ಲಿ ರಾಮಾಯಣದ ವಿವಿಧ ಘಟನೆಗಳನ್ನು ನಿರೂಪಿಸಲಾಗುವುದು. ಕಡೆಯಲ್ಲಿ ರಾವಣನ ಆಕೃತಿಯನ್ನು ಸುಡಲಾಗುವುದು. ರಾವಣನ ಮೇಲೆ ರಾಮ ಸಾಧಿಸಿದ ವಿಜಯವನ್ನಾಚರಿಸಲಾಗುವುದು.

ಅತ್ಯಂತ ಪುರಾತನವಾದ ರಾಮಾಯಣದ ಕಥೆಯನ್ನು ನಾವು ಬಲ್ಲೆವು. ರಾವಣ ಸೀತಾದೇವಿಯನ್ನು ಲಂಕೆಗೆ ಕದ್ದೊಯ್ದ. ರಾಮ-ಲಕ್ಷ್ಮಣರು ಸೀತೆಯನ್ನು ಕಾಪಾಡಲು ಲಂಕೆಗೆ ಹೋದರು. ಹನುಮಂತ ಇಡೀ ವಾನರ ಸೇನೆಯೊಡನೆ ರಾಮ-ಲಕ್ಷ್ಮಣರಿಗೆ ಸಹಾಯ ಮಾಡಿದ. ಹತ್ತು ದಿನಗಳ ಕಾಲ ರಾಮ-ರಾವಣರ ಯುದ್ಧ ನಡೆಯಿತು. ರಾವಣನ ಮಗ ಮೇಘನಾಥ ಮತ್ತು ಅವನ ತಮ್ಮ ಕುಂಭಕರ್ಣ ಹತರಾದರು. ಕಡೆಗೆ ರಾವಣನೂ ಕೊಲ್ಲಲ್ಪಟ್ಟ. ರಾಮ ಜಯಶಾಲಿಯಾದ ಮತ್ತು ಸೀತೆಯನ್ನು ಕಾಪಾಡಿದ. ಸೀತೆ ಪತಿಯೊಡನೆ ಅಯೋಧ್ಯೆಗೆ ಹಿಂದಿರುಗಿದಳು. ವನವಾಸ ಮುಗಿಸಿ, ಎಲ್ಲರೂ ಅಯೋಧ್ಯೆಗೆ ಮರಳಿದರು.

ಪ್ರತಿ ವರ್ಷ ಅತ್ಯಂತ ಹೆಚ್ಚು ಶ್ರದ್ಧಾ-ಭಕ್ತಿಗಳಿಂದ ರಾಮಾಯಣದ ನಾಟಕಗಳನ್ನಾಡುವರು. ಮಳೆಗಾಲ ಮುಗಿದು ಫಸಲು ಬಂದ ನಂತರ, ಪ್ರತಿಯೊಬ್ಬರೂ ನಾಟಕವಾಡಲು ಸಿದ್ಧತೆ ಮಾಡಿಕೊಳ್ಳಲಾರಂಭಿಸಿದರು.

ಹಳ್ಳಿಗಳಲ್ಲಿ ಪಂಚಾಯತು, ಸ್ಥಳೀಯ ನಾಟಕ ಮಂಡಳಿಗಾಗಿ, ಮನೆ-ಮನೆಯಿಂದ ಚಂದಾ ಹಣ ಎತ್ತುತ್ತದೆ. ಮಂಡಳಿ ಪಾತ್ರಧಾರಿಗಳಿಗೆ ನಾಟಕವನ್ನು ಅಭ್ಯಾಸ ಮಾಡಿಸುತ್ತದೆ. ಅದು ನಾಟಕಕ್ಕೆ ಅಗತ್ಯವಾದ ಉಡುಗೆ-ತೊಡುಗೆಗಳನ್ನು ಸಿದ್ಧಪಡಿಸುತ್ತದೆ. ಕೋತಿಗಳ ಮತ್ತು ಕರಡಿಗಳ ಮುಖವಾಡಗಳು ಮತ್ತು ಬಿಲ್ಲು ಬಾಣಗಳು ಮುಂತಾದುವನ್ನು ತಯಾರಿಸುತ್ತದೆ. ಹಳ್ಳಿಯ ಬಯಲಿನಲ್ಲಿ ರಂಗಮಂಚವನ್ನು ನಿರ್ಮಿಸುತ್ತದೆ. ಹತ್ತು ದಿನಗಳ ಕಾಲ ಪ್ರತಿ ಸಂಜೆ ರಾಮಾಯಣದ ಮುಖ್ಯ ಘಟನೆಗಳನ್ನು ಕಲಾವಿದರು ಪ್ರದರ್ಶಿಸುವರು. ಕಡೇ ದಿನ ಬಿದಿರು ಮತ್ತು ಕಾಗದದಿಂದ ಮಾಡಿದ ರಾವಣ, ಕುಂಭಕರ್ಣ ಮತ್ತು ಮೇಘನಾಥ ಈ ಮೂರು ಆಕೃತಿಗಳನ್ನು ಸುಡಲಾಗುವುದು. ಬೆಂಕಿ ಹಚ್ಚಿದ ಕೂಡಲೇ ಈ ಆಕೃತಿಗಳೊಳಗೆ ತುಂಬಿದ ಪಟಾಕಿ ಚಟಪಟಗುಟ್ಟುತ್ತ ಸಿಡಿಯುತ್ತವೆ. ಪ್ರಜ್ವಲ ಬೆಳಕು ಮೂಡುತ್ತದೆ. ಎತ್ತರದ ರಾಕ್ಷಸಗೊಂಬೆಗಳು ಉರಿದು ಕೆಳಗೆ ಬೀಳುತ್ತವೆ. ಹೀಗೆ ರಾಮ ದುಷ್ಟ ರಾಕ್ಷಸರನ್ನು ಸಂಹರಿಸಿ ಲೋಕ ಕಲ್ಯಾಣ ಮಾಡುತ್ತಾನೆ.

ದೊಡ್ಡ ದೊಡ್ಡ ನಗರಗಳಲ್ಲಿ ಒಂದೊಂದು ಪ್ರದೇಶದಲ್ಲೂ ಸ್ಥಳೀಯ ಸಮಿತಿಗಳಿರುತ್ತವೆ. ಅವು ರಾಮಾಯಣದ ನಾಟಕಕ್ಕಾಗಿ ಹಣ ಸಂಗ್ರಹಿಸುತ್ತವೆ. ಆಯಾ ಪ್ರದೇಶದ ಕಲಾವಿದರೇ ಪಾತ್ರ ವಹಿಸುವರು. ಆದರೆ ಈಗಿನ ಕಾಲದಲ್ಲಿ ರಾಮ, ರಾವಣ ಮತ್ತು ಹನುಮಂತನ ಪಾತ್ರಗಳಿಗಾಗಿ ಖ್ಯಾತ ಕಲಾವಿದರನ್ನು ಕರೆಸುವುದುಂಟು.

ರಾಮಲೀಲಾದಲ್ಲಿ ಹೆಂಗಸರು ಪಾತ್ರ ವಹಿಸುವುದಿಲ್ಲ. ಹುಡುಗರೇ ಸ್ತ್ರೀ ವೇಷದಲ್ಲಿ ಆಯಾ ಪಾತ್ರಗಳನ್ನು ನಿರ್ವಹಿಸುವರು. ಶೂರ್ಪನಖಿಯಂತಹ ದುಷ್ಟ ರಾಕ್ಷಸಿಯ ಪಾತ್ರ ವಹಿಸುವುದೆಂದರೆ ಅವರಿಗೆ ಆನಂದ. ರಾಕ್ಷಸಿಯ ವೇಷಕ್ಕಾಗಿ ಅವರು ಕ್ರೂರವಾಗಿ ಕಾಣಿಸುವ ಮುಖವಾಡ ಹಾಕಿಕೊಳ್ಳುವರು!

ದೆಹಲಿಯಲ್ಲಿ ದಸರಾದ ಕಡೇ ದಿನವನ್ನು ರಾಷ್ಟ್ರೀಯ ಮಹತ್ವವುಳ್ಳ ಒಂದು ಹಬ್ಬವನ್ನಾಗಿ ಆಚರಿಸಲಾಗುವುದು. ರಾಮಲೀಲಾ ಮೈದಾನದಲ್ಲಿ ಇದಕ್ಕಾಗಿ ಭಾರಿ ಏರ್ಪಾಡುಗಳಾಗುತ್ತವೆ. ಮೂವರು ರಾಕ್ಷಸರ ಬೃಹದಾಕಾರದ ಆಕೃತಿಗಳನ್ನು ನಿಲ್ಲಿಸಲಾಗುತ್ತದೆ. ಅವುಗಳ ಎತ್ತರ ಸುಮಾರು 120 ರಿಂದ 150 ಅಡಿಗಳಷ್ಟಿರುತ್ತದೆ. ಅವುಗಳಲ್ಲಿ ಅತ್ಯುತ್ತಮ ದರ್ಜೆಯ ಪಟಾಕಿಗಳನ್ನು ತುಂಬಿಸಿರಲಾಗುತ್ತದೆ. ಪ್ರತಿ ವರ್ಷ ರಂಗದ ಮೇಲೆ ಒಂದಲ್ಲ ಒಂದು ವಿನೂತನ ತಂತ್ರವನ್ನು ತೋರಿಸಲಾಗುತ್ತದೆ. ಹನುಮಂತ ಪ್ರೇಕ್ಷಕರ ತಲೆಯ ಮೇಲೆ ಹಾರಿ ಹೋಗುವಂತಹ ಒಂದು ತಂತ್ರವನ್ನು 1978ರಲ್ಲಿ ಪ್ರದರ್ಶಿಸಲಾಯಿತು.

ಹಳ್ಳಿಯಲ್ಲಾಗಲಿ ಅಥವಾ ಪಟ್ಟಣದಲ್ಲಾಗಲೀ ವರ್ಷಕ್ಕೊಂದು ಸಲ ಬರುವ ಈ ಹಬ್ಬವನ್ನು ನಾವು ನೋಡೇ ಇರುತ್ತೇವೆ. ಕೆಲವು ವೇಳೆ ಭಾಗವಹಿಸಿಯೂ ಇರುತ್ತೇವೆ. ಆದರೆ ವಾರಣಾಸಿಯ ಬಳಿ ಇರುವ ರಾಮ್‌ನಗರ್ ಎಂಬಲ್ಲಿ ನಡೆಯುವ ರಾಮಲೀಲಾದ ವೈಖರಿಯನ್ನು ನೋಡಿರುವವರು ಅತಿ ವಿರಳ. ಈ ಊರು ವಾರಣಾಸಿ ಬಳಿ ಗಂಗಾನದಿಯ ಆಚೆಯ ದಂಡೆಯ ಮೇಲಿದೆ.

ಇಲ್ಲಿ ನಡೆಯುವ ರಾಮಲೀಲಾ ನಿಜವಾಗಿಯೂ ಅದ್ಭುತ. ಅದನ್ನು ಕೇವಲ ನಾಟಕದಂತಲ್ಲದೇ ಒಂದು ದೊಡ್ಡ ಧಾರ್ಮಿಕ ಸಮಾರಂಭವಾಗಿ ಆಚರಿಸಲಾಗುತ್ತದೆ. ಅದರಲ್ಲಿ ಭಾಗವಹಿಸಲು ಸಾವಿರಾರು ಜನರು ಬರುತ್ತಾರೆ. ಈ ರಾಮಲೀಲಾ ಮೂವತ್ತು ದಿನಗಳ ಕಾಲ ನಡೆಯುತ್ತದೆ. ಈ ರೀತಿಯ ರಾಮಲೀಲಾವನ್ನು ಬನಾರಸ್ ಮಹಾರಾಜರು ನೂರು ವರ್ಷಗಳ ಹಿಂದೆ ಆರಂಭಿಸಿದರು. ಆ ರಾಜರ ವಂಶಸ್ಥರು ಇಂದಿನವರೆಗೂ ಅದನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ರಾಮನಗರದ ಕೋಟೆಯೊಳಗಿನ ಅರಮನೆಯಲ್ಲಿ ಬನಾರಸ್ ಮಹಾರಾಜರ ವಂಶಸ್ಥರು ಈಗಲೂ ಇದ್ದಾರೆ.

ರಾಮನಗರದ ರಾಮಲೀಲಾ ಹದಿನಾರನೇ ಶತಮಾನದ ಸಂತ ಕವಿ ತುಳಸೀದಾಸ್ ರಚಿಸಿದ ರಾಮಚರಿತ ಮಾನಸದ ಮೇಲೆ ಆಧಾರಿತವಾಗಿದೆ. ಇದು ವಾಲ್ಮೀಕಿ ಮಹರ್ಷಿ ಸಂಸ್ಕೃತದಲ್ಲಿ ರಚಿಸಿದ ಮೂಲ ರಾಮಾಯಣದ ಹಿಂದೀ ರೂಪಾಂತರ. ಈ ರಾಮಾಯಣ

ಜನಪ್ರಿಯವಾಗಿದೆ. ತುಳಸೀದಾಸರ ಇಡೀ ರಾಮಾಯಣ ನಾಲ್ಕು-ನಾಲ್ಕು ಸಾಲುಗಳ ಪದ್ಯಗಳಿಂದ ಕೂಡಿದೆ. ಇದನ್ನು ಹಾಡಿದರೆ ಕೇಳಲು ಬಲು ಮಧುರವಾಗಿರುತ್ತದೆ. ಈ ಪದ್ಯಗಳು ಕಥೆಯನ್ನು ಮಾತ್ರವಲ್ಲ, ಕವಿಯ ಉದಾತ್ತ ವಿಚಾರವನ್ನು ಸಹ



ಪ್ರತಿಬಿಂಬಿಸುತ್ತವೆ. ತುಳಸೀದಾಸರು ರಾಮನ ದೊಡ್ಡ ಭಕ್ತರಾಗಿದ್ದರು. ರಾಮಚರಿತ ಮಾನಸವನ್ನು ಕೇಳುತ್ತಿದ್ದರೆ ಮನಸ್ಸು ಕರಗುತ್ತದೆ. ಕಣ್ಣಲ್ಲಿ ನೀರಿಳಿಯುತ್ತದೆ.

ರಾವಣನ ದುಷ್ಕೃತ್ಯಗಳಿಂದ ಬೇಸತ್ತ ದೇವತೆಗಳು ವಿಷ್ಣುವಿಗೆ ಮೊರೆ ಹೋಗುವ

ದೃಶ್ಯದೊಂದಿಗೆ ರಾಮನಗರದ ರಾಮಲೀಲಾ ಆರಂಭವಾಗುತ್ತದೆ. ತನ್ನ ದೈವಿಕ ಕಾರ್ಯವನ್ನು ನೆರವೇರಿಸಲು ವಿಷ್ಣು ಭೂಮಿಯ ಮೇಲೆ ರಾಮನಾಗಿ ಹುಟ್ಟುತ್ತಾನೆ. ನಾಟಕದಲ್ಲಿ ಬರುವ ವಿವಿಧ ದೃಶ್ಯಗಳನ್ನು ರಾಮನಗರದ ವಿವಿಧ ಭಾಗಗಳಲ್ಲಿ ಅಭಿನಯಿಸಲಾಗುವುದು. ಅರಮನೆಯ ಹೊರಗಡೆ ಅಯೋಧ್ಯಾ ಪಟ್ಟಣದ ದೃಶ್ಯವನ್ನು ಪ್ರದರ್ಶಿಸಲಾಗುವುದು. ಇಲ್ಲಿ ದಶರಥ ಮಹಾರಾಜನ ಆಸ್ಥಾನ ಮುಂತಾದ ಆರಂಭಿಕ ದೃಶ್ಯಗಳು ತೋರಿಸಲ್ಪಡುತ್ತವೆ. ರಾಮ, ಲಕ್ಷ್ಮಣ ಮತ್ತು ಸೀತೆಯೊಂದಿಗೆ ಕಾಡಿಗೆ ಹೋಗುವ ದೃಶ್ಯವನ್ನು ರಾಮನಗರದ ಅರಮನೆಯಿಂದ ದೂರವಿರುವ ಒಂದು ಹಳ್ಳಿ ಪ್ರದೇಶದಲ್ಲಿ ತೋರಿಸಲಾಗುವುದು. ಅವರು ನಾರು ಮಡಿಯುಟ್ಟು ಅರಣ್ಯಕ್ಕೆ ಹೋಗುವಾದ ಪ್ರೇಕ್ಷಕರು ಸಹ ಅವರ ಹಿಂದೆ ಹೋಗುತ್ತಾರೆ. ಪೂಜಾರಿಗಳು ಈ ದೃಶ್ಯಕ್ಕೆ ಸಂಬಂಧಿಸಿದ ರಾಮಚರಿತ ಮಾನಸದ ಪದ್ಯಗಳನ್ನು ಹಾಡುತ್ತಾ ಹೋಗುವರು.

ರಾಮನಗರದ ಅತಿ ದೊಡ್ಡ ಮೈದಾನವೇ ಲಂಕಾನಗರ. ಈ ಮೈದಾನದ ಒಂದು ಮೂಲೆಯೇ ಅಶೋಕ ವನ. ಬಂಧಿತಳಾದ ಸೀತೆ ಆ ವನದಲ್ಲಿರುತ್ತಾಳೆ. ದೃಶ್ಯ ಬದಲಾವಣೆಯಾಗುತ್ತಿದ್ದಂತೆ, ಪ್ರೇಕ್ಷಕರೂ ಸಹ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವರು. ರಾಮ ಮತ್ತು ಅವನ ಪರಿವಾರ ಅಯೋಧ್ಯೆಗೆ ಹಿಂದಿರುಗುವ ದೃಶ್ಯದಲ್ಲಿ ರಥ ಎಳೆಯಬೇಕಾದ ಸಂದರ್ಭ ಬಂದಾಗ ಪ್ರೇಕ್ಷಕರಿಗೆ ಉತ್ಸಾಹವೋ ಉತ್ಸಾಹ. ಲಂಕಾನಗರದಿಂದ ಅಯೋಧ್ಯೆಯವರೆಗೂ ರಥ ಎಳೆಯುವುದರಲ್ಲಿ ಅವರು ನೆರವಾಗುವರು.

ಯುದ್ಧದ ದೃಶ್ಯ ತುಂಬಾ ರೋಮಾಂಚಕಾರಿಯಾಗಿರುತ್ತದೆ. ಒಂದು ದೊಡ್ಡ ಮೈದಾನವನ್ನು ಊಹಿಸಿಕೊಳ್ಳಿ. ಮಧ್ಯದಲ್ಲಿ ಒಂದು ದೊಡ್ಡ ರಂಗಮಂಚ. ಇದರ ಒಂದು ಕಡೆ ರಾಮ-ಲಕ್ಷ್ಮಣರು ಕುಳಿತುಕೊಳ್ಳುವರು. ಹನ್ನೆರಡು ವರ್ಷ ವಯಸ್ಸಿನ ಚಿಕ್ಕ ಬ್ರಾಹ್ಮಣ ಹುಡುಗರು ರಾಮ-ಲಕ್ಷ್ಮಣರ ಪಾತ್ರ ವಹಿಸುವರು. ಅವರ ಮುಖಗಳನ್ನು ಸಣ್ಣ-ಸಣ್ಣ ಬಣ್ಣದ ಚುಕ್ಕೆಗಳು ಮತ್ತು ಹೊಳೆವ ವಸ್ತುಗಳಿಂದ ಅಲಂಕರಿಸಲಾಗುವುದು. ಅವರು ವಿಶೇಷವಾಗಿ ತಯಾರು ಮಾಡಿದ ಕಿರೀಟಗಳನ್ನು ಧರಿಸುವರು. ಸುಂದರವಾಗಿ ಕಸೂತಿ ಮಾಡಿದ ಉಡುಪುಗಳನ್ನು ಹಾಕಿಕೊಳ್ಳುವರು. ಬಿಲ್ಲು-ಬಾಣಗಳನ್ನು ಹೆಗಲಿಗೆ ಏರಿಸಿಕೊಳ್ಳುವರು. ಅವರ ಹಿಂದೆ ವ್ಯಾಸರು (ಪಂಡಿತರು) ಕುಳಿತುಕೊಳ್ಳುವರು. ಪಾತ್ರಧಾರಿಗಳು ಮಾತು ಮರೆತರೆ ಅವರಿಗೆ ಆ ಸಾಲುಗಳನ್ನು ನೆನಪು ಮಾಡಿಕೊಡುವರು. ಮೂವತ್ತು ದಿನಗಳ ಕಾಲ ಹೇಳಬೇಕಾದ ಮಾತುಗಳನ್ನು ಮರೆಯದೇ ಹೇಳುವುದು

ಯಾರಿಗಾದರೂ ಕಷ್ಟ. ರಂಗಸ್ಥಳದಿಂದಾಚೆ, ದೂರದಲ್ಲಿ ರಾಕ್ಷಸರ ಮೂರು ಬೃಹದಾಕೃತಿಗಳಿರುತ್ತವೆ. ಈ ಆಕೃತಿಗಳ ಮುಂದೆ ರಾವಣ, ಮೇಘನಾಥ ಮತ್ತು ಕುಂಭಕರ್ಣ ಅಭಿನಯಿಸುವರು. ರಂಗದ ಸುತ್ತ ಒಂದು ಲಕ್ಷಕ್ಕೂ ಹೆಚ್ಚು ಜನರು ಸೇರುತ್ತಾರೆ. ಗಂಡಸರು ಮತ್ತು ಹೆಂಗಸರು ಬೇರೆಬೇರೆ ಸ್ಥಳಗಳಲ್ಲಿ ಕುಳಿತುಕೊಳ್ಳುವರು. ರಾಮಚರಿತ ಮಾನಸವನ್ನು ಹಾಡುವ ಪಂಡಿತರು, ಪುಸ್ತಕಗಳನ್ನು ತೆರೆದಿಟ್ಟುಕೊಂಡು ಕೂಡುವರು. ಅವರ ಮುಂದೆ ಅವರ ನಾಯಕರು ಕುಳಿತುಕೊಳ್ಳುವರು. ಗಾಯಕರಿಗೆ ಬೆಳಕು ಬರುವಂತೆ ಎರಡು ದೊಡ್ಡ ಪಂಜುಗಳನ್ನು ಉರಿಸಲಾಗುವುದು. ಮುಖ್ಯ ಅತಿಥಿಗಳು ಗಾಯಕರ ಹಿಂದೆ, ಮೂರು-ನಾಲ್ಕು ಆನೆಗಳ ಮೇಲೆ ಸುಂದರವಾಗಿ ಚಿತ್ರಿಸಿದ ಅಂಬಾರಿಗಳಲ್ಲಿ ಕೂಡುವರು.

ಕೆಂಪು ಬಣ್ಣದ ಭಾರಿ ಮುಖವಾಡ ಧರಿಸಿದ ಹನುಮಂತ ತನ್ನ ಸೈನ್ಯ ಸಹಿತ ರಂಗದ ಮೇಲೆ ಬರುತ್ತಾನೆ. ಅವರ ಎದುರಿಗೆ ರಾಕ್ಷಸರು ನಿಲ್ಲುವರು. ಒಂದು ಕಡೆಯವರು ಇನ್ನೊಂದು ಕಡೆಯವರ ಮೇಲೆ ಬಾಣ ಬಿಡುವರು. ಕಪಿಗಳಿಗೆ ಕೆಂಪು ಮತ್ತು ಕರಡಿಗಳಿಗೆ ನೀಲಿ ಮುಖವಾಡಗಳಿರುತ್ತವೆ. ರಾಮನಗರದ ನಿವಾಸಿಗಳ ಮಕ್ಕಳೇ ಕಪಿಗಳ ಮತ್ತು ಕರಡಿಗಳ ಪಾತ್ರವನ್ನು ವಹಿಸುವರು. ಈ ಪಾತ್ರಕ್ಕಾಗಿ ಮಕ್ಕಳು ಹಾತೊರೆದು ಕಾದಿರುತ್ತಾರೆ. ರಾಕ್ಷಸರು ಘೋರ ಮುಖವಾಡಗಳನ್ನು ಧರಿಸುವರು. ಕಪಿಗಳ ಮತ್ತು ಕರಡಿಗಳ ಮುಖಭಂಗಿ ಮತ್ತು ವರ್ತನೆ ಪ್ರೇಕ್ಷಕರನ್ನು ನಗಿಸುತ್ತವೆ. ಉಬ್ಬಿದ ಕಣ್ಣುಗಳು, ಕೆಂಪಗಿರುವ ನಾಲಿಗೆ, ಕೋರೆ ಹಲ್ಲುಗಳು ಮತ್ತು ಚೂಪಾದ ಕೊಂಬುಗಳಿಂದ ಘೋರವಾಗಿ ಕಾಣುವ ರಾಕ್ಷಸರು ಹತರಾದಾಗ ಪ್ರೇಕ್ಷಕರು 'ರಾಮ್ ರಾಮ್ ಜೈ ಸೀತಾರಾಮ್' ಎಂದು ಜೋರಾಗಿ ಕೂಗುವರು. ರಾಮ-ರಾವಣರ ಯುದ್ಧದಲ್ಲಿ ಈ ಕೂಗು ಅತಿರೇಕಕ್ಕೆ ಹೋಗುತ್ತದೆ. ರಾವಣನನ್ನು ಕೊಂದಾಗ ಆ ಪಾತ್ರಧಾರಿ ಕೆಳಗೆ ಬೀಳುತ್ತಾನೆ. ಆಗ ರಾಕ್ಷಸರ ಆಕೃತಿಗಳಿಗೆ ಬೆಂಕಿ ಹಚ್ಚಲಾಗುವುದು. ಆಕೃತಿಗಳಲ್ಲಿ ತುಂಬಿದ ಪಟಾಕಿಗಳು ಚಟಪಟ ಸಿಡಿಯುತ್ತವೆ. ಆಕೃತಿಗಳು ಧಗ-ಧಗ ದಹಿಸುತ್ತವೆ. ಕತ್ತಲ ರಾತ್ರಿಯಲ್ಲಿ ಬೆಳಕು ಆವರಿಸುತ್ತದೆ. ಪ್ರೇಕ್ಷಕರ 'ಜೈ ಸೀತಾರಾಮ್' ಕೂಗು ಗಗನ ಮುಟ್ಟುತ್ತದೆ.

ಇದರ ಮರುದಿನ ಸಂಜೆ 'ಭರತ್ ಮಿಲಾಪ್' (ಅಂದರೆ ಭರತ ಮಿಲನ) ಇರುತ್ತದೆ. ಭರತ ಮತ್ತು ಅವನ ಆಸ್ಥಾನಿಕರು ನದಿಯ ದಂಡೆಗೆ ಬಂದು ನದಿ ದಾಟುವರು. ಅಣ್ಣ-ತಮ್ಮಂದಿರ ಪುನರ್ ಮಿಲನದ ದೃಶ್ಯ ಹೃದಯಸ್ಪರ್ಶಿಯಾಗಿರುತ್ತದೆ. ಅನಂತರ ಅವರೆಲ್ಲ ನದಿಯ ಆಚೆ ಕಡೆಯಿಂದ ಹಿಂದಿರುಗುವರು. ಪ್ರೇಕ್ಷಕರು ಸಹ ಅವರನ್ನು

ಹಿಂಬಾಲಿಸುವರು. ಆಗ ಅವರು ಇಪ್ಪತ್ತನೇ ಶತಮಾನದ ನಾಗರಿಕರಂತೆ ಕಾಣಿಸುವುದಿಲ್ಲ. 'ರಾಮರಾಜ್ಯ' ಕಾಲದಲ್ಲಿನ ಅಯೋಧ್ಯಾ ಪ್ರಜೆಗಳಂತೆಯೇ ಕಾಣಿಸುವರು. ಹೀಗೆ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ ಇವು ಮೂರೂ ಸಮ್ಮಿಳಿತಗೊಂಡ ಅದ್ಭುತ ಘಟನೆ ನಮ್ಮ ಕಣ್ಣು ಮುಂದೆ ಹಾದು ಹೋಗುತ್ತದೆ.


ಕಡೇ ದಿನ ನಡೆಯುವ 'ಆರತಿ ಪೂಜೆ'ಯಲ್ಲಿ ಎಲ್ಲರೂ ಭಾಗವಹಿಸುವರು. ಆಗ ಶ್ರೀರಾಮ ಘಟ್ಟಾಭಿಷೇಕ ನಡೆಯುತ್ತದೆ. ದುರ್ಜನರು ಹತರಾಗಿ, ಸಜ್ಜನರಿಗೆ ಜಯ ಲಭಿಸಿದ ಸಂಕೇತವಾಗಿ ಈ ಉತ್ಸವವನ್ನು ಆಚರಿಸಲಾಗುವುದು.

ದಸರಾದ ಕಡೇ ದಿನದ ಸಮಾರಂಭಗಳು ಮುಗಿದರೂ ಮಕ್ಕಳ ಸಡಗರಕ್ಕೆ ಮಾತ್ರ ಕೊನೆಯಿಲ್ಲ. ಪಟಾಕಿಗಳ ಚಟಪಟ ಶಬ್ದ ಮತ್ತು ಬಾಣಬಿರುಸುಗಳ ಸಂಭ್ರಮ ಮುಂದುವರಿದಿರುತ್ತದೆ. ಅಷ್ಟು ಹೊತ್ತಿಗೆ ದೀಪಾವಳಿ ಹಬ್ಬ ಸಮೀಪಿಸುತ್ತದೆ. ಮಕ್ಕಳಷ್ಟೇ ನಲಿದಾಡುವ ಎಲ್ಲರಿಗೂ ಮತ್ತೊಂದು ಹಬ್ಬದ ಸಂಭ್ರಮ ಪುನಃ ಆರಂಭವಾಗುತ್ತದೆ.

ತಮಿಳು ನಾಡಿನಲ್ಲಿ ದಸರಾಗೆ 'ನವರಾತ್ರಿ' ಎನ್ನುವರು. ಮೂರು ದಿನ ಲಕ್ಷ್ಮಿ ಪೂಜೆಗೆ, ಮೂರು ರಾತ್ರಿ ಶಕ್ತಿ ಅಥವಾ ಪಾರ್ವತಿ ಪೂಜೆಗೆ ಮತ್ತು ಮೂರು ರಾತ್ರಿ ಸರಸ್ವತಿ ಪೂಜೆಗೆ ಮೀಸಲಿರುತ್ತವೆ. ಪ್ರತಿಯೊಂದು ಮನೆಯಲ್ಲೂ ಗೊಂಬೆಗಳನ್ನು ಸುಂದರವಾಗಿ ಕೂಡಿಸುವರು. ಈ ಗೊಂಬೆಗಳನ್ನು ಮೆಟ್ಟಲು-ಮೆಟ್ಟಲಾಗಿ ಕೂಡಿಸಲಾಗುವುದು. ಮರದ ಗೊಂಬೆಗಳು ಮತ್ತು ಮಣ್ಣಿನ ಗೊಂಬೆಗಳನ್ನು ದೇವರು ಮತ್ತು ದೇವತೆಗಳ ಸಂಕೇತಗಳೆಂದು ಪರಿಗಣಿಸಲಾಗುವುದು. ಗೊಂಬೆಗಳ ಮುಂದೆ ಕಲಶ ಇಡುವರು. (ಬೆಳ್ಳಿ, ತಾಮ್ರ ಅಥವಾ ಮಣ್ಣಿನ ಪಾತ್ರೆಯ ಮೇಲೆ ತೆಂಗಿನಕಾಯಿ ಇಡಲಾಗುವುದು. ಇದು ದುರ್ಗಾದೇವಿಯ ಪ್ರತೀಕ). ನವರಾತ್ರಿಯಲ್ಲಿ ಪ್ರತಿ ಸಂಜೆ ಹೆಂಗಸರು ಒಬ್ಬರ ಮನೆಗೊಬ್ಬರು ಹೋಗಿ, ಅರಿಶಿನ-ಕುಂಕುಮ ತೆಗೆದುಕೊಳ್ಳುವರು. ಅವರು ಗೊಂಬೆಗಳ ಮುಂದೆ ಹಾಡುತ್ತಾ ಕುಣಿಯುವರು. ಒಂಭತ್ತನೇ ದಿನ ಸರಸ್ವತಿ ಪೂಜೆ ಅಥವಾ ಆಯುಧ ಪೂಜೆ ನಡೆಯುವುದು. ವಿದ್ಯಾರ್ಥಿಗಳು ಪುಸ್ತಕಗಳಿಗೆ, ರೈತರು ನೇಗಿಲುಗಳಿಗೆ, ಬಡಗಿ ತನ್ನ ಉಪಕರಣಗಳಿಗೆ - ಹೀಗೆ ತಮ್ಮ ತಮ್ಮ ವೃತ್ತಿಯಲ್ಲಿ ಬಳಸುವ ಸಲಕರಣೆಗಳಿಗೆ ಪೂಜೆ ಮಾಡುವರು. ಅಂದು ಯಾವ ಕಸುಬಿನವರೂ ಕೆಲಸ ಮಾಡುವುದಿಲ್ಲ. ವಿಜಯ ದಶಮಿಯಂದು ಅಂದರೆ ಹತ್ತನೇ ದಿನ ಅವರು ತಮ್ಮ ತಮ್ಮ ವೃತ್ತಿಗೆ ತಮ್ಮ ಸೇವೆಯನ್ನು ಮತ್ತೆ ಮುಡಿಪಾಗಿಡುವರು. ಅಂದು ವಿದ್ಯಾರಂಭದ ದಿನ. ಮಕ್ಕಳಿಗೆ ಅಕ್ಷರ ಕಲಿಕೆಯನ್ನು ಆರಂಭಿಸಲಾಗುವುದು.

ಕರ್ನಾಟಕದಲ್ಲಿ ದಸರಾ ವರ್ಷದ ಅತಿ ಮುಖ್ಯ ಹಬ್ಬ. ಮೈಸೂರಿನ ಚಾಮುಂಡಿ ಬೆಟ್ಟದ ಮೇಲೆ ಚಾಮುಂಡೇಶ್ವರಿ ದೇವಾಲಯದಲ್ಲಿ ಸಾವಿರಾರು ಜನ ಭಕ್ತಾದಿಗಳು ಸೇರುವರು. ಚಾಮುಂಡೇಶ್ವರಿ (ದುರ್ಗಾ) ಮೈಸೂರಿನ ನಗರ ದೇವತೆ. ದಸರಾ ಹಬ್ಬದಲ್ಲಿ ಮೈಸೂರು ನಗರವನ್ನು ವಿಶೇಷವಾಗಿ ಶೃಂಗರಿಸಲಾಗುತ್ತದೆ. ಎಲ್ಲೆಲ್ಲೂ ಸಡಗರ-ಸಂಭ್ರಮಗಳು ಎದ್ದು ಕಾಣುತ್ತವೆ. ಕೇರಳದಲ್ಲಿ ಈ ಹಬ್ಬ ಅಷ್ಟೊಂದು ಅದ್ಧೂರಿಯಾಗಿ ನಡೆಯುವುದಿಲ್ಲ. ಹಿಂದೂಗಳು ತಮ್ಮ ತಮ್ಮ ಮನೆಯಲ್ಲೇ ಆಯುಧ ಪೂಜೆ ಮತ್ತು ವಿಜಯದಶಮಿಯನ್ನು ಗಲಾಟೆಯಿಲ್ಲದೇ ಆಚರಿಸುವರು.

ಉಮಾ ಆನಂದ್





ದೀಪಾವಳಿ

ದೀಪಾವಳಿ ಮತ್ತು ದೀವಳಿಗೆ ಎರಡೂ ಒಂದೇ ಹಬ್ಬದ ಎರಡು ಹೆಸರುಗಳು. ಈ ಹಬ್ಬ ಅಕ್ಟೋಬರ್-ನವಂಬರ್ ತಿಂಗಳಲ್ಲಿ ಬರುತ್ತದೆ. ಬಿಸಿಲ ಬೇಗೆ ಮುಗಿದು ಚಳಿಗಾಲ ಆಗ ತಾನೇ ಆರಂಭವಾಗಿರುತ್ತದೆ. ಹುಳು-ಹುಪ್ಪಟೆಗಳ ಕಾಟದಿಂದ ಪಾರಾಗಿ ಜನರೆಲ್ಲ ಆನಂದವಾಗಿರುತ್ತಾರೆ.

ಭಾರತದ ಎಲ್ಲೆಡೆ ದೀಪಾವಳಿ ಹಬ್ಬವನ್ನು ಆಚರಿಸಲಾಗುವುದು. ಹಬ್ಬಕ್ಕೆ ಅನೇಕ ವಾರಗಳ ಮೊದಲು ಮನೆಗಳನ್ನು ಸ್ವಚ್ಛಗೊಳಿಸಲಾಗುವುದು. ಗೋಡೆಗಳಿಗೆ ಸುಣ್ಣ ಹೊಡೆಯಲಾಗುವುದು. ಪೀಠೋಪಕರಣಗಳಿಗೆ ವಾರ್ನಿಷ್ ಹಚ್ಚಿ ಮೆರುಗು ಕೊಡಲಾಗುವುದು. ನೇತಾಡುವ ಜೇಡನ ಬಲೆಗಳನ್ನು ತೆಗೆಯಲಾಗುವುದು. ಮಕ್ಕಳು ಹೊಸ ಬಟ್ಟೆಗಳನ್ನು ಹೊಲಿಸಿಕೊಳ್ಳುವರು. ಬಂಧು-ಮಿತ್ರರಿಗೆ ಸಿಹಿ ತಿಂಡಿ ಹಂಚಲು ಏರ್ಪಾಡು ಮಾಡಿಕೊಳ್ಳಲಾಗುವುದು. ದೀಪಾವಳಿಯಲ್ಲಿ ಐಶ್ವರ್ಯ ದೇವತೆ ಲಕ್ಷ್ಮಿಯನ್ನು ಪೂಜಿಸಲಾಗುವುದು. ಲಕ್ಷ್ಮಿಯ ಆಗಮನವಾಗಬೇಕಾದರೆ ಮನೆ ಚೊಕ್ಕಟವಾಗಿರಬೇಕು

ಎನ್ನುವ ನಂಬಿಕೆಯಿದೆ. ದೀಪಾವಳಿಗೆ ಇನ್ನೂ ಕೆಲವು ದಿನಗಳಿರುವಾಗಲೇ ಅಂಜುವಿನ ತಾಯಿ, ಶೋಭಾ ಮತ್ತು ರಾಕೇಶ್ ರಂಗೋಲಿಗಾಗಿ ಬಣ್ಣಬಣ್ಣದ ಪುಡಿಗಳನ್ನು ಕೊಳ್ಳುವರು. ಸಿಹಿ ತಿಂಡಿಗಳಿಗೆ ಹಾಕಲು ದ್ರಾಕ್ಷಿ ಮತ್ತು ಗೋಡಂಬಿ ಮುಂತಾದ ಪದಾರ್ಥಗಳನ್ನು ಕೊಳ್ಳುವರು. ಹೊಸ ಬಟ್ಟೆಗಳನ್ನು ಹೊಲಿಯಲು ಹಾಕುವರು. "ನೀವು ದೊಡ್ಡವರಾದ ಮೇಲೆ ಬೇರಾವ ಹಬ್ಬವನ್ನು ಆಚರಿಸದಿದ್ದರೂ ಚಿಂತೆಯಿಲ್ಲ. ದೀಪಾವಳಿಯನ್ನಾಚರಿಸಲು ಖಂಡಿತ ಮರೆಯಬೇಡಿ" ಎಂದು ಹೇಳಿ ಅಂಜುವಿನ ತಾಯಿ ಮಕ್ಕಳಿಗೆ ದೀಪಾವಳಿ ಹಬ್ಬದ ಮಹತ್ವವನ್ನು ವಿವರಿಸುತ್ತಾರೆ.

"ಅಮ್ಮಾ ಲಕ್ಷ್ಮಿಯನ್ನು ಯಾರಾದರೂ ನೋಡಿದ್ದಾರೆಯೇ? ಅವರು ಯಾರ ಮನೆಗಾದರೂ ಬಂದಿದ್ದಾಳೆಯೇ?" ಎಂದು ಪುಟ್ಟ ಅಂಜು ಕೇಳಿದಳು. "ಹಾಗಲ್ಲ ಮರಿ, ಸುಖ-ಸಂತೋಷಗಳು ತುಂಬಿರುವ ಮನೆಯಲ್ಲಿ, ಅವಳನ್ನು ಮನಃಪೂರ್ವಕವಾಗಿ ಆರಾಧಿಸುವವರ ಮನೆಯಲ್ಲಿ ಲಕ್ಷ್ಮಿ ಇರುತ್ತಾಳೆ. ಲಕ್ಷ್ಮಿಯು ಚೊಕ್ಕಟವಾಗಿರುವ ಮನೆಗೆ ಮಾತ್ರ ಕಾಲಿಡುತ್ತಾಳೆ ಮತ್ತು ಆ ಮನೆಯವರನ್ನು ಹರಸುತ್ತಾಳೆ" ಎನ್ನುವುದೇ ಇದರ ಅರ್ಥ ಎಂದು ಅವಳ ತಾಯಿ ನಗುನಗುತ್ತಾ ಉತ್ತರಿಸಿದರು. "ಮನೆಯನ್ನು ಚೊಕ್ಕಟವಾಗಿಡಲು ಬೇಸರಪಡುವ ಜನ ಏಳಿಗೆ ಹೊಂದುವುದಿಲ್ಲ. ಸದಾ ನಗುಮುಖವಿರಬೇಕು, ಒಳ್ಳೆಯ ಮನಸ್ಸಿರಬೇಕು. ಅಂತಹವರಿಗೆ ಲಕ್ಷ್ಮಿ ಕೂಡಲೇ ಒಲಿಯುವಳು. ಒಬ್ಬರ ಬೆನ್ನ ಹಿಂದೆ ಅವರನ್ನು ಬೈಯುವ ಮತ್ತು ಸದಾ ಇನ್ನೊಬ್ಬರ ತಪ್ಪನ್ನೇ ಹುಡುಕುವವರು ತಮ್ಮ ಜೀವನದಲ್ಲಿ ಸುಖ ಕಾಣುವುದಿಲ್ಲ" ಎಂದು ಅವರು ಹೇಳಿದರು.

"ಅಮ್ಮಾ ಈ ಸಲ ನಾವು ಆ ಸಾಹುಕಾರರ ಮನೆಯಲ್ಲಿ ಹಾಕಿದ್ದಾರಲ್ಲಾ, ಅಂತಹ ಬಲ್ಬ್‌ಗಳನ್ನೇ ತರಬೇಕು. ಅವು ಎಷ್ಟು ಬಣ್ಣಬಣ್ಣವಾಗಿರುತ್ತವೆ ಮತ್ತು ಝಗಝಗಿಸುತ್ತವೆ ಗೊತ್ತೇ?" ಎಂದ ರಾಕೇಶ್.

"ಎಷ್ಟೋ ಜನ ಬರಿ ಮೊಂಬತ್ತಿಗಳನ್ನೇ ಹಚ್ಚುತ್ತಾರೆ. ನನ್ನನ್ನು ಕೇಳಿದರೆ ಹಳೇ ಕಾಲದ ಆ ಹಣತೆಯ ದೀಪವೇ ಎಷ್ಟೋ ಚೆನ್ನಾಗಿರುತ್ತದೆ" ಎಂದರು ಅವನ ತಾಯಿ.

"ಅಜ್ಜಿಗೆ ಎಷ್ಟು ಬತ್ತಿಗಳನ್ನು ತಾನೇ ಹೊಸೆಯಲು ಸಾಧ್ಯ? ಬತ್ತಿ ಹೊಸೆಯುವುದನ್ನು ಬಿಟ್ಟರೆ ಅವರಿಗೆ ಬೇರೇನೂ ಕೆಲಸವಿಲ್ಲವೇ?" ಎಂದು ಕೇಳಿದ ರಾಕೇಶ್.

"ನಮ್ಮ ಈ ದೊಡ್ಡ ಮನೆಗೆ ಎಷ್ಟು ಬತ್ತಿಗಳನ್ನು ಹೊಸೆದರೂ ಸಾಲದು. ಕಡೇ ಪಕ್ಷ

ಐನೂರು ಹಣತೆಗಳನ್ನಾದರೂ ಹಚ್ಚಬೇಕು. ಮನೆಯ ಮೂಲೆಯೂ ಬೆಳಗಬೇಡವೇ ?" ಎಂದರು ತಾಯಿ.

"ಬೇರೆ ಬೇರೆ ದೀಪಗಳಿಗಿಂತ, ಲಕ್ಷ್ಮಿಗೆ ಹಣತೆಯ ದೀಪದ ಮೇಲೆ ಏಕೆ ಅಷ್ಟೊಂದು ಪ್ರೀತಿ ?" ಎಂದು ಅಂಜು ಒಂದು ಪ್ರಶ್ನೆ ಹಾಕಿದಳು.

"ವಿಷಯ ಹಾಗಲ್ಲ. ಹಿಂದಿನ ಕಾಲದಲ್ಲಿ ವಿದ್ಯುಚ್ಛಕ್ತಿ ಇರಲಿಲ್ಲ. ಮೊಂಬತ್ತಿಗಳು ಕೂಡಾ ಇರಲಿಲ್ಲ. ಹಾಗಾಗಿ ಜನರು ಹಣತೆ ದೀಪಗಳನ್ನು ಹಚ್ಚುತ್ತಿದ್ದರು. ಹಣತೆಯ ದೀಪವೇ ಶ್ರೇಷ್ಠವೆಂದು ಭಾವಿಸುವ ಜನ ಈಗಲೂ ಇದ್ದಾರೆ. ನನಗೇನೋ ಎಣ್ಣೆ ದೀಪವೇ ಇಷ್ಟ. ಅದರ ದೀಪ ಸೌಮ್ಯವಾಗಿರುತ್ತದೆ. ಕಣ್ಣು ಕುಕ್ಕುವುದಿಲ್ಲ. ಮಣ್ಣಿನ ಹಣತೆ ಮಾಡುವ ಕುಂಬಾರನಿಗೆ ವರ್ಷಕ್ಕೊಮ್ಮೆಯಾದರೂ ಸ್ವಲ್ಪ ಹಣ ಗಳಿಸುವ ಅವಕಾಶ ಸಿಗಬೇಕು. ಆದರೆ, ಈಗ ಎಣ್ಣೆಯೂ ದುಬಾರಿ. ಎಷ್ಟೋ ಜನರಿಗೆ ಎಣ್ಣೆ ದೀಪ ಹಚ್ಚುವ ಸಾಮರ್ಥ್ಯವೂ ಇಲ್ಲ" ಎಂದರು ರಾಕೇಶನ ತಾಯಿ.


ದೀಪಾವಳಿಯ ಮುಂಜಾನೆ ಮಕ್ಕಳ ಉತ್ಸಾಹಕ್ಕೆ ಮಿತಿಯೇ ಇಲ್ಲ. ಅಂದು ಅವರನ್ನು ಹಾಸಿಗೆಯಿಂದ ಹಿಡಿದೆಬ್ಬಿಸಬೇಕಾದ ಅವಶ್ಯಕತೆಯಿರುವುದಿಲ್ಲ. ಈ ದಿನಕ್ಕಾಗಿ ಅವರು ಎಷ್ಟೋ ದಿನಗಳಿಂದ ಕಾಯುತ್ತಿರುತ್ತಾರೆ. ಅಂದು ಮುಂಜಾನೆಯಿಂದಲೇ ಪಟಾಕಿಗಳ ಚಟಪಟ ಶಬ್ದ. ಮನೆಯಲ್ಲಿ ಹಬ್ಬದ ಸಂಭ್ರಮ ತುಂಬಿರುತ್ತದೆ. ಎಲ್ಲರೂ ಹೊಸ ಬಟ್ಟೆಗಳಿಂದ ಶೋಭಿಸುವರು. ಮನೆಯಲ್ಲಿ ಸಿಹಿ ತಿಂಡಿಗಳ ಡಬ್ಬಗಳು, ಪಟಾಕಿಗಳು ಮತ್ತು ಹಣತೆಗಳು ತುಂಬಿರುತ್ತವೆ. ಯಾವ ಹಬ್ಬದಲ್ಲೂ ಇಷ್ಟೊಂದು ಸಂಭ್ರಮ ಕಾಣಬರುವುದಿಲ್ಲ.

ಶೋಭಾ ಮನೆಯ ಹಿರಿಯ ಮಗಳು. ರಂಗೋಲಿ ಹಾಕುವುದೆಂದರೆ ಅವಳಿಗೆ ಬಲು ಇಷ್ಟ. ಆದ್ದರಿಂದ ರಂಗೋಲಿ ಹಾಕುವ ಕೆಲಸ ಅವಳಿಗೆ ಮೀಸಲು. ಅಂಜು ಮತ್ತು ರಾಕೇಶ್‌ಗೆ ಸುಮ್ಮನೆ ಕೂಡುವ ಮನಸ್ಸಿಲ್ಲ. ಅವರಿಬ್ಬರೂ ಅಜ್ಜಿ ಜೊತೆ ಸೇರಿಕೊಂಡು ಬತ್ತಿ ಹೊಸೆಯುವರು. ರಂಗೋಲಿ ಹಾಕಲು ಅಕ್ಕನಿಗೆ ನೆರವಾಗುವರು.

ರಾಕೇಶ್ ಮತ್ತು ಅವನ ತಾಯಿ, ನೂರಾರು ಹಣತೆಗಳಿಗೆ ಎಣ್ಣೆ ಹಾಕಿ, ಅವುಗಳಿಗೆ ಬತ್ತಿಗಳನ್ನು ಇಡುವರು. ಅನಂತರ ಅವನ್ನು ಗೋಡೆಗಳ ಮೇಲೆ ಸಾಲಾಗಿಡುವರು. ವರಾಂಡ ಮತ್ತು ಕೊಠಡಿಯಲ್ಲೂ ಹಣತೆಗಳನ್ನಿಡುವರು. ಮುಸ್ಸಂಜೆಗೆ ಸರಿಯಾಗಿ ಹಣತೆಗಳನ್ನು ಹೊತ್ತಿಸಲಾಗುವುದು. ರಸ್ತೆಯ ಉದ್ದಕ್ಕೂ ಎಲ್ಲಿ ನೋಡಿದರೂ ಸಾಲು ದೀಪಗಳು, ಎಲ್ಲೆಲ್ಲೂ ಕಣ್ಣು ಕೋರೈಸುವ ದೀಪಗಳು. ಎಂತಹ ರಮ್ಯ ದೃಶ್ಯ !

ದೀಪಾವಳಿ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಬರುತ್ತದೆ. ಅಂದು ಆಕಾಶದಲ್ಲಿ ಚಂದ್ರನಿರುವುದಿಲ್ಲ. ಮಾನವರು ಹಚ್ಚುವ ದೀಪದಿಂದಲೇ ಆಕಾಶ ಬೆಳಗಲೆಂದು ನಿಸರ್ಗವೇ ಆ ರಾತ್ರಿಯನ್ನು ಅಂಧಕಾರಗೊಳಿಸುತ್ತದೆ.

ದೀಪಗಳನ್ನು ಹೊತ್ತಿಸಿ ಲಕ್ಷ್ಮಿಯನ್ನು ಪೂಜಿಸಲಾಗುವುದು. ಇದಕ್ಕೆ ಮೊದಲು ಪೂಜೆಯ ಸ್ಥಳವನ್ನು ಚೆನ್ನಾಗಿ ಸಾರಿಸಿ, ರಂಗೋಲಿ ಇಡಲಾಗುವುದು. ದೇವರಿಗೆ ಹಣ್ಣು, ಕಾಯಿ ಮತ್ತು ಸಿಹಿ ತಿಂಡಿಗಳನ್ನು ನೈವೇದ್ಯ ಮಾಡಲಾಗುವುದು. ಮಕ್ಕಳು ಹಣೆಗೆ ಕುಂಕುಮವಿಟ್ಟು ಕೊಳ್ಳುವರು. ದೀಪಗಳಿಂದ ಅಲಂಕರಿಸಿದ ಲಕ್ಷ್ಮಿ ಮತ್ತು ಗಣೇಶನ ಪ್ರತಿಮೆಗಳನ್ನು ಮೆರವಣಿಗೆಯಲ್ಲಿ ಒಯ್ಯಲಾಗುವುದು.



ಪ್ರಾರ್ಥನೆಯ ಬಳಿಕ ಮಕ್ಕಳು ಪಟಾಕಿಗಳನ್ನು ಹಚ್ಚುವರು. ದೀಪಾವಳಿಗೆ ಎಷ್ಟೋ ದಿನಗಳ ಮುಂಚೆಯೇ ಪಟಾಕಿಯ ಶಬ್ದ ಆಗಾಗ ಕೇಳುತ್ತಲೇ ಇರುತ್ತದೆ. ರಾಕೆಟ್‌ಗಳನ್ನು ಹಾರಿಸಿದಾಗ, ಕಗ್ಗತ್ತಲ ಆಕಾಶದಲ್ಲಿ ನೂರಾರು ನಕ್ಷತ್ರಗಳು ಮೂಡಿದಂತೆ ಕಾಣಬರುತ್ತದೆ. ಕಗ್ಗತ್ತಲ ಆಕಾಶದಲ್ಲಿ ನೂರಾರು ನಕ್ಷತ್ರಗಳು ಮೂಡಿದಂತೆ ಕಾಣಬರುತ್ತದೆ.

ಪಟಾಕಿಯನ್ನು ಹಚ್ಚುವ ಆತುರದಲ್ಲಿ ಸ್ವಲ್ಪ ಎಚ್ಚರ ತಪ್ಪಿದರೂ ಅನಾಹುತವಾಗುವ ಸಂಭವವುಂಟು.

ಸಿಹಿ ತಿಂಡಿಗಳನ್ನು ಹಂಚುವುದೆಂದರೆ ಮಕ್ಕಳಿಗೆ ಬಲು ಆಸೆ. ಯಾರಾದರೂ ಪರಿಚಿತರು ಕಂಡರೆ, ಕೂಡಲೇ ಅವರ ಕೈಗೆ ಸಿಹಿ ತಿಂಡಿ ಇಟ್ಟು, ಅವರಿಗೆ ದೀಪಾವಳಿ ಶುಭಾಶಯಗಳನ್ನು ಹೇಳುವರು.

ದೀಪಾವಳಿಗೆ ಸಂಬಂಧಿಸಿದಂತೆ ಪುರಾಣ ಕಥೆಯಿದೆ. ರಾಮ ರಾವಣನನ್ನು ಕೊಂದ ನಂತರ ಸೀತೆ, ಲಕ್ಷ್ಮಣ ಮತ್ತು ಹನುಮಂತನ ಸಮೇತ ಅಯೋಧ್ಯೆಗೆ ಮರಳಿದ. ವಿಜಯದ ಸಂಕೇತವಾಗಿ ಅಯೋಧ್ಯೆಯ ಜನರು ತುಪ್ಪದ ದೀಪಗಳನ್ನು ಹಚ್ಚಿ, ಇಡೀ ದಿನ ಆನಂದವಾಗಿ ಕಳೆದರು. ರಾವಣನನ್ನು ಕೊಂದು ರಾಮ ಸಾಧಿಸಿದ ವಿಜಯವನ್ನಾಚರಿಸಲು ಅಂದಿನಿಂದಲೂ ದೀಪಾವಳಿ ಹಬ್ಬವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಜ್ಞಾನದ ಬೆಳಕು ಅಜ್ಞಾನದ ಅಂಧಕಾರವನ್ನು ಹೊಡೆದೋಡಿಸುವುದೆಂಬ ತತ್ವವನ್ನು ಈ ಹಬ್ಬ ಪ್ರತಿಪಾದಿಸುತ್ತದೆ. ಆದರೆ, ಇದಕ್ಕೆ ಮನುಷ್ಯ ಪ್ರಯತ್ನ ಬೇಕೇ ಬೇಕೆಂಬುದನ್ನು ಈ ಹಬ್ಬ ನಮಗೆ ನೆನಪು ಮಾಡಿಕೊಡುತ್ತದೆ. ಲಕ್ಷಾಂತರ ದೀಪಗಳನ್ನು ಬೆಳಗಿಸಿ, ಸಂತೋಷ-ಸಂಭ್ರಮಗಳಿಂದ ಕಾಲ ಕಳೆಯುವ ಮೂಲಕ ಈ ಹಬ್ಬದ ದಿವ್ಯ ಸಂದೇಶವನ್ನು ನಾವು ಹೊರಗೆಡಹುತ್ತೇವೆ.

ದೀಪಾವಳಿ ಮುಖ್ಯವಾಗಿ ಹಿಂದೂಗಳ ಹಬ್ಬ. ವ್ಯಾಪಾರಿಗಳಿಗೆ ಅಂದು ಹೊಸ ವರ್ಷದ ಆರಂಭ. ಆ ದಿನ ಅವರು ಲೆಕ್ಕವಿಡಲು ಹೊಸ ಪುಸ್ತಕಗಳನ್ನು ತೆರೆಯುವರು. ಆದಾಗ್ಯೂ ಈ ಹಬ್ಬ ಯಾವುದೇ ಒಂದ ಕೋಮಿನದಲ್ಲ. ಎಲ್ಲ ಜಾತಿ-ಮತಗಳ ಜನರೂ ಈ ಹಬ್ಬವನ್ನು ಆಚರಿಸಬಹುದು. ಅಂಜುವಿನ ಎದುರು ಮನೆಯಲ್ಲಿ ವಿದೇಶೀಯರ ಕುಟುಂಬವೊಂದು ವಾಸವಾಗಿತ್ತು. ದೀಪಾವಳಿ ಹಬ್ಬದ ದಿನ ಅವರೂ ಸಹ ದೀಪದ ಹಣತೆಗಳನ್ನಿಟ್ಟಿದ್ದರು. ಈದ್ ಹಬ್ಬದ ದಿನ ಅಂಜುವಿನ ಮುಸಲ್ಮಾನ ಗೆಳತಿಯರಾದ ಸಲ್ಮ ಮತ್ತು ಹಸನ್ ಅಂಜುವಿನ ಮನೆಯವರಿಗೆ ಶ್ಯಾವಿಗೆಯಿಂದ ತಯಾರಿಸಿದ ತಿಂಡಿಗಳನ್ನು ತಂದುಕೊಟ್ಟಿದ್ದರು. ಆದ್ದರಿಂದ, ಅದಕ್ಕೆ ಪ್ರತಿಯಾಗಿ ಅಂಜು ದೀಪಾವಳಿ ಹಬ್ಬದಲ್ಲಿ ತನ್ನ ಮುಸಲ್ಮಾನ ಗೆಳತಿಯರಿಗೆ ಸಿಹಿ ತಿಂಡಿ ಕಳಿಸುವಳು.


ಅಂಜು ಮತಾಪು ಹಚ್ಚುತ್ತಿದ್ದಳು. ರಾಕೇಶ್ ರಾಕೆಟ್ ಅನ್ನು ಹಾರಿಸಲು, ಅದಕ್ಕೆ ಬೆಂಕಿ ಹೊತ್ತಿಸುತ್ತಿದ್ದ. ಇವರಿಬ್ಬರೂ ಪಟಾಕಿ ಹಾರಿಸುತ್ತಾ ಇದ್ದುದನ್ನು ಪಕ್ಕದ ಮನೆಯ ಕೆಲ ಬಡ ಹುಡುಗರು ನೋಡುತ್ತಾ ನಿಂತಿದ್ದರು. ಪಟಾಕಿ ಕೊಳ್ಳುವ ಸಾಮರ್ಥ್ಯ ಆ ಬಡ

ಮಕ್ಕಳಿಗಿರಲಿಲ್ಲ. ಅಂಜುವಿನ ತಾಯಿ ಪಟಾಕಿಗಳ ಒಂದು ಪೊಟ್ಟಣವನ್ನು ತೆಗೆದು ತಮ್ಮ ಮಗಳ ಕೈಗೆ ಕೊಟ್ಟು, "ಈ ಪಟಾಕಿಯನ್ನು ಆ ಬಡಮಕ್ಕಳಿಗೆ ಕೊಡು" ಎಂದರು. ಅನಂತರ ಅವರು ಸ್ವಲ್ಪ ಸಿಹಿ ತಿಂಡಿಗಳನ್ನೂ ಸಹ ಆ ಮಕ್ಕಳ ಕೈಗಿಟ್ಟರು. ಆಗ ಆ ಮಕ್ಕಳ ಮುಖ ಸಂತೋಷದಿಂದ ಅರಳಿತು.

ಇದೇ ದೀಪಾವಳಿ ಹಬ್ಬದ ನಿಜವಾದ ಅರ್ಥ. ನೊಂದವರ ಮುಖದಲ್ಲಿ ಗೆಲುವು ಬರುವಂತೆ ಮಾಡುವುದರಲ್ಲಿ ನಮಗುಂಟಾಗುವ ಆನಂದ, ಪಟಾಕಿಯ ಪಟಪಟ ಶಬ್ದದಿಂದ ಬರುವ ಆನಂದಕ್ಕಿಂತ ಎಷ್ಟೋ ಪಾಲು ಹೆಚ್ಚು.

ಮೂಲ ಹಿಂದಿ: ಇಂದಿರಾ ನೂಪೂರ್





ಕ್ರಿಸ್‌ಮಸ್

“ಈ ಕ್ರಿಸ್‌ಮಸ್‌ನಲ್ಲಿ ಬರುವುದೆಲ್ಲಾ ಬರೀ ಅಸಂಬದ್ಧ!” ಎಂದು ಉದ್ಗಾರ ತೆಗೆದು, ನೀಲೂ, ಕಾಮಿಕ್ ಪುಸ್ತಕವನ್ನು ರಪ್ಪನೆ ಮುಚ್ಚಿದ.

ಅವನ ತಂಗಿ ರಾಣಿ, ತಣ್ಣಗೆ ಕೊರೆಯುತ್ತಿದ್ದ ಕಿಟಕಿಯ ಗಾಜಿಗೆ ತನ್ನ ಮೂಗನ್ನು ಒತ್ತಿ, ಆಕಾಶದತ್ತ ದೃಷ್ಟಿ ಹಾಯಿಸಿದಳು. “ಈ ರಾತ್ರಿ ನಕ್ಷತ್ರಗಳು ಎಷ್ಟೊಂದು ಉಜ್ವಲವಾಗಿ ಮಿನುಗುತ್ತಿವೆ. ನನ್ನ ತೋಳುಗಳು ಸಾವಿರ ಮೈಲಿಗಳಷ್ಟು ಉದ್ದವಿದ್ದಿದ್ದರೆ, ನಾನು ಆ ನಕ್ಷತ್ರಗಳನ್ನು ಹಿಡಿಯುಬಹುದಿತ್ತು” ಎಂದಳು.

ನೀಲೂ ಕಾಲಿನ ಹೆಬ್ಬರಳಿನಿಂದಲೇ ದೀಪವಾರಿಸಿದ. ರಾಣಿ ರಜಾಯಿ ಹೊದ್ದು ಮಲಗಿದಳು. ಮರುದಿನವೇ ಕ್ರಿಸ್‌ಮಸ್. ವೀಣಳ ಊರಿನಲ್ಲಿ ತಾನು ಆಚರಿಸಿದ್ದ ಕ್ರಿಸ್‌ಮಸ್ ಹಬ್ಬ ಅವಳ ನೆನಪಿಗೆ ಬಂತು. ವೀಣಳ ತಂದೆ ಒಬ್ಬ ಪಾದ್ರಿ. ಕ್ರಿಸ್‌ಮಸ್, ಕ್ರಿಸ್ತನ ವಿಶೇಷ ಹಬ್ಬವೆಂದು ಅವರು ರಾಣಿಗೆ ತಿಳಿಸಿದ್ದರು.

ಆ ಊರಿನಲ್ಲಿ ಒಂದು ಚಿಕ್ಕ ಚರ್ಚ್ ಇತ್ತು. ಡಿಸೆಂಬರ್ 24ರಂದು ಆ ಚರ್ಚನ್ನು

ಚೆನ್ನಾಗಿ ಅಲಂಕರಿಸಿದ್ದರು. ಅದರ ಮರುದಿನ ಅಲ್ಲಿ ಒಂದು ಸುಂದರವಾದ ಶಾಮಿಯಾನಾ ಎದ್ದಿತು. ಸುತ್ತ-ಮುತ್ತಲ ಹಳ್ಳಿಯ ಜನರನ್ನು ಅಲ್ಲಿ ಸ್ವಾಗತಿಸಲಾಯಿತು. ಇಡೀ ರಾತ್ರಿ ಹಳ್ಳಿಯುವರು ತಂಡ-ತಂಡವಾಗಿ ಕ್ರಿಸ್‌ಮಸ್ ಭಜನೆಗಳನ್ನು ಹಾಡಿಕೊಂಡು ಬರುತ್ತಿದ್ದರು. ರಾಣಿ ಮತ್ತು ವೀಣ ಒಂದು ಕ್ಷಣವೂ ನಿದ್ರಿಸಲಿಲ್ಲ. ಸೂರ್ಯ ಹುಟ್ಟುವ ಹೊತ್ತಿಗೆ, ಪಾದ್ರಿಯ ಮನೆಯ ಬಾಗಿಲ ಮುಂದೆ, ಪಾದರಕ್ಷೆಗಳ ಒಂದು ದೊಡ್ಡ ರಾಶಿಯೇ ಬಿದ್ದಿತ್ತು. ಬೆಳಗಾಗುವ ಹೊತ್ತಿಗೆ ಆ ಜಾಗ ಹಳ್ಳಿಗರಿಂದ ತುಂಬಿ ಹೋಗಿತ್ತು. ದಪ್ಪನೆಯ ಶಾಲುಗಳನ್ನು ಹೊದ್ದಿದ್ದ ಹಳ್ಳಿಗರು, ಕಡಲೇ ಬೀಜವನ್ನು ಕುರುಕುತ್ತಾ, ಬಿಸಿ ಚಹಾ ಹೀರುತ್ತಿದ್ದರು.

ಕ್ರಿಸ್‌ಮಸ್ ದಿನ ಆ ಊರಿನ ಕಡಿದಾದ ರಸ್ತೆಗಳಲ್ಲಿ ಹಳ್ಳಿಗರು ಹಾಡಿಕೊಂಡು ಹೋದರು. ವೀಣಳ ಮನೆಯವರ ಜೊತೆಯಲ್ಲಿ ರಾಣಿಯೂ ಆ ಹಳ್ಳಿಗರ ಜೊತೆ ನಡೆದುಕೊಂಡು ಹೋದಳು. ಚರ್ಚ್‌ನಲ್ಲಿ ಪ್ರಾರ್ಥನಾ ಸಭೆ ನಡೆಯಿತು. ಜೀವನದಲ್ಲಿ ಮೊದಲ ಬಾರಿ, ರಾಣಿ ನೆಲದ ಮೇಲೆ ಕುಳಿತು, ಪ್ರಾರ್ಥನೆಯಲ್ಲಿ ಭಾಗವಹಿಸಿದಳು. ತಮಗಿಂತ ಬಡತನದಲ್ಲಿರುವ ಜನರಿಗೆ ಹಂಚುವುದಕ್ಕಾಗಿ ಹಳ್ಳಿಗರು ಅನೇಕ ಉಡುಗೊರೆಗಳನ್ನು ತಂದಿದ್ದರು. ಚರ್ಚ್‌ನಿಂದ ಸ್ವಲ್ಪ ಮುಂದೆ ಹೋದರೆ ಅಲ್ಲಿ ಕ್ರಿಸ್‌ಮಸ್ ಮೇಳ ನಡೆಯುತ್ತಿತ್ತು. ಚರ್ಚ್‌ನ ಆವರಣದಲ್ಲಿ ಭಾರಿ ಸಂಭ್ರಮವಿತ್ತು. ಒಂದು ಕಡೆ ಮರದ ದೊಡ್ಡ ಗಿರಿಗಿಟ್ಟಳೆ. ಇನ್ನೊಂದು ಕಡೆ ದೊಡ್ಡ ಒಲೆಗಳ ಮೇಲೆ ಭಾರಿ ಕಡಾಯಿಗಳು. ಅವುಗಳಲ್ಲಿ, ಕೊತ-ಕೊತ ಕುದಿಯುತ್ತಿದ್ದ ರುಚಿಕರ ಪದಾರ್ಥಗಳು. ಮತ್ತೊಂದೆಡೆ ಪಾದ್ರಿ ಮತ್ತು ಅವರ ಪತ್ನಿ ಸುತ್ತ-ಮುತ್ತಲ ಮಕ್ಕಳಿಗೆ ಕ್ರಿಸ್‌ಮಸ್ ಉಡುಗೊರೆಗಳನ್ನು ಹಂಚುತ್ತಿದ್ದರು.

"ಹಳ್ಳಿಗಳಲ್ಲೇ ವಾಸಿ. ಕ್ರಿಸ್‌ಮಸ್ ಹಬ್ಬ ಇಲ್ಲಿಗಿಂತಲೂ ಹೆಚ್ಚು ಸಂಭ್ರಮವಾಗಿ ನಡೆಯುತ್ತದೆ. ಈ ಕ್ರಿಸ್‌ಮಸ್ ಹಬ್ಬದ ಬಗ್ಗೆ ಇನ್ನೂ ಹೆಚ್ಚು ವಿವರಗಳನ್ನು ಯಾರಾದರೂ ನನಗೆ ತಿಳಿಸಿದರೆ ಎಷ್ಟು ಚೆನ್ನಾಗಿರುತ್ತದೆ" ಎಂದು ರಾಣಿ ಮನಸ್ಸಿನಲ್ಲಿಯೇ ಅಂದುಕೊಂಡಳು. ಅವಳ ಕಣ್ಣುಗಳು ಮುಚ್ಚಿಕೊಂಡವು. ಅಷ್ಟರಲ್ಲಿ ಕಿಟಕಿಯಿಂದ ಕಟಕಟ ಶಬ್ದವಾಯಿತು.

ರಾಣಿಗೆ ಥಟ್ಟನೆ ಎಚ್ಚರವಾಯಿತು. ಅದೇನು ಶಬ್ದ? ಅಲುಗಾಡದೇ ಸುಮ್ಮನೆ ಮಲಗಿಕೊಂಡಳು. ಎದ್ದು ಹೋಗುವ ಧೈರ್ಯ ಬರಲಿಲ್ಲ. ದಿಗಿಲಿನಿಂದ ನಡುಗಿದಳು. ಕಿಟಕಿಯ ಹೊರಗೆ ಪಿಶಾಚಿಗಳ ದಂಡೇ ಬಂದಿರುವಂತೆ ಅವಳಿಗೆ ಭಾಸವಾಯಿತು.

ಮತ್ತೊಮ್ಮೆ ಕಿಟಕಿಯಿಂದ ಕಟಕಟ ಶಬ್ದ.

"ನೀಲೂ, ನೀಲೂ" ಎಂದು ರಾಣಿ ಮೆಲ್ಲನೆ ಉಸುರಿದಳು. ಆದರೆ ಅವನು ಜೋರಾಗಿ ಗೊರಕೆ ಹೊಡೆಯುತ್ತಿದ್ದ. ಅವನು ಏಳುವ ಸೂಚನೆ ಇರಲಿಲ್ಲ.

ಗುಂಡಗೆ ಕಾಣಿಸುತ್ತಿದ್ದ ಪುಟ್ಟ ಮನುಷ್ಯನೊಬ್ಬ, ಕಿಟಕಿಯ ಬಾಗಿಲು ತೆಗೆದುಕೊಂಡು ಮೆಲ್ಲಗೆ ಕೆಳಗಿಳಿದ. ಏನೋ ಗೊಣಗುಡುತ್ತಿದ್ದ. ಅವನ ಪಕ್ಕದಲ್ಲಿ ಸಾಮಾನುಗಳಿಂದ ತುಂಬಿದ್ದ ಒಂದು ಚೀಲವಿತ್ತು. ಆಟದ ರೈಲೊಂದು ಆ ಚೀಲದಲ್ಲಿ ಕಾಣಿಸುತ್ತಿತ್ತು.

"ಅದೇನು ಕಟ್ಟಡಗಳನ್ನು ಕಟ್ಟುವರೋ ನಾ ಕಾಣೆ. ನನ್ನ ಜಾರು ಬಂಡಿಯನ್ನು ಇಳಿಸುವುದಕ್ಕೂ ಒಳಗೆ ಇಳಿದು ಬರಲು ಹೊಗೆ ಗೂಡುಗಳಿಲ್ಲ. ಬರೀ ಅಂತಸ್ತಿನ ಮೇಲೆ ಅಂತಸ್ತಿನ ಮನೆಗಳು. ಟಿ.ವಿ. ಆಂಟೆನಾಗಳು ಬೇರೆ ಕಾಲಿಗೆ ತೊಡರುತ್ತವೆ" ಎಂದು ಆ ಪುಟ್ಟ ವ್ಯಕ್ತಿ ಹುಸಿ ಮುನಿಸಿನಿಂದ ಬೈದುಕೊಳ್ಳುತ್ತಿದ್ದ.

ಪುಟ್ಟ ವ್ಯಕ್ತಿ ರಾಣಿಯ ಕಡೆ ನಗುಮುಖದಿಂದ ನೋಡಿದ. ರಾಣಿಯ ಭಯ ದೂರವಾಯಿತು.

"ತಪ್ಪು ತಿಳಿಯಬೇಡ, ನೀನು ಕ್ರಿಸ್‌ಮಸ್ ತಾತನಿರಬಹುದೇ ?" ರಾಣಿ ಕೇಳಿದಳು.

"ಹಾಗಾದರೆ ನಾನು ಬೇರೆ ಲೋಕದಿಂದ ಬಂದ ರಾಕ್ಷಸ ಎಂದು ಕೊಂಡೆಯಾ ?" ಎಂದ ಆ ವ್ಯಕ್ತಿ.

"ಹೌದು" ಎಂದು ರಾಣಿ ಕಿಲಕಿಲ ನಕ್ಕಳು.

"ಈಗಲೇ ನಾನು ನೀಲೂವನ್ನು ಎಬ್ಬಿಸುತ್ತೇನೆ. ನೀನು ಬಂದಿದ್ದ ವಿಷಯವನ್ನು ಅನಂತರ ಅವನಿಗೆ ತಿಳಿಸಿದರೆ ಅವನು ನಂಬುವುದೇ ಇಲ್ಲ" ಎಂದಳು ರಾಣಿ.

"ನಾನೇ ಈ ಪರಿಸ್ಥಿತಿಯಲ್ಲಿದ್ದಿದ್ದರೆ ಅವನನ್ನು ಎಬ್ಬಿಸುತ್ತಲೇ ಇರಲಿಲ್ಲ" ಎಂದ ಆ ಪುಟ್ಟ ಮನುಷ್ಯ.

"ಏಕೆ ?" ರಾಣಿ ಆಶ್ಚರ್ಯದಿಂದ ಕೇಳಿದಳು.

"ಅವನು ನನ್ನನ್ನು ನಂಬುವುದಿಲ್ಲ. ಆದ್ದರಿಂದ ನಾನು ಅವನಿಗೆ ಕಾಣಿಸುವುದಿಲ್ಲ. ಸುಮ್ಮನೆ ಕಾಲ ವ್ಯರ್ಥ ಮಾಡುವುದು ಬೇಡ. ಕ್ರಿಸ್‌ಮಸ್ ಕುರಿತ ನಿನ್ನ ಪ್ರಶ್ನೆಗಳನ್ನೆಲ್ಲ ಉತ್ತರಿಸಲು ನಾನಿಲ್ಲಿಗೆ ಬಂದಿದ್ದೇನೆ. ಹೆಚ್ಚು ಸಮಯವಿಲ್ಲ. ಬೆಳಗಾದರೆ ಕ್ರಿಸ್‌ಮಸ್. ಅಷ್ಟರೊಳಗೆ ನಾನು ಇಡೀ ಪ್ರಪಂಚ ಸುತ್ತಬೇಕು." ಪುಟ್ಟ ಮನುಷ್ಯ, ದಪ್ಪನೆಯ ಗಿಡ್ಡ

ಕಾಲುಗಳನ್ನು ಕೆಳಗೆ ಇಳಿಬಿಟ್ಟು ಕಿಟಕಿಯ ಕಟ್ಟೆಯ ಮೇಲೆ ಕುಳಿತ. ಅವನು ಧರಿಸಿದ್ದ ಕರಿ ಬೂಟುಗಳು ಮಿರಿಮಿರಿ ಮಿಂಚುತ್ತಿದ್ದವು.

"ನೀನು ನಿಜವಾಗಿ ಯಾರು ಎಂಬುದನ್ನು ಹೇಳು" ಎಂದಳು ರಾಣಿ.

ಸಾಂಟಾ ತನ್ನ ಬಿಳಿ ಗಡ್ಡವನ್ನು ನೀವಿಕೊಳ್ಳುತ್ತಾ ಹೇಳಿದ: "ನಿಜವಾದ ಸಾಂಟಾ ಹಳೇ ಟರ್ಕಿಯ ಬಂದರು ಪಟ್ಟಣವಾದ ಮೈರಾ ಎಂಬಲ್ಲಿ ವಾಸವಾಗಿದ್ದ. ಆಗ ಅದು ಏಷ್ಯಾ ಮೈನರ್‌ನಲ್ಲಿತ್ತು. ಆ ಸಾಂಟಾನ ಹೆಸರು ನಿಕೊಲಾಸ್"

"ಸಾಂಟಾ, ಯೂರೋಪಿನ ಕಾಲ್ಪನಿಕ ಕಥೆಗಳಲ್ಲಿ ಬರುವ ಒಂದು ಪಾತ್ರ ಎಂದು ನಾನು ಭಾವಿಸಿದ್ದೆ" ಎಂದಳು ರಾಣಿ.

"ನಿಕೊಲಾಸ್‌ಗೆ ಕ್ರೈಸ್ತನಲ್ಲಿ ನಂಬಿಕೆ ಇರಲಿಲ್ಲ. ಅವನು ಡಯಾನಾ ದೇವತೆಯನ್ನು ಆರಾಧಿಸುತ್ತಿರಲಿಲ್ಲ. ಆದ್ದರಿಂದ ಚಕ್ರವರ್ತಿ ಡಯೋಕ್ಲೆಷಿಯನ್ ನಿಕೋಲಾಸ್‌ನನ್ನು ಜೈಲಿಗೆ ಹಾಕಿದ. ಅನಂತರ ಕಾನ್‌ಸ್ಟೆಂಟೈನ್ ಚಕ್ರವರ್ತಿ ಸಿಂಹಾನಸಕ್ಕೆ ಬಂದ. ಆ ಚಕ್ರವರ್ತಿ ಕ್ರಿಶ್ಚಿಯನ್ ಧರ್ಮವನ್ನು ತನ್ನ ಸಾಮ್ರಾಜ್ಯದ ಧರ್ಮವನ್ನಾಗಿ ಮಾಡಿದ. ನಿಕೊಲಾಸ್ ಜೈಲಿನಿಂದ ಬಿಡುಗಡೆಯಾದ. ಅನಂತರ ಅವನು ಬಿಷಪ್ ಆದ. ಅವನು ಮೈರಾದಲ್ಲಿ ವೇಷ ಬದಲಾಯಿಸಿಕೊಂಡು ಸುತ್ತಾಡಿ ಜನರ ಕಷ್ಟಕಾರ್ಪಣ್ಯಗಳನ್ನು ತಿಳಿದುಕೊಳ್ಳುತ್ತಿದ್ದ. ತೊಂದರೆಯಲ್ಲಿದ್ದವರಿಗೆ ಸಹಾಯ ಮಾಡುತ್ತಿದ್ದ. ಒಮ್ಮೆ ಅವನು ಬಡ ವಿಧವೆಯೊಬ್ಬಳನ್ನು ಕಂಡ. ಹೋಟೆಲ್‌ನ ಮಾಲೀಕನೊಬ್ಬ ಅವಳ ಮೂರು ಮಕ್ಕಳನ್ನು ಕೊಂದು, ಉಪ್ಪಿನ ಕಾಯಿ ಜಾಡಿಗಳಲ್ಲಿ ಶವಗಳನ್ನು ಬಚ್ಚಿಟ್ಟಿದ್ದ. ದಯಾಮಯಿಯಾಗಿದ್ದ ನಿಕೊಲಾಸ್ ಆ ಮಕ್ಕಳ ಜೀವ ಮರಳಿ ಬರಲೆಂದು ಪ್ರಾರ್ಥಿಸಿದ. ಆ ಮೂವರು ಗಂಡು ಮಕ್ಕಳು ಮತ್ತೆ ಜೀವ ಪಡೆದರು. ಅಂದಿನಿಂದ ನಿಕೊಲಾಸ್ ಮಕ್ಕಳಿಗೆ ಅಚ್ಚುಮೆಚ್ಚಿನವನಾದ. ಅವನು ಗತಿಸಿದ ನಂತರ ಚರ್ಚ್ ಅವನೆನ್ನು ಸಂತನನ್ನಾಗಿ ಮಾಡಿತು. ಅನಂತರ ಅನೇಕ ದೇಶಗಳಲ್ಲಿ ಅವನಿಗೆ ಸೆಯಂಟ್ ನಿಕೊಲಾಸ್ ಎಂಬ ಹೆಸರು ಬಂದಿತು. ಕಾಲಕ್ರಮೇಣ ಅವನಿಗೆ ಬೇರೆ ಬೇರೆ ಹೆಸರುಗಳು ಬಂದವು. ಅವನ ಕಥೆಯಲ್ಲೂ ಬದಲಾವಣೆಗಳಾಗುತ್ತಾ ಬಂದವು. ಸೆಯಂಟ್ ನಿಕೊಲಾಸ್ ಮತ್ತು ಸಾಂಟಾಕ್ಲಾಸ್ ಈ ಎರಡು ಹೆಸರುಗಳಲ್ಲೂ ಹೋಲಿಕೆ ಕಂಡುಬರುತ್ತದೆ, ಅಲ್ಲವೇ ?"

"ಹೌದು ಹೌದು, ಎರಡು ಹೆಸರುಗಳೂ ಒಂದೇ ರೀತಿ ಕೇಳಿಸುತ್ತದೆ" ಎಂದಳು ರಾಣಿ.

"ಹಾಗಾದರೆ ನೀನು ಯಾರು ? ನೀನೊಬ್ಬ ಸೆಯಂಟ್ ಎಂದರೆ ನಾನಂತೂ

ನಂಬುವುದಿಲ್ಲ" ರಾಣಿ ಹೇಳಿದಳು. ಕ್ರಿಸ್‌ಮಸ್ ತಾತಾ ತೊಡೆ ತಟ್ಟಿಕೊಂಡು "ಹೌದು ನಾನೊಬ್ಬ ಸೆಯಂಟ್" ಎಂದು ಹೆಮ್ಮೆಯ ಧ್ವನಿಯಲ್ಲಿ ಹೇಳಿದ.

"ನೀನು ಮನಸ್ಸಿನಲ್ಲಿ ಊಹಿಸಿಕೊಂಡಿರುವ ವ್ಯಕ್ತಿಯೇ ನಾನು. ನನ್ನನ್ನು ಜೀವಂತವಾಗಿ ಕಾಣಲು ನೀನು ಬಯಸಿದ್ದರಿಂದಲೇ ನಾನು ಬಂದಿದ್ದೇನೆ. ಹನ್ನೆರಡು ಹಿಮಸಾರಂಗಗಳು ಎಳೆಯುವ ಜಾರು ಬಂಡೆಯಲ್ಲಿ ನಾನು ಕ್ರಿಸ್‌ಮಸ್ ಹಬ್ಬದ ಪ್ರೀತ್ಯಾದರಗಳ ಸಂದೇಶ ಹೊತ್ತು ಹೊರಟಿದ್ದೇನೆ. ಈ ಸಂದೇಶವನ್ನು ಕುಟುಂಬ-ಕುಟುಂಬಕ್ಕೂ ಮುಟ್ಟಿಸಲು ಸಹಾಯ ಮಾಡುವುದೇ ನನ್ನ ಧ್ಯೇಯ. ನಿಜವಾಗಿ ನನ್ನ ದಿನ ಡಿಸೆಂಬರ್ 6. ಆದರೆ ಕ್ರಿಸ್‌ಮಸ್ ಹಿಂದಿನ ರಾತ್ರಿ ಸೇವೆ ಮಾಡುವುದೇ ನನಗಿಷ್ಟ. ಪ್ರೀತಿಯ ಮಕ್ಕಳಿಗೆ ನಾನು ಉಡುಗೊರೆಗಳನ್ನು ಹಂಚಿಕೊಂಡು ಹೋಗುತ್ತೇನೆ. ಅಂದ ಹಾಗೆ, ಹೊಸ ವರ್ಷದ ದಿನ ಪ್ರಾಚೀನ ರೋಮನರ ಪದ್ಧತಿಯಿಂದ ಬಂದಿದ್ದೆಂಬುದು ನಿನಗೆ ಗೊತ್ತಿದೆಯೇ ? ವಿಶ್ವದ ಅನೇಕ ದೇಶಗಳಲ್ಲಿ ಹೊಸ ವರ್ಷ, ವಸಂತ ಕಾಲದಿಂದ ಆರಂಭವಾಗುತ್ತಿತ್ತು. ಆದರೆ ಜೂಲಿಯಸ್ ಸೀಸರ್ ಹೊಸ ವರ್ಷದ ದಿನವನ್ನು ಜನವರಿ ಒಂದಕ್ಕೆ ಬದಲಾಯಿಸಿದ. ಆ ತಿಂಗಳಿಗೆ ಜೇನಸ್ ಎಂಬ ದೇವತೆಯ ಹೆಸರಿಟ್ಟಿದ್ದರಿಂದ 'ಜನವರಿ' ಎಂದಾಯಿತು. ಜನವರಿ ಒಂದನ್ನು ಜೇನಸ್ ಹಬ್ಬವೆಂದು ಸಾರಲಾಯಿತು."

"ನನಗೆ ಇದು ಗೊತ್ತೇ ಇರಲಿಲ್ಲ. ಹಾಗಾದರೆ ಕ್ರಿಸ್‌ಮಸ್ ವೃಕ್ಷ ಎಂದರೇನು ?" ರಾಣಿ ಕೇಳಿದಳು.

"ವಿಶ್ವದ ಪುರಾತನ ಧರ್ಮಗಳಲ್ಲಿ ಮರಕ್ಕೆ ತುಂಬಾ ಮುಖ್ಯ ಸ್ಥಾನವಿತ್ತು. ಕ್ರಿಸ್‌ಮಸ್ ವೃಕ್ಷಕ್ಕೂ ಕೆಲವು ಕಥೆಗಳಿವೆ. ಅತ್ಯಂತ ಹಿಂದೆ ಮಕ್ಕಳನ್ನು ದೇವರಿಗೆ ಬಲಿ ಕೊಡುತ್ತಿದ್ದರು. ಇಂಗ್ಲೆಂಡಿನ ಕ್ರಿಶ್ಚಿಯನ್ ವಿನ್‌ಫ್ರೆಡ್ ಎಂಬಾತ ಉತ್ತರ ಜರ್ಮನಿಯ ಅರಣ್ಯದಲ್ಲಿ ಓಡಾಡುತ್ತಿದ್ದಾಗ ಒಂದು ಓಕ್ ಮರವನ್ನು ಕಂಡ. ಆ ಮರಕ್ಕೆ ಅಸಲ್ಫ್ ಎಂಬ ಪುಟ್ಟ ರಾಜಕುಮಾರನನ್ನು ಕಟ್ಟಲಾಗಿತ್ತು. ಗುಡುಗು ಅಧಿದೇವತೆಯ ಪ್ರೀತ್ಯರ್ಥ ಅವನನ್ನು ಕೊಲ್ಲಲು ಸಿದ್ಧತೆಯಾಗಿತ್ತು. ವಿನ್‌ಫ್ರೆಡ್ ಓಡಿ ಬಂದು ಓಕ್ ಮರವನ್ನು ತರಿದು ಮಗುವನ್ನು ಕಾಪಾಡಿದ. ಥೋರ್ ದೇವತೆಯ ಆರಾಧಕರು ವಿನ್‌ಫ್ರೆಡ್‌ನನ್ನು ಸಾಯಿಸಬೇಕೆಂದಿದ್ದರು. ಅವರ ಕಣ್ಣು ಮುಂದೆಯೇ ಓಕ್ ಮರದ ಜಾಗದಲ್ಲಿ ಫರ್ ಮರ ಹುಟ್ಟಿಕೊಂಡಿತು. 'ಇದು ಸಂಜೀವಿನಿ ಮರ. ಈ ಮರ ಶಿಶು ಕ್ರಿಸ್ತನ ಪ್ರತೀಕ' ಎಂದು ವಿನ್‌ಫ್ರೆಡ್ ಹೇಳಿದಾಗ ಅವರು ಆಶ್ಚರ್ಯಚಕಿತರಾದರು. ಇದಾದ ಎಷ್ಟೋ ಕಾಲದ ಬಳಿಕ

ಜರ್ಮನಿಯ ಮಾರ್ಟಿನ್ ಲೂಥರ್ ಕ್ರಿಸ್‌ಮಸ್ ವೃಕ್ಷದ ಮೇಲೆ ಮೊದಲು ಮೊಂಬತ್ತಿಗಳನ್ನು ಹಚ್ಚಿದನೆಂದು ಪ್ರತೀತಿ."

"ಒಟ್ಟಿನಲ್ಲಿ ಕ್ರಿಸ್‌ಮಸ್ ಮರ ಸ್ವಾರ್ಥವನ್ನು ಬಿಟ್ಟು ಇತರರಿಗೆ ಉಪಕಾರ ಮಾಡುವ ಬುದ್ಧಿಯನ್ನು ಬೆಳೆಸಿಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ಈ ಮರವನ್ನು ಕೊಡುಗೈ ಸಂಕೇತ ಎನ್ನಬಹುದು" ಎಂದ ಕ್ರಿಸ್‌ಮಸ್ ತಾತ.

ನೀಲೂವಿನ ಗಡಿಯಾರ "ಹನ್ನೆರಡು ಗಂಟೆ! ಹನ್ನೆರಡು ಗಂಟೆ!" ಎಂದು ಹಾಡುತ್ತಾ ಕುಣಿಯತೊಡಗಿತು. ಮಾತನ್ನು ಕೇಳುವುದರಲ್ಲಿ ಮಗ್ನಳಾಗಿದ್ದ ರಾಣಿಗೆ ಅತ್ತ ಗಮನವೇ ಇರಲಿಲ್ಲ.

"ಅಬ್ಬಾ! ಹೊತ್ತಾಯಿತು!" ಎಂದು ಕೂಗಿದ ಸಾಂಟಾ. ನೀಲೂವಿನ ಮೇಜಿನ ಮೇಲೆ ಹೊಳೆಯುವ ಪಾರ್ಸೆಲ್ ಅನ್ನು ಇಟ್ಟ. ಹೆಗಲಿಗೆ ತನ್ನ ಚೀಲ ಏರಿಸಿಕೊಂಡ. ರಾಣಿಯತ್ತ ಕಣ್‌ಸನ್ನೆ ಮಾಡಿ "ನನಗೆ ತುಂಬಾ ಕೆಲಸವಿದೆ. ನಾನು ಹೊರಟೆ. ನಾನು ನಿಜ ಇಲ್ಲದಿರಬಹುದು. ಆದರೂ ನನ್ನನ್ನು ಮರೆಯಬೇಡ. ಇನ್ನೊಬ್ಬರನ್ನು ಸಂತೋಷಪಡಿಸುವುದರಲ್ಲೇ ನನಗೆ ಆನಂದ. ಇಂತಹ ಪುಟ್ಟ ಲೋಕವನ್ನು ಕಲ್ಪಿಸಿಕೊಂಡು, ಎಷ್ಟೋ ಆನಂದಪಡಬಹುದು" ಎಂದ.

ಸಾಂಟಾ ಕ್ಷಣದಲ್ಲಿ ಕಣ್ಮರೆಯಾದ. ಅವನ ಪುಟ್ಟ ಜಾರುಬಂಡಿ ದೂರ ದೂರ ಸರಿದು ತಾರೆಗಳ ಲೋಕದಲ್ಲಿ ಅದೃಶ್ಯವಾಯಿತು.

"ನನ್ನನ್ನು ಹೊರತೆಗೆ, ನನ್ನನ್ನು ಹೊರತೆಗೆ" ಎಂಬ ಸುಮಧುರ ಧ್ವನಿ ಹಠಾತ್ತನೆ ಕೇಳಿ ಬಂತು. ನೀಲೂಗಾಗಿ ಕ್ರಿಸ್‌ಮಸ್ ತಾತ ಕೊಟ್ಟಿದ್ದ ಉಡುಗೊರೆಯ ಡಬ್ಬ ಮೇಜಿನ ಮೇಲೆ ಕುಣಿಯುತ್ತಿತ್ತು. ಆ ವೇಳೆಗೆ, ಈ ವಿಚಿತ್ರ ಘಟನೆಗಳು ರಾಣಿಗೆ ಸಾಮಾನ್ಯವಾಗಿ ಹೋಗಿತ್ತು.

ರಾಣಿ ಡಬ್ಬವನ್ನು ಬಿಚ್ಚಿದಳು. ಅದರಿಂದ ತನ್ನ ಮೇಲೆ ಏನಾದರೂ ಎಗರಬಹುದೆಂದು ಅವಳು ಹೆದರಿದ್ದಳು. ಒಂದು ಪುಟ್ಟ ಮಗು, ಆ ಡಬ್ಬದಿಂದ ಹಾರಿ ಮೇಜಿನ ಮೇಲೆ ನಿಂತುಕೊಂಡಿತು. ಅದರ ಕೂದಲು ನುಣುಪಾಗಿ ಹೊಳೆಯುತ್ತಿತ್ತು. ಕಣ್ಣುಗಳಲ್ಲಿ ಕಾಂತಿ ಇತ್ತು. ಎರಡು ನಯವಾದ ರೆಕ್ಕೆಗಳಿದ್ದವು. ಮುಖದಲ್ಲಿ ನಗೆ ಮಿಂಚುತ್ತಿತ್ತು.

"ನೀನು ಯಾರೋ ತಿಳಿಯಲಿಲ್ಲ" ಎಂದಳು ರಾಣಿ. "ನಾನೊಬ್ಬಳು ದೇವತೆ" ಎಂದಿತು ಆ ಪುಟ್ಟ ಮಗು.

"ನೀಲೂ ಏಳು. ನಮ್ಮ ಮನೆಗೆ ದೇವತೆ ಬಂದಿದ್ದಾಳೆ. ಬೇಗ ಏಳು" ಎಂದು ರಾಣಿ ಕೂಗಿದಳು.

"ದೇವತೆಯಂತೆ ದೇವತೆ" ಎಂದು ನೀಲು ತಾತ್ಸಾರ ತೋರಿ ಮಲಗಿದ.

"ದೇವತೆಯ ನಗೆಯಿಂದ ಇಡೀ ಕೊಠಡಿ ಬೆಳಗಿತು. ನೀಲೂ ಹಾಸಿಗೆಯಿಂದ ಚಂಗನೆ ನೆಗೆದು "ಅಂತರಿಕ್ಷದಿಂದ ಬಂದ ಮಾನವ" ಎಂದು ಚೀರಿದ. "ಆವೇಶವೇಕೆ? ಇಲ್ಲಿ ನೋಡು" ಎಂದಿತು ಆ ಪುಟ್ಟ ದೇವತೆ. ಅವನು ಆ ಪುಟ್ಟ ಮಕ್ಕಳ ಹಣೆಯನ್ನು ಮುಟ್ಟಿದ. ಅವು ಕುಗ್ಗಿ ಮತ್ತಷ್ಟು ಪುಟ್ಟದಾದವು. ಆಗ ಆ ಪುಟ್ಟ ದೇವತೆಯ ಗಾತ್ರವೇ ದೊಡ್ಡದಾಗಿ ಕಾಣಿಸತೊಡಗಿತು.

ಕೆಲವು ಸೆಕೆಂಡುಗಳಲ್ಲಿ ಈ ಅಚ್ಚರಿಯ ಮಕ್ಕಳು ಆಕಾಶದೆತ್ತರಕ್ಕೆ ಹೋಗಿ ಮಿನುಗುತಾರೆಗಳ ಮಧ್ಯೆ ತೇಲುತ್ತಿದ್ದವು. ಈಗ ಹಿಮದಿಂದ ಕವಿದಿದ್ದ ಕಪ್ಪು ಬೆಟ್ಟಗಳ ಎದುರು, ಬಿಳಿಯ ಮನೆಗಳ ಸಮೂಹದ ಮೇಲೆ ಅವು ಹಾರಾಡುತ್ತಿದ್ದವು. ಕಡೆಗೆ ಅವು ಆ ಮನೆಗಳ ಬಳಿ ಗಟ್ಟಿ ನೆಲದ ಮೇಲೆ ನೇರವಾಗಿ ಬಂದಿಳಿದವು.

ಹತ್ತಿರದಲ್ಲೇ ಒಂದು ಕುರಿ ಮುಂದೆ ಇತ್ತು. ಕುರುಬರು ಬೆಂಕಿಯ ಮುಂದೆ ಮುದುಡಿ ಕೂತು ಮೈಕಾಯಿಸಿಕೊಳ್ಳುತ್ತಿದ್ದರು. ಇನ್ನೊಬ್ಬ ಕುರುಬ ಕುರಿಗಳು ಕಾಡು ಮೃಗಗಳ ಬಾಯಿಗೆ ತುತ್ತಾಗದಂತೆ ನೋಡಿಕೊಳ್ಳುತ್ತಿದ್ದ.

ಇದ್ದಕ್ಕಿದ್ದಂತೆ ಆಕಾಶದಲ್ಲಿ ಲಕ್ಷಾಂತರ ದೀಪಗಳು ಬೆಳಗತೊಡಗಿದುವು. ದೇವತೆ ಹೆದರಿದ ಕುರುಬರ ಮುಂದೆ ನಿಂತನು. "ಭಯ ಪಡಬೇಡಿ, ನಾನು ನಿಮಗೆ ಒಂದು ಅದ್ಭುತ ಸುದ್ಧಿ ತಂದಿದ್ದೇನೆ. ಶಾಂತಿಧೂತನೊಬ್ಬ ಜುಡಿಯಾದ ಬೆತ್ಲೆಹೆಂನ ಕುದುರೆ ಲಾಯವೊಂದರಲ್ಲಿ ಅವತರಿಸಿದ್ದಾನೆ. ಅವನ ಹೆಸರು ಜೀಸಸ್" ಎಂದನು.

ಅವನು ಮಾತನಾಡುತ್ತಿದ್ದಂತೆ ಆಕಾಶದಲ್ಲಿ ಮಿನುಗುತ್ತಿದ್ದ ಪ್ರತಿಯೊಂದು ತಾರೆ ದೇವತೆಯಾಯಿತು. ಆ ದೇವತೆಗಳು ಭೂಮಿಯ ಮೇಲೆ ಶಾಂತಿ ಮತ್ತು ಪ್ರೀತಿಗಳ ಸಂದೇಶವನ್ನು ಸಾರುವ ಹಾಡುಗಳನ್ನು ಹಾಡುತ್ತಿದ್ದುವು.

ಕುರುಬರಿಗೆ ಆಶ್ಚರ್ಯವಾಯಿತು. ಅವರು ಕುರಿಗಳನ್ನೆತ್ತಿಕೊಂಡು ಬೆತ್ಲೆಹೆಂನತ್ತ ಓಡಿದರು.

"ನಾವೀಗ ಎಲ್ಲಿದ್ದೇವೆ?" ಎಂದು ಕೇಳಿದಳು ರಾಣಿ.

"ಪಶ್ಚಿಮ ಏಷ್ಯಾದಲ್ಲಿ" ಎಂದನು ದೇವತೆ.

"ಹಾಗಾದರೆ ನಮ್ಮ ಹಾಗೆ ಏಸುಕ್ರಿಸ್ತನೂ ಏಷ್ಯಾಗೆ ಸೇರಿದವನೇ ?" ಎಂದು ಕೇಳಿದ ನೀಲೂ.

"ಹೌದು" ಎಂದನು ದೇವತೆ.

"ಮೇರಿ ಮತ್ತು ಜೋಸೆಫ್ ಯಾರು ?" ಎಂದು ಕೇಳಿದ ನೀಲು.

"ಮೇರಿ ಜೀಸಸ್‌ನ ತಾಯಿ, ಜೋಸೆಫ್ ಆಕೆಯ ಪತಿ" ಎಂದನು ದೇವತೆ.

"ರೋಮನ್ ಚಕ್ರವರ್ತಿ ಸೀಸರ್ ಅಗಸ್ಟಸ್ ತನ್ನ ಸಾಮ್ರಾಜ್ಯದ ಜನಸಂಖ್ಯೆಯನ್ನು ತಿಳಿದುಕೊಳ್ಳಬಯಸಿದ. ಜನಗಣನೆ ನಡೆಯುವ ಹೊತ್ತಿಗೆ ಎಲ್ಲರೂ ಅವರವರ ಮನೆಗೆ ಕೂಡಲೇ ವಾಪಸಾಗಬೇಕೆಂದು ಚಕ್ರವರ್ತಿ ಆಜ್ಞೆ ಹೊರಡಿಸಿದ. ಇಂದು ಬೆತ್ಲೆಹೆಂಗೆ ಹಿಂತಿರುಗುತ್ತಿರುವ ಜನರ ಗುಂಪಿನಲ್ಲಿ ಜೋಸೆಪ್ ಮತ್ತು ಮೇರಿ ಕೂಡಾ ಇದ್ದರು."

"ರೈಲು ಅಥವಾ ಬಸ್ಸು ಇಲ್ಲದ ಕಾಲದಲ್ಲಿ ಅವರು ಹೋಗುವುದು ಬಹಳ ಕಷ್ಟವಾಗಿರಬೇಕು" ಎಂದು ರಾಣಿ ಕೇಳಿದಳು.

"ಹೌದು, ಅದರಲ್ಲೂ ಮೇರಿಗೆ ತುಂಬಾ ಕಷ್ಟವಾಗಿತ್ತು. ಅವರು ಮೈಲಿಗಟ್ಟಲೆ ನಡೆಯಬೇಕು ಅಥವಾ ಕತ್ತೆಯ ಮೇಲೆ ಹೋಗಬೇಕು. ಮೇರಿಗೆ ಮಗು ಆಗುವುದರಲ್ಲಿತ್ತು. ಅವಳಿಗೆ ತಂಗಲು ಜಾಗ ಸಹ ಇರಲಿಲ್ಲ."

"ಹಾಗಾದರೆ ಅವರೆಲ್ಲಿದ್ದರು ?" ರಾಣಿ ಕೇಳಿದಳು.

"ಕಡೆಗೆ ಮನೆಯ ಮಾಲೀಕನೊಬ್ಬ, ಅವರನ್ನು ಹಿಂದಕ್ಕಟ್ಟಲು ಮನಸ್ಸು ಬಾರದೇ, ಕುದುರೆ ಲಾಯದಲ್ಲಿ ಜಾಗ ಕೊಟ್ಟನು."

"ಅಬ್ಬಾ! ಕುದುರೆ ಲಾಯದಲ್ಲಿ ಮಗು ಹುಟ್ಟಬೇಕಾದರೆ ಎಂತಹ ದುಸ್ಥಿತಿ!" ಎಂದಳು ರಾಣಿ.

ಅವರು ಇಡೀ ರಾತ್ರಿ ಓಡಿ ಬೆಳಿಗ್ಗೆ ಬೆತ್ಲೆಹೆಂಗೆ ಬಂದರು.

"ಓಹೋ! ಒಂಟೆಗಳು ಬರುತ್ತಿವೆ ನೋಡು" ಎಂದು ನೀಲು ಕೂಗಿಕೊಂಡ.

ಮೂರು ದೊಡ್ಡ ಗಾತ್ರದ ಕಪ್ಪು ಆಕೃತಿಗಳು ಬಿಳಿಯ ಮನೆಗಳ ಹತ್ತಿರ ಬರುತ್ತಿದ್ದವು. ಒಂಟೆಗಳ ಮೇಲೆ ಕುಳಿತಿದ್ದವರಲ್ಲಿ ಒಬ್ಬ ಪದೇ ಪದೇ ಉಜ್ವಲವಾಗಿ ಬೆಳಗುತ್ತಿದ್ದ ಒಂದು ತಾರೆಯತ್ತ ಕೈತೋರುತ್ತಿದ್ದ. ಆ ತಾರೆ ಮುರುಕಲು ಕುದುರೆ ಲಾಯವಿದ್ದ ಮನೆಯತ್ತ ದಾರಿ ತೋರಿಸುತ್ತಿತ್ತು.

ಮಕ್ಕಳು ಎಲ್ಲವನ್ನೂ ನೋಡುವ ತವಕದಿಂದ ಓಡಿ ಹೋಗುತ್ತಿದ್ದರು.

"ಇಲ್ಲಿ ನೋಡಿ, ಇದೇ ಆ ಶಾಂತಿ ಪುರುಷ ಹುಟ್ಟಿದ ಸ್ಥಾನ. ಇವಳೇ ಅವನ ತಾಯಿ. ಇಷ್ಟೊಂದು ದೊಡ್ಡ ಮನೆಗಳ ಜನರ ಮನದಲ್ಲಿ ಅವನಿಗೆ ಜಾಗವಿರಲಿಲ್ಲ. ಆದರೆ ಈ ಬಡ ಎತ್ತು ಮತ್ತು ಕತ್ತೆಯೇ ಏಸುವಿಗೆ ಆಸರೆ ನೀಡಿದವು. ಅವೇ ತಮ್ಮ ಒಣಹುಲ್ಲಿನಲ್ಲಿ ಅವನಿಗೆ ಮಲಗಲು ಜಾಗ ಮಾಡಿಕೊಟ್ಟವು" ಎಂದಿತು ದೇವತೆ.

ಕುರುಬರು ಓಡಿ ಬಂದರು. ಅವರ ಕಣ್ಣುಗಳಲ್ಲಿ ಆಶಾಭಾವನೆ ತುಂಬಿಕೊಂಡಿತ್ತು.



ಒಂಟೆಯ ಮೇಲೆ ಬಂದಿದ್ದ ಮೂವರು ವ್ಯಕ್ತಿಗಳು ಒಂಟೆಯಿಂದ ಇಳಿದರು. ತಾವು ಧರಿಸಿದ್ದ ಉಡುಪುಗಳನ್ನು ಒಮ್ಮೆ ಕೊಡವಿಕೊಂಡರು. ಕೈತುಂಬಾ ಆಭರಣಗಳನ್ನು ಹಿಡಿದು ಆ ಮನೆಯೊಳಗೆ ಹೋದರು.

"ಓ ದೊರೆಯೇ ಆ ನಿನ್ನ ಬೆಳಗು ತಾರೆಯೇ ದೂರದ ರಾಜ್ಯದಲ್ಲಿರುವ ನಮ್ಮನ್ನು ನಿನ್ನಲ್ಲಿಗೆ ಕರೆ ತಂದಿತು. ನಿನಗಾಗಿ ಕಾಣಿಕೆಗಳನ್ನು ತಂದಿದ್ದೇವೆ. ಇದು ಚಿನ್ನದಂತಹ ದೊರೆಗೆ ತಕ್ಕ ಕಾಣಿಕೆ. ನಾವು ನಿನ್ನನ್ನು ಧೂಪ-ದೀಪಗಳಿಂದ ಪೂಜಿಸುತ್ತೇವೆ. ದೇವರೆಂದು ಗೌರವಿಸುತ್ತೇವೆ. ನೀನು ಈ ಭೂಮಿಗೆ ಏಕೆ ಬಂದೆ ಎನ್ನುವುದನ್ನು ಅರಿಯದ ಜನರು ನಿನ್ನನ್ನು ಕೊಲೆಗೈದಾಗ, ಈ ಧೂಪ-ದೀಪಗಳ ಮೂಲಕ ನಿನ್ನನ್ನು ಗೌರವಿಸುತ್ತೇವೆ. ದೊರೆಯೇ ಈ ಕಾಣಿಕೆಗಳನ್ನು ಸ್ವೀಕರಿಸು" ಎಂದರು.

"ಇವೆಲ್ಲ ಅವರಿಗೆ ಹೇಗೆ ತಿಳಿಯಿತು ?" ನೀಲೂ ಪಿಸುಗುಟ್ಟಿದ.

"ಅವರು ಜ್ಞಾನಿಗಳು. ನಕ್ಷತ್ರ ವಿಜ್ಞಾನವನ್ನು ಚೆನ್ನಾಗಿ ಬಲ್ಲವರು. ಆದರೂ ಒಂದು ಅದ್ಭುತ ಸಂಗತಿ ಇನ್ನೂ ಅವರಿಗೆ ತಿಳಿಯದು" ಎಂದನು ದೇವತೆ.

"ಹಾಗಾದರೆ, ಅದ್ಭುತ ಘಟನೆಗಳು ಇನ್ನೂ ಮುಗಿದಿಲ್ಲ" ಎಂದಳು ರಾಣಿ.

"ಜೀಸಸ್ ದೊಡ್ಡವನಾದ ಮೇಲೆ ಅವನನ್ನು ಗುಡ್‌ಫ್ರೈಡೆಯಂದು ಕೊಲ್ಲಲಾಗುವುದು. ಮೂರು ದಿನಗಳ ಬಳಿಕ ಈಸ್ಟರ್ ದಿನ, ಅವನು ಸಮಾಧಿಯಿಂದ ಜೀವಂತ ಎದ್ದು ಬರುತ್ತಾನೆ" ಎಂದಿತು ದೇವತೆ.

ರಾಣಿ ಮತ್ತು ನೀಲೂ ಮಗುವನ್ನು ನೋಡಿದರು. ಅವರಿಬ್ಬರ ಮುಖ ನೋಡಿ ಮಗು ಮಂದಹಾಸ ಬೀರಿತು.

"ಏಸು ಎಲ್ಲರ ಜೀವನದಲ್ಲಿ ಸುಖ-ಸಂತೋಷ ತರಲಿ" ಎಂದು ದೇವತೆಗಳು ಹಾಡಿದರು.

* * * *

"ರಾತ್ರಿ ಅಷ್ಟೊಂದು ಛಳಿಯಿತ್ತು. ಕಿಟಕಿಯಬಾಗಿಲು ಹಾಕದೇ ಹಾಗೆಯೇ ಮಲಗಿದ್ದಿರಾ ?" ಎಂದು ಅವರ ಅಮ್ಮ ಕೇಳಿದಳು.


ನೀಲೂ ಮತ್ತು ರಾಣಿ ಕಣ್ಣುಜ್ಜಿಕೊಂಡರು. ದೇವತೆಗಳ ಹಾಡಿನ ಗುಂಗು ಅವರ ಕಿವಿಯಿಂದ ದೂರವಾಗಿರಲಿಲ್ಲ. ನೀಲೂವಿನ ಮೇಜಿನ ಮೇಲೆ ದೇವತೆ ಕೊಟ್ಟಿದ್ದ ಉಡುಗೊರೆಯ ಡಬ್ಬ ತೆರೆದಿತ್ತು.

"ಏನಿದು ? ಉಡುಗೊರೆಯ ಡಬ್ಬ ತೆರೆದಿದೆ. ನಿನ್ನ ಷೂಗಳು ಒದ್ದೆ-ಮುದ್ದೆಯಾಗಿವೆ" ಎಂದು ಅವರ ಅಮ್ಮ ಕೇಳಿದರು.

ಇಬ್ಬರೂ ಮಕ್ಕಳು ಒಬ್ಬರ ಮುಖ ಒಬ್ಬರು ನೋಡಿಕೊಂಡು ಒಳಗೇ ನಕ್ಕರು.

ಅವರಿಬ್ಬರ ಮಟ್ಟಿಗೆ ಅದೊಂದು ವಿಶಿಷ್ಟ ಕ್ರಿಸ್‌ಮಸ್ ಆಗಿತ್ತು.

ಜಮಿಲ ವರ್ಗೀಸ್





ಲೋಡಿ

ಪಂಜಾಬ್‌ನ ಒಂದು ಹಳ್ಳಿ. ಹಳ್ಳಿಯ ಕೆಲವು ಹೆಣ್ಣು ಮಕ್ಕಳು ತಮ್ಮ ಗೆಳತಿಯ ಮನೆಯಲ್ಲಿ ಸೇರಿರುತ್ತಾರೆ. ಅವರು ಮಾತಿನಲ್ಲಿ ಮಗ್ನರಾಗಿದ್ದಾಗ, ಅವರಲ್ಲೊಬ್ಬಳು ತಾಳ್ಮೆಗೆಟ್ಟು, "ಬನ್ನಿ ಹೊರಡೋಣ ಕತ್ತಲಾಗುತ್ತಾ ಬಂತು" ಎನ್ನುತ್ತಾಳೆ. "ಅದೇಕೆ ಅಷ್ಟು ಅವಸರ ? ಲೋಡಿ ಹಬ್ಬಕ್ಕೆ ಇನ್ನೂ ಎಂಟು ದಿವಸಗಳಿದೆಯಲ್ಲಾ" ಎಂದು ಮತ್ತೊಬ್ಬಳು ಹೇಳುತ್ತಾಳೆ. "ಹೌದು, ಇನ್ನು ಎಂಟೇ ದಿನಗಳಿರುವುದು. ಬನ್ನಿ, ಒಂದು ಸುತ್ತು ಎಲ್ಲರ ಮನೆಗೂ ಹೋಗಿ ಬರೋಣ" ಎಂದು ಎಲ್ಲ ಹೆಣ್ಣುಮಕ್ಕಳು ಅಲ್ಲಿಂದ ಹೊರಡುತ್ತಾರೆ.

ಹನ್ನೆರಡರಿಂದ ಹದಿಮೂರು ವರ್ಷ ವಯಸ್ಸಿನ ಎಲ್ಲ ಹೆಣ್ಣುಮಕ್ಕಳು ಸೇರುತ್ತಾರೆ. "ಮೊದಲು ಯಾರ ಮನೆಗೆ ಹೋಗೋಣ ?" ಒಬ್ಬಳು ಕೇಳುತ್ತಾಳೆ. ಒಬ್ಬೊಬ್ಬರೂ ಒಂದೊಂದು ಸೂಚನೆ ಕೊಡುವರು. ಕಡೆಗೆ, ಹಳ್ಳಿಯ ಯಜಮಾನರ ಮನೆಗೆ ಮೊದಲು ಹೋಗುವುದು ಎಂದು ಅವರು ನಿಶ್ಚಯಿಸುವರು.

ಹೆಣ್ಣುಮಕ್ಕಳು, ಹಳ್ಳಿಯ ಯಜಮಾನರ ಮನೆ ಸುತ್ತ ನಿಂತು, "ನಾವು ಹಳ್ಳಿಯ

ಹೆಣ್ಣುಮಕ್ಕಳೆಲ್ಲ ಬಂದಿದ್ದೇವೆ. ಯಜಮಾನಪ್ಪ ನಿಮ್ಮ ಮನೆಯ ಬಾಗಿಲಿಗೇ ಬಂದಿದ್ದೇವೆ" ಎಂದು ಎಲ್ಲರೂ ಕೂಗುವರು.

ಹಳ್ಳಿಯ ಯಜಮಾನರ ಮಗಳು ಜಿತೋ ಮನೆಯ ಬಾಗಿಲು ತೆರೆಯುವಳು. ಅವಳು ಹೆಣ್ಣುಮಕ್ಕಳ ಕೈಯಲ್ಲಿ ಒಂದು ಬೆರಣಿ ಇಡುವಳು. "ನಾವು ಒಂದನ್ನು ತೆಗೆದುಕೊಳ್ಳುವುದಿಲ್ಲ. ಐದು ಬೆರಣಿಗಳನ್ನಾದರೂ ಕೊಡಬೇಕು" ಎಂದು ಅವರು ಹೇಳುವರು. ಆ ಹೆಣ್ಣು ಮಕ್ಕಳಿಗೆ ಐದು ಬೆರಣಿಗಳನ್ನು ಕೊಡುವಂತೆ ಜಿತೋಗೆ ಅವರ ತಾಯಿ ಹೇಳುತ್ತಾರೆ. ಹೆಣ್ಣುಮಕ್ಕಳು ಬೆರಣಿಗಳನ್ನು ತೆಗೆದುಕೊಂಡು, "ನೀನೂ ನಮ್ಮಗಳ ಜೊತೆಯಲ್ಲಿ ಬಾ" ಎಂದು ಜಿತೋಳನ್ನು ಕರೆಯುವರು. ಹಾಡುವುದು ಮತ್ತು ಕುಣಿಯುವುದೆಂದರೆ ಜಿತೋಗೆ ಬಹಳ ಇಷ್ಟ. ಆ ಹೆಣ್ಣುಮಕ್ಕಳ ಜೊತೆ ಹೋಗಲು ಜಿತೋ ತಾಯಿಯ ಅನುಮತಿ ಕೇಳುತ್ತಾಳೆ. ತಾಯಿ ಸಮ್ಮತಿಸಿ "ನೀನು ಹರ್‌ಜೀತ್‌ನನ್ನೂ ಕರೆದುಕೊಂಡು ಹೋಗು, ಪಂಜಾಬ್‌ನಲ್ಲಿ ಲೋಡಿ ಹೇಗೆ ಆಚರಿಸಲ್ಪಡುತ್ತದೆ ಎನ್ನುವುದನ್ನು ಅವಳು ನೋಡಿಯೇ ಇಲ್ಲ" ಎನ್ನುವರು.

ಹೆಣ್ಣುಮಕ್ಕಳು ಮನೆ-ಮನೆಗೆ ಹೋಗಿ ಬೆರಣಿಗಳನ್ನು ಸಂಗ್ರಹಿಸುವರು. ತಾವು ಸಂಗ್ರಹಿಸಿದ ಬೆರಣಿಗಳನ್ನು ಯಜಮಾನರ ಮನೆಯಲ್ಲಿ ಗುಡ್ಡೆಹಾಕಿ ತಮ್ಮ ತಮ್ಮ ಮನೆಗೆ ಹಿಂದಿರುಗುತ್ತಾರೆ.

ಮಾರನೇ ದಿನ ಹರ್‌ಜಿತ್ ತನ್ನ ಚಿಕ್ಕಮ್ಮನನ್ನು, "ಈ ಹೆಣ್ಣುಮಕ್ಕಳು ಬೆರಣಿಯನ್ನು ಏಕೆ ಜಮಾಯಿಸುತ್ತಿದ್ದಾರೆ?" ಎಂದು ಕೇಳಿದಳು.

"ಪುಷ್ಯಮಾಸದ ಕಡೇ ದಿನ ಲೋಡಿ ಆಚರಿಸುವರು. ಇದು ಛಳಿಗಾಲ ಮುಗಿಯಿತು ಎನ್ನುವುದಕ್ಕೆ ಸೂಚನೆ. ನಮ್ಮ ತಾತ-ಮುತ್ತಾತಂದಿರು ಚಳಿಗಾಲದಲ್ಲಿ ತಮ್ಮ ದೇಹಕ್ಕೆ ಏನೂ ಆಗದಿರಲೆಂದು ಒಂದು ಪವಿತ್ರ ಮಂತ್ರವನ್ನು ಉಚ್ಛರಿಸುತ್ತಿದ್ದರು. ಈ ಮಂತ್ರದ ಮೂಲಕ ಅವರು ಸೂರ್ಯನನ್ನು ಪ್ರಾರ್ಥಿಸುತ್ತಿದ್ದರು. ಈ ಮಂತ್ರದ ಪ್ರಭಾವದಿಂದ ಸೂರ್ಯನ ಶಾಖ ಹೆಚ್ಚುತ್ತಿತ್ತು. ಚಳಿ ಅವರನ್ನು ಬಾಧಿಸುತ್ತಿರಲಿಲ್ಲ. ಸೂರ್ಯ ತಮಗೆ ಮಾಡಿದ ಉಪಕಾರಕ್ಕಾಗಿ ಅವರು ಅವನಿಗೆ ಕೃತಜ್ಞತೆ ತೋರಿಸಬೇಡವೇ? ಅದಕ್ಕಾಗಿ ಅವರು ಪುಷ್ಯ ಮಾಸದ ಕಡೇ ದಿನ ಬೆಂಕಿ ಹಾಕಿ, ಅದರ ಸುತ್ತಲೂ ನಿಂತು ಸೂರ್ಯ ಮಂತ್ರವನ್ನು ಜಪಿಸುತ್ತಿದ್ದರು. ಸೂರ್ಯನಿಗೆ ಗೌರವ ಸೂಚಿಸುವುದರ ಸಂಕೇತವಾಗಿ ಲೋಡಿಯ ದಿನ ಬೆಂಕಿ ಹಚ್ಚಲಾಗುವುದು. ಈ ಸಂದರ್ಭದಲ್ಲಿ ಹಾಡುವ ಒಂದು ಹಾಡು ಹೀಗಿರುತ್ತದೆ:

ಶಾಲು-ಅಗ್ಗಿಷ್ಟಿಕೆಗಳು ಎಲ್ಲಿಗೆ ಹೋದವು ?
    ಬಂಗಾರದ ಬೆಟ್ಟಕ್ಕೆ.
ಬಂಗಾರದ ಬೆಟ್ಟ ಎಲ್ಲಿಗೆ ಹೋಯಿತು ?
    ಸೂರ್ಯನ ಕಿರಣದ ಬಳಿ.
ಸೂರ್ಯಕಿರಣ ಎಲ್ಲಿಗೆ ಹೋಯಿತು ?
    ಸೂರ್ಯನ ಬಳಿ.
ಸೂರ್ಯ ಎಲ್ಲಿಗೆ ಹೋದ ?
    ಬೆಂಕಿಯೊಳಗೆ.
ಬೆಂಕಿ ಸುಡುತಿದೆ, ಶಾಖದ ಕಿರಣ ಮೂಡುತಿದೆ
    ಹಿಮವು ಕರಗುತಿದೆ, ಚಳಿಯು ಹೋಗುತಿದೆ.

"ಈ ಬೆಂಕಿಯಿಂದ ಏಳುವ ಜ್ವಾಲೆಗಳು ಸೂರ್ಯನಿಗೆ ತಮ್ಮ ಸಂದೇಶವನ್ನು ಮುಟ್ಟಿಸುತ್ತವೆಂದು ಹಿಂದಿನ ಕಾಲದ ಜನರು ನಂಬಿದ್ದರು. ಆದ್ದರಿಂದ ಲೋಡಿಯ ಮರು ದಿನ ಅಂದರೆ ಮಾಘಮಾಸದ ಮೊದಲ ದಿನ ಸೂರ್ಯನ ಶಾಖ ಹಠಾತ್ತನೆ ಹೆಚ್ಚುತ್ತದೆ. ಮೈ ನಡುಗಿಸುವ ಚಳಿ ಹೋಗುತ್ತದೆ.

"ಲೋಡಿಗೆ ಸಂಬಂಧಿಸಿದಂತೆ ಇನ್ನೊಂದು ವ್ಯಾಖ್ಯಾನವಿದೆ. ಹಿಂದಿನ ಕಾಲದಲ್ಲಿ ಮಾಂಸ ತಿನ್ನುವ ಪ್ರಾಣಿಗಳನ್ನು ಓಡಿಸಿ ತಮ್ಮ ವಾಸದ ಪ್ರದೇಶವನ್ನು ಸುರಕ್ಷಿತವಾಗಿಟ್ಟುಕೊಳ್ಳಲು ಜನರು ಬೆಂಕಿ ಹಾಕುತ್ತಿದ್ದರು. ಬೆಂಕಿ ಹಚ್ಚಲು ಆ ಪ್ರದೇಶದಲ್ಲಿದ್ದ ಜನರೆಲ್ಲ ಹಣ ಕೊಡುತ್ತಿದ್ದರು. ಚಿಕ್ಕ ಹುಡುಗರು ಮತ್ತು ಹುಡುಗಿಯರು ಕಾಡಿಗೆ ಹೋಗಿ ಉರುವಲನ್ನು ತರುತ್ತಿದ್ದರು. ಆದ್ದರಿಂದಲೇ ಇಂದಿಗೂ, ಲೋಡಿಯ ಬೆಂಕಿ ಹೊತ್ತಿಸಲು ಚಿಕ್ಕ ಹುಡುಗರೇ ಹೋಗಿ ಬೆರಣಿಗಳನ್ನು ಸಂಗ್ರಹಿಸಿಕೊಂಡು ಬರುತ್ತಾರೆ.

"ಬೆಂಕಿ ಹಚ್ಚಿ ಮೈಕಾಯಿಸಿಕೊಳ್ಳುವುದು ನಮ್ಮ ದೇಹವನ್ನು ಕಾಪಾಡಿಕೊಳ್ಳುವ ಹಳೇ ವಿಧಾನ. ಇದು ಅಗ್ನಿಯನ್ನು ಆರಾಧಿಸುವ ಒಂದು ರೂಪವೂ ಹೌದು. ಲೋಡಿಯ ಬೆಂಕಿಯ ಮುಂದೆ ನಿಂತು ದಂಪತಿಗಳು ತಮಗೆ ಮಕ್ಕಳಾಗಬೇಕೆಂದು ಪ್ರಾರ್ಥಿಸುತ್ತಾರೆ. ತಂದೆ-ತಾಯಿಗಳು ತಮ್ಮ ಹೆಣ್ಣು ಮಕ್ಕಳಿಗೆ ಒಳ್ಳೆಯ ಗಂಡಂದಿರು ದೊರೆಯಲೆಂದು ಕೇಳಿಕೊಳ್ಳುತ್ತಾರೆ. ಲೋಡಿ ಬೆಂಕಿಗೆ ಎಳ್ಳನ್ನು ಎರಚಿ ಗಂಡು ಮಗುವಾಗಬೇಕೆಂದು ಕೆಲವರು ಕೇಳಿಕೊಳ್ಳುವರು. ಅತ್ತಿಗೆ ಎಷ್ಟು ಹೆಚ್ಚಿಗೆ ಎಳ್ಳನ್ನು ಲೋಡಿ ಬೆಂಕಿಗೆ

ಎರಚುವಳೋ, ತನ್ನ ಮೈದುನನಿಗೆ ಅಷ್ಟು ಹೆಚ್ಚು ಗಂಡು ಮಕ್ಕಳಾಗುತ್ತವೆಂದು ಹೇಳುವುದುಂಟು. ಆದ್ದರಿಂದ ಗಂಡು ಮಗು ಹುಟ್ಟಿದ ಮನೆಯಲ್ಲಿ ಲೋಡಿಯನ್ನು ಬಹಳ ಸಂಭ್ರಮದಿಂದ ಆಚರಿಸಲಾಗುತ್ತದೆ. ಈ ಹಬ್ಬದಲ್ಲಿ ಅವರು ಬಂಧು-ಬಳಗದವರಿಗೆ ಮತ್ತು ಸ್ನೇಹಿತರಿಗೆ ಪಾಕಕ್ಕೆ ಎಳ್ಳು ಸೇರಿಸಿ ಮಾಡಿದ ತಿಂಡಿಗಳನ್ನು ಹಂಚುವರು. ಪಂಜಾಬಿ ಭಾಷೆಯಲ್ಲಿ ಎಳ್ಳಿಗೆ 'ತಿಲ್' ಮತ್ತು ಪಾಕಕ್ಕೆ 'ರೋಡಿ' ಎನ್ನುತ್ತಾರೆ. ಆದ್ದರಿಂದ ಇವೆರಡು ಶಬ್ದಗಳೂ ಸೇರಿ ಈ ಹಬ್ಬಕ್ಕೆ 'ತಿಲೋಡಿ' ಎಂಬ ಹೆಸರಿದೆ. ಲೋಡಿಯ ಸಂದರ್ಭದಲ್ಲಿ, ಹೊಸದಾಗಿ ಮದುವೆಯಾದ ಹೆಣ್ಣುಮಕ್ಕಳಿಗೆ ಅವರ ತಂದೆ-ತಾಯಿಗಳು ಉಡುಗೊರೆಗಳನ್ನು ಕೊಡುವ ಪದ್ಧತಿ ಉಂಟು.

"ರೈತರಿಗೆ ಲೋಡಿ ಹಬ್ಬದಿಂದ ಹೊಸ ಹಣಕಾಸು ವರ್ಷ ಆರಂಭವಾಗುತ್ತದೆ. ಆ ದಿನ ಅವರು ಭೂಮಿಯಲ್ಲಿ ಬೆಳೆದ ಫಸಲಿನಲ್ಲಿ ತಮಗೆ ಎಷ್ಟು ಪಾಲು ಬರಬೇಕೆಂಬುದನ್ನು ಮತ್ತು ಉತ್ತಿ-ಬಿತ್ತವರಿಗೆ ಎಷ್ಟು ಸಲ್ಲಬೇಕೆಂಬುದನ್ನು ತೀರ್ಮಾನಿಸಿಕೊಳ್ಳುವರು."

ಹೀಗೆ, ಚಿಕ್ಕಮ್ಮ ಲೋಡಿಯ ಬಗ್ಗೆ ದೊಡ್ಡ ಉಪನ್ಯಾಸವನ್ನೇ ಕೊಟ್ಟಳು. ಅಷ್ಟರಲ್ಲಿ, ಹಳ್ಳಿಯ ಹೆಣ್ಣುಮಕ್ಕಳು ಲೋಡಿ ಹಾಡನ್ನು ಹಾಡಿಕೊಂಡು ಮನೆ-ಮನೆಗೆ ಹೋಗಿ ಪದಾರ್ಥಗಳನ್ನು ಕೇಳುತ್ತಿದ್ದರು. ಹೊಸದಾಗಿ ಮದುವೆಯಾದ ಗಂಡುಗಳಿದ್ದ ಮನೆಯಲ್ಲಿ ಅವರು ಬೆಲ್ಲವನ್ನು ಕೇಳುತ್ತಿದ್ದರು. ಹೊಸ ಮಕ್ಕಳು ಹುಟ್ಟಿದ್ದ ಮನೆಗಳಲ್ಲಿ ಆ ಮಕ್ಕಳನ್ನು ಹರಸುವ ಹಾಡನ್ನು ಹಾಡುತ್ತಿದ್ದರು.

ಲೋಡಿಯ ಹಿಂದಿನ ದಿನ ಹುಡುಗರು ಜನಪ್ರಿಯ ಲೋಡಿ ಹಾಡುಗಳನ್ನು ಹಾಡುವರು. ಆ ಹಾಡಿನ ಒಂದೊಂದು ಸಾಲೂ 'ಹೋ' ಎಂಬ ಶಬ್ದದಿಂದ ಅಂತ್ಯಗೊಳ್ಳುತ್ತದೆ.

ಇದು ಎಷ್ಟು ಮುದ್ದಾದ ಉಂಗುರ ಹೋ!
    ಇದು ಯಾರ ಬೆರಳಿನ ಉಂಗುರ ಹೋ!
ಭಟ್ಟಿ ಹಳ್ಳಿಯ ದುಲ್ಲನದು ಹೋ!
    ಯಾರದೋ ಮಗಳನು ವರಿಸಿದ ದುಲ್ಲ ಹೋ!... ಇತ್ಯಾದಿ

ಮದುವೆಗೂ ಲೋಡಿಗೂ ಮೊದಲಿನಿಂದಲೂ ಸಂಬಂಧ ಬೆಳೆದು ಬಂದಿದೆ. ಲೋಡಿ ಹಬ್ಬದ ಅನೇಕ ಹಾಡುಗಳು ದುಲ್ಲ ಭಟ್ಟಿಯ ಹಳೆಯ ಪ್ರೇಮಕಥೆಗಳ ಆಧಾರದ ಮೇಲೆ ರಚಿತವಾಗಿವೆ. ಒಬ್ಬಳು ಹುಡುಗಿಯನ್ನು ಅಪಹರಣ ಮಾಡಲು ಪ್ರಯತ್ನಿಸಿದ ಕೆಲವು ದುಷ್ಟರ ಕೈಯಿಂದ ಅವಳನ್ನು ಪಾರು ಮಾಡಿದವನ ಕಥೆ ಇದು. ಅನಂತರ ಅವನು ಆ



ಹುಡುಗಿಯನ್ನು ತನ್ನ ಮಗಳೆಂದೇ ಭಾವಿಸಿ ಅವಳ ಮದುವೆಗೆ ಏರ್ಪಾಡು ಮಾಡಿದ. ಹೆಣ್ಣುಮಕ್ಕಳ ಮಾನಭಂಗಕ್ಕೆ ಪ್ರಯತ್ನಿಸುವವರನ್ನು ದಂಡಿಸಿ ಅವರ ಮಾನವನ್ನು ಕಾಪಾಡಬೇಕೆಂಬ ಸಂದೇಶವನ್ನು ಈ ಹಾಡುಗಳು ಸಾರುತ್ತವೆ.

ಸಣ್ಣ ಮಕ್ಕಳು ಹುಡುಗಾಟಿಕೆಯ ದಿನಗಳನ್ನು ನೆನಪಿಗೆ ತರುವ ಹಾಡು ಹಾಡುತ್ತಾರೆ - 'ನನ್ನ ಮಸಿ ಕುಡಿಕೆಯಲ್ಲಿ ಬೆಣ್ಣೆ ಕಾಸಿದ ತುಪ್ಪ'-ಇತ್ಯಾದಿ.

ಲೋಡಿ ಹಬ್ಬದ ದಿನ ಹುಡುಗರು ತಾವು ತಂದ ಬೆರಣೆಗಳನ್ನು ಮತ್ತು ಉರುವಲನ್ನು ಒಂದು ಜಾಗದಲ್ಲಿ ಪೇರಿಸುವರು. ಹೆಣ್ಣು ಮಕ್ಕಳು ಸಹ ಅದೇ ರೀತಿ ತಾವು ತಂದ ಉರುವಲನ್ನು ಗುಡ್ಡೆ ಹಾಕುತ್ತಾರೆ. ಹಳ್ಳಿಯ ಯಜಮಾನನ ಹೆಂಡತಿ ಭಾರಿ ಅಡಿಗೆಗಾಗಿ ಸಿದ್ಧ ಮಾಡಿಕೊಂಡಿರುತ್ತಾಳೆ. ಒಂದು ಪಾತ್ರೆಯಲ್ಲಿ ಅಕ್ಕಿ, ಇನ್ನೊಂದು ಪಾತ್ರೆಯಲ್ಲಿ ಬೇಳೆ, ಒಂದು ಬಕೆಟ್ ತುಂಬ ಕಬ್ಬಿನ ರಸ. ಒಲೆಯ ಮೇಲಿಟ್ಟಿದ್ದ ಒಂದು ಪಾತ್ರೆಗೆ ಆಗ ತಾನೇ

ಹೆಚ್ಚಿದ ಸಾಸಿವೆ ಸೊಪ್ಪನ್ನು ಹಾಕುತ್ತಾಳೆ. "ಇಷ್ಟೊಂದು ಚಳಿ ದಿನ ಏಕೆ ಇಷ್ಟೆಲ್ಲಾ ಅಡಿಗೆ ಮಾಡುತ್ತಿದ್ದೀರಿ, ಚಿಕ್ಕಮ್ಮಾ"-ಎಂದು ಹರ್‌ಜಿತ್ ಕೇಳುತ್ತಾಳೆ. "ಹಿಂದಿನ ಕಾಲದವರು ದಡ್ಡರೆಂದು ತಿಳಿಯಬೇಡ ಮರಿ. ಅವರು ಆರೋಗ್ಯವೇ ಭಾಗ್ಯ ಎಂದು ಬಗೆದಿದ್ದರು. ಪ್ರತಿಯೊಂದು ಹಬ್ಬವೂ ಒಂದೊಂದು ಸಂದೇಶವನ್ನು ತಿಳಿಸುತ್ತಿತ್ತು. ಚಳಿಗಾಲದಲ್ಲಿ ನಮ್ಮ ರಕ್ತವೇ ಹೆಪ್ಪುಗಟ್ಟುವ ಹಾಗಾಗುತ್ತದೆ. ಆದ್ದರಿಂದ ನಾವು ಬೆಂಕಿಯ ಮುಂದೆ ಕುಳಿತು ಮೈಕಾಯಿಸಿಕೊಳ್ಳುತ್ತೇವೆ. ನಮ್ಮ ಮೈಯಲ್ಲಿ ಶಾಖ ಹುಟ್ಟಿಸುವಂತಹ ಪದಾರ್ಥಗಳನ್ನು ತಿನ್ನುತ್ತೇವೆ. ಮಾಘಮಾಸ ಶುರುವಾದಂತೆ ಚಳಿ ಹೋಗುತ್ತದೆ. ಶಾಖ ಹೆಚ್ಚುತ್ತಾ ಹೋಗುತ್ತದೆ. ನಮ್ಮ ರಕ್ತಕ್ಕೆ ಹೊಸ ಚೇತನ ಬರುತ್ತದೆ. ಈ ಬದಲಾವಣೆಗೆ ಮುಂಚೆ, ನಾವು ದೇಹದ ಒಳ ಭಾಗವನ್ನು ಶುದ್ಧಪಡಿಸಿಕೊಳ್ಳಬೇಕು. ಕಬ್ಬಿನ ರಸದಲ್ಲಿ ಬೆಂದ ಬಸಲೆ ಸೊಪ್ಪು ಮತ್ತು ಸಾಸಿವೆ ಸೊಪ್ಪು ನಮ್ಮ ದೇಹದ ಒಳಭಾಗವನ್ನು ಚೆನ್ನಾಗಿ ಶುದ್ಧೀಕರಿಸುತ್ತದೆ" ಎಂದು ಚಿಕ್ಕಮ್ಮ ಹೇಳಿದಳು.

ಲೋಡಿ ಹಬ್ಬದ ದಿನ ಪ್ರತಿಯೊಬ್ಬರೂ ಒಳ್ಳೆಯ ಬಟ್ಟೆಗಳನ್ನು ಧರಿಸುವರು. ಒಬ್ಬರು ಮತ್ತೊಬ್ಬರಿಗೆ ಸಿಹಿತಿಂಡಿಗಳನ್ನು ಕೊಡುವರು. ಹಳ್ಳಿಯ ಯಜಮಾನನ ಹೆಂಡತಿ ಮನೆಯ ಮುಂದೆ ಚೆನ್ನಾಗಿ ಗುಡಿಸಿ ನೀರೆರಚುತ್ತಾಳೆ. ಅನಂತರ ಒಬ್ಬ ಹುಡುಗನನ್ನು ಕರೆಯುತ್ತಾಳೆ. ಅವನು ನೆಲವನ್ನು ಗುಂಡಗೆ ಅಗೆಯುತ್ತಾನೆ. ಮಧ್ಯೆ ಮಣ್ಣನ್ನು ಮಟ್ಟಗೊಳಿಸುತ್ತಾನೆ. ಹೆಣ್ಣು ಮಕ್ಕಳು, ಬೆರಣಿಗಳನ್ನು ಮತ್ತು ಕಟ್ಟಿಗೆಯನ್ನು ತರುತ್ತಾರೆ. ಹಳ್ಳಿಯ ಯಜಮಾನನ ಹೆಂಡತಿ, ಅವನ್ನು ಒಂದರ ಮೇಲೊಂದು ಇಟ್ಟು, ಎತ್ತರವಾಗಿ ಪೇರಿಸುತ್ತಾಳೆ. ಇದರ ಎತ್ತರ ಸುಮಾರು ಐದು ಅಡಿಗಳಷ್ಟಿರುತ್ತದೆ. ಗಾಳಿಯಾಡಲು ಮಧ್ಯೆ ಸ್ವಲ್ಪ ಜಾಗ ಬಿಟ್ಟು ಈ ಉರುವಲನ್ನು ಪೇರಿಸಿರುತ್ತಾಳೆ.


ಸೂರ್ಯ ಮುಳುಗುವನು. ಹಳ್ಳಿಯ ಹುಡುಗಿಯರು ಅತ್ಯುತ್ತಮವಾದ ಬಟ್ಟೆಗಳನ್ನು ಧರಿಸಿಕೊಂಡು ಆ ಜಾಗದಲ್ಲಿ ಸೇರುತ್ತಾರೆ. ಹೊಸದಾಗಿ ಮದುವೆಯಾದ ಹುಡುಗಿಯರು ಮೈತುಂಬ ಒಡವೆಗಳನ್ನು ಹೇರಿಕೊಂಡಿರುತ್ತಾರೆ. ಹೊಸದಾಗಿ ಹುಟ್ಟಿದ ಮಕ್ಕಳ ಕೈಗಳಲ್ಲಿ ಹಣೆಗೆಗಳನ್ನು ಕೊಡುತ್ತಾರೆ. ಯಜಮಾನನ ಹೆಂಡತಿ ಉರಿಯುತ್ತಿರುವ ಒಲೆಯಿಂದ ಒಂದು ತುಂಡು ಸೌದೆಯನ್ನು ತಂದು ಪೇರಿಸಿದ ಉರುವಲು ಗುಡ್ಡೆಗೆ ಹಿಡಿಯುತ್ತಾಳೆ. ಜ್ವಾಲೆ ಭುಗಿಲೇಳುತ್ತದೆ. ಧಗಧಗಿಸುವ ಬೆಂಕಿಗೆ ಹೆಣ್ಣುಮಕ್ಕಳು ಎಳ್ಳು ಎರಚುತ್ತಾರೆ. ಜ್ವಾಲೆಗೆ ತಲೆಬಾಗಿ ನಮಸ್ಕರಿಸುತ್ತಾರೆ. ಆಗ ಗುಂಪಿನಲ್ಲಿ ಯಾರಾದರೊಬ್ಬರು ಹಾಡುವರು.

ಮನಸ್ಸು ನಿರ್ಮಲವಾಗಲಿ
ಕಷ್ಟವೆಲ್ಲ ಹೋಗಲಿ
ಕಲ್ಮಷ ಬುಡ ಸಹಿತ ಹೊರಬರಲಿ
ಹೊರಬಂದು ಬೆಂಕಿಯನು ಸೇರಲಿ

ಜಿತೋ ಕಬ್ಬಿನ ತುಂಡುಗಳನ್ನು ಬೆಂಕಿಗೆ ಎಸೆಯುವಳು. ಸೀದ ಸಕ್ಕರೆಯ ವಾಸನೆ ವಾತಾವರಣವನ್ನು ತುಂಬಿಕೊಳ್ಳುತ್ತದೆ. ಹುಡುಗಿಯರು ಪಟಾಕಿ ಹಚ್ಚುವರು. ಜ್ವಾಲೆಯ ಕಾಂತಿ ಎಲ್ಲರ ಮುಖದಲ್ಲೂ ಹೊಂಬಣ್ಣವನ್ನು ಮೂಡಿಸುತ್ತದೆ. ಮುಂಜಾನೆವರೆಗೂ ಜನರು ಹಿಗ್ಗಿ ಹಾಡುತ್ತಾರೆ. ಕುಣಿದು ಮೈಮರೆಯುತ್ತಾರೆ. ಪುಟ್ಟ ಕಂದಮ್ಮಗಳು ಅಮ್ಮನ ಮಡಿಲಲ್ಲಿ ನಿದ್ರಿಸುತ್ತವೆ.

ಹರ್‌ಜಿತ್ ಮರುದಿನ ಬೆಳಿಗ್ಗೆ ಎದ್ದ ಕೂಡಲೇ ಬೆಂಕಿ ಹಚ್ಚಿದ್ದ ಸ್ಥಳಕ್ಕೆ ಹೋಗುತ್ತಾಳೆ. ಆ ಜಾಗದಲ್ಲಿ ಏನೇನು ಉಳಿದುಕೊಂಡಿದೆ ಎನ್ನುವುದನ್ನು ನೋಡುವ ಕುತೂಹಲ ಅವಳಿಗೆ. ಆ ಜಾಗದಲ್ಲಿ ಏನೇನೂ ಉಳಿದಿರುವುದಿಲ್ಲ. ಭಸ್ಮವೂ ಇರುವುದಿಲ್ಲ. "ಆ ಜಾಗದಲ್ಲಿ ಏನೂ ಉಳಿದಿಲ್ಲವಲ್ಲಾ, ಏಕೆ ಚಿಕ್ಕಮ್ಮಾ?" ಎಂದು ಹರ್‌ಜಿತ್ ಕೇಳುತ್ತಾಳೆ. "ಮಗೂ, ಭಸ್ಮವನ್ನು ಜನರು ಬಹಳ ಪವಿತ್ರವೆಂದು ಪರಿಗಣಿಸುವರು. ಏಕೆಂದರೆ, ಅದು ಹುಡುಗರೇ ಸಂಗ್ರಹಿಸಿದ ಉರುವಲಿನಿಂದ ಉಂಟಾದ ಭಸ್ಮ. ಈ ಬೆಂಕಿಯ ಮುಂದೆ ನಮ್ಮ ಹಾಗೂ ನಮ್ಮ ಪೂರ್ವಜರ ಸುಖ-ಸಂತೋಷಗಳಿಗಾಗಿ ಪ್ರಾರ್ಥನೆ ನಡೆದಿರುತ್ತದೆ. ಆದ್ದರಿಂದ ಜನರು ಸೂರ್ಯೋದಯಕ್ಕೆ ಮುಂಚೆಯೇ ಸ್ನಾನ ಮಾಡಿ, ಈ ಭಸ್ಮವನ್ನು ತೆಗೆದುಕೊಂಡು ಹೋಗುವರು. ಈ ಭಸ್ಮ ದೇವರ ಕೊಡುಗೆಯೆಂದೇ ಅವರ ಭಾವನೆ"-ಎಂದು ಹೇಳಿ ಚಿಕ್ಕಮ್ಮ ಮಾತು ಮುಗಿಸಿದರು.

ಮೂಲ ಪಂಜಾಬಿ: ಗುರು ದಯಾಳ್ ಸಿಂಗ್ ಫುಲ್





ಪೊಂಗಲ್

ಗೋಪಾಲನ ತಂದೆಗೆ ಕೆನಡಾದಲ್ಲಿ ಕೆಲಸ ದೊರೆತು, ಅವರ ಕುಟುಂಬ ಅಲ್ಲಿಗೆ ಹೋಗಿ ನೆಲೆಸಿ ಮೂರು ವರ್ಷಗಳಾದುವು. ಅವರು ಕೆನಡಾಗೆ ಹೋದಾಗ ಗೋಪಾಲ್ ಒಂಭತ್ತು ವರ್ಷದವನಿದ್ದ.

ಗೋಪಾಲ್‌ಗೆ ಕೆನಡಾ ತುಂಬಾ ಹಿಡಿಸಿತ್ತು. ಆದರೂ ಒಮ್ಮೊಮ್ಮೆ ಅವನಿಗೆ ಭಾರತದ ನೆನಪು ಬರುತ್ತಿತ್ತು. ಈಗ ಅಲ್ಲಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದುಕೊಳ್ಳುತ್ತಿದ್ದ. ಮದ್ರಾಸ್ (ಚೆನ್ನೈ)ಬಳಿ ತನ್ನ ತಾತ ಮತ್ತು ಅಜ್ಜಿ ಇರುವ ಹಳ್ಳಿಯಲ್ಲಿ ನಡೆಯುತ್ತಿದ್ದ ಜಾತ್ರೆಗಳ ಮತ್ತು ಹಬ್ಬಗಳ ಸಂಭ್ರಮವನ್ನು ಅವನು ಜ್ಞಾಪಿಸಿಕೊಳ್ಳುತ್ತಿದ್ದ.

ಪೊಂಗಲ್‌ಗೆ ಕೇವಲ ಎರಡು ವಾರಗಳಿದ್ದವು. ತಮಿಳಿನ ಥಾಯ್ (ಸುಮಾರು ಜನವರಿ ಮಧ್ಯ ಭಾಗ) ಮಾಸದ ಮೊದಲ ದಿನ ಪೊಂಗಲ್ ಆಚರಿಸಲಾಗುವುದೆಂದು ಗೋಪಾಲ್‌ಗೆ ಅವನ ತಾಯಿ ಹೇಳಿದ್ದರು. ತಮಿಳುನಾಡಿನಲ್ಲಿ ಭತ್ತದ ಸುಗ್ಗಿ ಮುಗಿದು ಮನೆಗೆ ಫಸಲು ಬಂದಿದ್ದರ ಸೂಚಕವಾಗಿ ಈ ಹಬ್ಬವನ್ನು ಆಚರಿಸಲಾಗುವುದೆಂದು ಸಹ ಅವರು

ಹೇಳಿದ್ದರು. ಪೊಂಗಲ್ ದಿನ ಸೂರ್ಯನ ಉತ್ತರ ದಿಕ್ಕಿನ ಪಯಣ ಅಂದರೆ ಉತ್ತರಾಯಣ ಆರಂಭವಾಗುವುದೆಂದು ಅವನ ತಂದೆ ತಿಳಿಸಿಕೊಟ್ಟರು.

ಈ ಸ್ವಾರಸ್ಯರಹಿತ ಮಾಹಿತಿಯಲ್ಲಿ ಆಸಕ್ತಿ ಇರಲಿಲ್ಲ. ಪೊಂಗಲ್ ಹಬ್ಬದಲ್ಲಿ ಏನೇನು ಕಾರ್ಯಕ್ರಮಗಳು ನಡೆಯುತ್ತವೆ ಮತ್ತು ಪೂಜಾ ವಿಧಿಗಳು ಹೇಗೆ ಆಚರಿಸಲ್ಪಡುತ್ತವೆ ಮುಂತಾದ ವಿಷಯಗಳನ್ನು ತಿಳಿದುಕೊಳ್ಳುವ ಕುತೂಹಲ ಅವನಿಗಿತ್ತು. ತಾನು ಚಿಕ್ಕವನಿದ್ದಾಗ ತಾತನ ಊರಿನಲ್ಲಿ ನಡೆಯುತ್ತಿದ್ದ ಈ ಹಬ್ಬದ ನೆನಪುಗಳನ್ನು ಅವನು ಮೆಲುಕು ಹಾಕುತ್ತಿದ್ದ. ಪೊಂಗಲ್ ದಿನ ತಮ್ಮ ಹಸು ಪಾರ್ವತಿಗೆ ಅಜ್ಜಿ ತುಂಬಾ ಚೆನ್ನಾಗಿ ಅಲಂಕಾರ ಮಾಡುತ್ತಿದ್ದರು. ಹಳ್ಳಿಯ ಎತ್ತುಗಳನ್ನು ಸುಂದರವಾಗಿ ಶೃಂಗರಿಸಿ, ಅವುಗಳನ್ನು ರಸ್ತೆಗಳಲ್ಲಿ ಮೆರವಣಿಗೆ ಮಾಡುತ್ತಿದ್ದರು. ಪೊಂಗಲ್ ದಿನ ಅಜ್ಜಿ ಮಾಡುತ್ತಿದ್ದ ಸಕ್ಕರೆ ಪೊಂಗಲ್‌ನ ರುಚಿಯನ್ನು ನೆನೆದರೆ ಅವನ ಬಾಯಿಯಲ್ಲಿ ನೀರೂರುತ್ತಿತ್ತು. ತಾಯಿ ಮಾಡುತ್ತಿದ್ದ ಪೊಂಗಲ್ ಅಷ್ಟೊಂದು ರುಚಿಕರವಾಗುತ್ತಿರಲಿಲ್ಲ.

"ನಾವೆಲ್ಲ ಒಂದು ತಿಂಗಳು ಭಾರತಕ್ಕೆ ಹೋಗಿ ಬರೋಣ" ಎಂದು ತನ್ನ ತಂದೆ ಒಂದು ಸಂಜೆ ಹೇಳಿದಾಗ ಗೋಪಾಲನ ಸಂತೋಷಕ್ಕೆ ಪಾರವೇ ಇರಲಿಲ್ಲ.

"ಹಾಗಾದರೆ ಪೊಂಗಲ್ ಹಬ್ಬದ ಹೊತ್ತಿಗೆ ನಾವು ಭಾರತದಲ್ಲಿರುತ್ತೇವೆಯೇ ?" ಎಂದು ಉತ್ಸಾಹದಿಂದ ಕೇಳಿದ.

"ಹೌದು, ಹಬ್ಬದ ಹೊತ್ತಿಗೆ ನಾವು ಖಂಡಿತ ಅಲ್ಲಿರುತ್ತೇವೆ. ನಿಮ್ಮ ಅಜ್ಜಿ ಮಾಡುವ ಸಕ್ಕರೆ ಪೊಂಗಲ್ ಅನ್ನು ಈ ಸಲ ನೀನು ಮನದಣಿಯ ತಿನ್ನಬಹುದು" ಎಂದು ಹೇಳಿ ಅವರು ಗೋಪಾಲನ ಅಮ್ಮನ ಕಡೆ ವ್ಯಂಗ್ಯವಾಗಿ ನೋಡಿದರು.

ಪೊಂಗಲ್‌ನ ಹಿಂದಿನ ದಿನ ಗೋಪಾಲ್ ಮತ್ತು ಅವನ ತಂದೆ-ತಾಯಿ ತಮ್ಮ ಹಳ್ಳಿಗೆ ಬಂದರು. ಮುಂಜಾನೆಯೇ ಮನೆಯಲ್ಲಿ ಸಡಗರ ಆರಂಭವಾಗಿತ್ತು. ಆಳುಗಳು ಜೇಡನ ಬಲೆಗಳನ್ನು ತೆಗೆದು ಧೂಳು ಹೊಡೆಯುತ್ತಿದ್ದರು. ಇನ್ನೊಂದು ಕಡೆ ಇನ್ನಿಬ್ಬರು ಆಳುಗಳು ಸುಣ್ಣ ಹೊಡೆಯಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ತಾವು ಹಳ್ಳಿಗೆ ಹೋಗಿರುವುದರಿಂದಲೇ ಇವೆಲ್ಲಾ ನಡೆಯುತ್ತಿವೆಯೆಂದು ಗೋಪಾಲ್ ಭಾವಿಸಿದ್ದ. ಆಮೇಲೆ ನೋಡಿದರೆ, ಆ ಬೀದಿಯ ಎಲ್ಲ ಮನೆಗಳಲ್ಲಿ ಸುಣ್ಣ-ಬಣ್ಣಗಳಾಗುತ್ತಿದ್ದವು. ಪೊಂಗಲ್‌ನಲ್ಲಿ ಪ್ರತಿಯೊಂದು ಮನೆಗೂ ಸುಣ್ಣ ಹಚ್ಚುವುದು ವಾಡಿಕೆ.

"ನಾಳೆಯೇ ಪೊಂಗಲ್ ಹಬ್ಬ ಅಲ್ಲವೇ ?" ಎಂದು ಗೋಪಾಲ್ ತಾತನನ್ನು ಕೇಳಿದ. "ನಾಳೆ ದೊಡ್ಡ ಪೊಂಗಲ್. ಇದರ ಹಿಂದಿನ ಮತ್ತು ಮುಂದಿನ ದಿನಗಳಿಗೆ ಬಹಳ

ಮಹತ್ವವುಂಟು. ಇವತ್ತು ಬೋಗಿ. ಇಂದು ಮನೆಯನ್ನು ಸ್ವಚ್ಛಗೊಳಿಸುವ ದಿನ. ಹಳೇ ವಸ್ತುಗಳನ್ನು ಮತ್ತು ಬೇಡವಾದ ವಸ್ತುಗಳನ್ನು ಎಸೆಯಲಾಗುವುದು ಇಲ್ಲವೇ ಸುಟ್ಟುಹಾಕಲಾಗುವುದು. ಪೊಂಗಲ್ ಹಿಂದಿನ ದಿನ ಇಡೀ ರಾತ್ರಿ ಇವುಗಳ ದಹನಕಾರ್ಯ ನಡೆಯುತ್ತದೆ. ಇವನ್ನು ಸುಡುವಾಗ ಹುಡುಗರು ಚಿಕ್ಕ ತಮಟೆಗಳನ್ನು ಬಾರಿಸುತ್ತಾರೆ. ಈ ತಮಟೆಗೆ 'ಬೋಗಿ ಕೊಟ್ಟು'ಗಳನ್ನು ವಿಶೇಷವಾಗಿ ತಯಾರಿಸಲಾಗುವುದು." ಹೀಗೆ ಹೇಳಿದಾಗ ತನಗೂ ಒಂದು 'ಬೋಗಿ ಕೊಟ್ಟು' ಬೇಕೆಂದು ಗೋಪಾಲ್ ತಾತನನ್ನು ಕೇಳಿದ.

"ಬೋಗಿ ಮತ್ತು ಪೊಂಗಲ್ ಬಗ್ಗೆ ಇನ್ನೂ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳುವ ಆಸೆ ನಿನಗಿರಬೇಕಲ್ಲವೇ ? ಕೆನಡಾದಲ್ಲಿರುವ ನಿನ್ನ ಸ್ನೇಹಿತರಿಗೆ ನಮ್ಮ ಹಬ್ಬ-ಹರಿದಿನಗಳು ಹೇಗೆ ಆಚರಿಸಲ್ಪಡುತ್ತವೆ ಎಂಬುದನ್ನು ಕೇಳಿ, ತಿಳಿಯುವ ಕುತೂಹಲವಿರಬೇಕು" ಎಂತು ತಾತ ಹೇಳಿದಾಗ, "ಹೌದು" ಎಂದ ಗೋಪಾಲ್.

"ಬೋಗಿ ಹಬ್ಬದಲ್ಲಿ ಋತುಗಳ ರಾಜ ಇಂದ್ರನನ್ನು ಪೂಜಿಸಲಾಗುವುದು. ಈ ಹಬ್ಬ ಹೊಸ ಋತು ಆರಂಭವಾಗುತ್ತಿದೆ ಎನ್ನುವುದರ ಸೂಚನೆ. ವರ್ಷದ ಈ ಋತುವಿನಲ್ಲಿ ಹಳೇ ಎಲೆಗಳು ಉದುರಿ, ಹೊಸ ಎಲೆಗಳು ಮತ್ತು ಹೂಗಳು ಬರುವ ಕಾಲ ಆರಂಭವಾಗುತ್ತದೆ. ಪ್ರಕೃತಿಯಂತೆ ತಮ್ಮ ಜೀವನಕ್ಕೂ ಒಂದು ಹೊಸ ಕಳೆ ಬರಬೇಕೆಂದು ಮಾನವರು ಬಯಸುವರು.

"ಪರಿಸರ ಚೊಕ್ಕಟವಾಗಿದ್ದರೆ, ಜೀವನದ ಬಗ್ಗೆ ನಮ್ಮ ಮನೋಭಾವ ಸಹ ಉತ್ತಮಗೊಳ್ಳುತ್ತದೆ" ಎಂದರು ತಾತ. ಅಷ್ಟರಲ್ಲಿ ಗೋಪಾಲ್‌ನಷ್ಟೇ ವಯಸ್ಸಿನ ಒಬ್ಬ ಹುಡುಗ ಮನೆಯೊಳಗೆ ಬಂದ. ಅವನ ಹೆಸರು ಸೀನು. ಅವನು ಪಕ್ಕದ ಮನೆ ಹುಡುಗ. ತಾತ, ಸೀನುವನ್ನು ಗೋಪಾಲ್‌ಗೆ ಪರಿಚಯ ಮಾಡಿಸಿ, "ನಮ್ಮ ಗೋಪಾಲ್‌ಗೆ ಒಂದು 'ಬೋಗಿ ಕೊಟ್ಟು' ಬೇಕಂತೆ ಅವನನ್ನು ಕರೆದುಕೊಂಡು ಹೋಗಿ, ಅದನ್ನು ಕೊಡಿಸು" ಎಂದು ಸೀನುಗೆ ಹೇಳಿದರು.

ಇಬ್ಬರು ಹುಡುಗರೂ ಓಡಿದರು. ಬೀದಿಯ ಮೂಲೆಯಲ್ಲಿ ಎಮ್ಮೆ ತೊಗಲಿನಿಂದ ಮಾಡಿದ 'ಬೋಗಿ ಕೊಟ್ಟು'ಗಳನ್ನು ಒಬ್ಬ ಮಾರುತ್ತಿದ್ದ. ಐವತ್ತು ಪೈಸೆಗೆ ಇಬ್ಬರೂ ಒಂದೊಂದು ಬೋಗಿ ಕೊಟ್ಟು ಮತ್ತು ಅದನ್ನು ಹೊಡೆಯಲು ಕೋಲುಗಳನ್ನು ಕೊಂಡರು.

ಮನೆಗೆ ಸುಣ್ಣ ಹಚ್ಚಲಾಯಿತು. ಅನಂತರ ನೆಲ ತೊಳೆದು ಸಾರಿಸಲಾಯಿತು. ಅಜ್ಜಿ

ಅಕ್ಕಿಯನ್ನು ರುಬ್ಬಿ, ಅದರ ಹಿಟ್ಟಿನಿಂದ ಮನೆಗೆಲ್ಲಾ ರಂಗೋಲಿ ಹಾಕಿದರು. ಈ ರಂಗೋಲಿಗೆ 'ಕೋಲಂ' ಎನ್ನುವರು. ಹೊಸದಾಗಿ ಬಂದ ಫಸಲಿನ ಅಕ್ಕಿಯನ್ನು ರುಬ್ಬಿ, ಅದರ ಹಿಟ್ಟಿನಿಂದ ರಂಗೋಲಿ ಹಾಕಲಾಗುತ್ತದೆ. ಆದ್ದರಿಂದಲೇ ಈ ರಂಗೋಲಿಗೆ ಬಹಳ ಮಹತ್ವವಿದೆ. ಗೋಪಾಲನ ಅಮ್ಮ ಮತ್ತು ಅಜ್ಜಿ ಇಬ್ಬರೂ ಸೇರಿ, ಪ್ರತಿಯೊಂದು ಕೋಣೆಯ ಗೋಡೆಯ ಕೆಳಗೆ ಕೆಂಪು ರಂಗೋಲಿಯಿಂದ ಅಂಚು ಹಾಕಿದರು. "ಅಜ್ಜಿ, ಇಡೀ ಮನೆ ಇಂದ್ರನ ಅರಮನೆಯ ಹಾಗೆ ಶೋಭಿಸುತ್ತಿದೆ" ಎಂದ ಗೋಪಾಲ್.

ಸೂರ್ಯ ಮುಳುಗಿದ. ಗೋಪಾಲ್ ಮತ್ತು ಸೀನು ಬೇಗನೆ ಊಟ ಮುಗಿಸಿ ಹತ್ತಿರದ ಬಯಲಿಗೆ ಓಡಿದರು. ಎಲ್ಲರ ಮನೆಯ ಹರಕು-ಮುರುಕು ವಸ್ತುಗಳು, ಬೇಡವಾದ ವಸ್ತುಗಳು ಮತ್ತಿತರ ಕಸಕಡ್ಡಿಗಳನ್ನು ಪೇರಿಸಿ, ಬೆಂಕಿ ಹಚ್ಚಲಾಗಿತ್ತು. ಆ ವಸ್ತುಗಳು ಬೆಂಕಿಯಲ್ಲಿ ಬೇಯುತ್ತಿದ್ದಂತೆ, ಹುಡುಗರು ಒಬ್ಬರನ್ನೊಬ್ಬರು ಮೀರಿಸುವಂತೆ ತಮಟೆಗಳನ್ನು ಹೊಡೆಯುತ್ತಿದ್ದರು.

ಉರಿ ಸ್ವಲ್ಪ ಕಡಿಮೆಯಾಯಿತೆಂದು ತೋರಿದರೆ, ಮತ್ತಷ್ಟು ವಸ್ತುಗಳನ್ನು ಬೆಂಕಿಗೆ ಹಾಕಿ, ಜ್ವಾಲೆ ಏಳುವಂತೆ ಮಾಡುತ್ತಿದ್ದರು. ಗೋಪಾಲ್ ಮಧ್ಯರಾತ್ರಿಯವರೆಗೂ ಅಲ್ಲೇ ಇದ್ದು ಅನಂತರ ಮನೆಗೆ ಹಿಂದಿರುಗಿದ.

ಗೋಪಾಲ್ ಹಿಂದಿನ ರಾತ್ರಿ ವೇಳೆ ಮೀರಿ ಮಲಗಿದ್ದರಿಂದ ಬೆಳಿಗ್ಗೆ ತಡವಾಗಿ ಎದ್ದ. ಅಷ್ಟು ಹೊತ್ತಿಗೆ ಮನೆಮಂದಿಯೆಲ್ಲಾ ಸ್ನಾನ ಮಾಡಿ ಹೊಸಬಟ್ಟೆಗಳನ್ನು ಧರಿಸಿದ್ದರು.

ತಾತಾ ವರಾಂಡದಲ್ಲಿ ಕುಳಿತು ಪತ್ರಿಕೆ ಓದುತ್ತಿದ್ದರು. ಮನೆಯ ಮುಂಬಾಗಿಲ ಹೊರಗೆ ವಿಶಾಲವಾದ ದೊಡ್ಡ ರಂಗೋಲೆ ಕಂಗೊಳಿಸುತ್ತಿತ್ತು.

"ಸೂರ್ಯದೇವನ ಪ್ರೀತ್ಯರ್ಥವಾಗಿ ಈ ದೊಡ್ಡ ರಂಗೋಲಿ ಹಾಕಲಾಗಿದೆ. ಪೊಂಗಲ್ ಹಬ್ಬದಲ್ಲಿ ನಾವು ಸೂರ್ಯನನ್ನು ಪೂಜಿಸುತ್ತೇವೆನ್ನುವುದು ನಿನಗೆ ಗೊತ್ತಿರಬೇಕಲ್ಲಾ" ಎಂದರು ತಾತ.

"ಇಲ್ಲ" ಎಂದುತ್ತರಿಸಿದ ಗೋಪಾಲ್.

"ಸೂರ್ಯನಿಲ್ಲದೇ ಏನೂ ಬೆಳೆಯದು. ಬೆಳೆಯಾಗದೇ ಇದ್ದರೆ ನಮಗೆ ಆಹಾರ ದೊರೆಯದು. ಆದ್ದರಿಂದ ನಮಗೆ ಅನ್ನ ಕೊಟ್ಟ ಸೂರ್ಯನಿಗೆ ಕೃತಜ್ಞತೆ ತೋರಿಸುತ್ತೇವೆ" ಎಂದರು ತಾತ.

ಅಡಿಗೆ ಮನೆಯಿಂದ ಬರುತ್ತಿದ್ದ ಘಮಘಮ ವಾಸನೆ ಮೂಗಿಗೆ ಬಡಿಯುತ್ತಿತ್ತು.

"ಎಂತಹ ಒಳ್ಳೆಯ ವಾಸನೆ. ಯಾವುದರ ವಾಸನೆ ಇರಬಹುದು?" ಗೋಪಾಲ್ ಕುತೂಹಲದಿಂದ ಪ್ರಶ್ನಿಸಿಕೊಂಡ.

"ಇದು ಸೂರ್ಯದೇವನಿಗೆ ತುಂಬ ಇಷ್ಟವಾದ ಪದಾರ್ಥ" ಎಂದಾಗ, ಗೋಪಾಲ್ ಅಡಿಗೆ ಮನೆಯೊಳಗೆ ಬಗ್ಗಿ ನೋಡಿದ. ಒಲೆಯ ಮೇಲೆ ದೊಡ್ಡ ಮಣ್ಣಿನ ಮಡಕೆ ಇತ್ತು. ಅದರೊಳಗೆ ಏನೋ ಬೇಯುತ್ತಿತ್ತು.

"ಅದರೊಳಗೇನಿದೆ ಎಂಬುದು ನನಗೆ ಗೊತ್ತು. ಸಕ್ಕರೆ ಪೊಂಗಲು ಅಲ್ಲವೇ?" ಎಂದ ಗೋಪಾಲ್.

"ಇರಬಹುದು, ಆದರೆ ಸ್ನಾನ ಮಾಡದೇ ನೀನು ಅದನ್ನು ಮುಟ್ಟುವಂತಿಲ್ಲ" ಎಂದರು ಅಜ್ಜಿ.

"ನೀನು ಸಕ್ಕರೆ ಪೊಂಗಲು ಮಾಡುವ ವಿಧಾನವನ್ನು ಹೇಳುವವರೆಗೆ ನಾನು ಸ್ನಾನಕ್ಕೆ ಹೋಗುವುದಿಲ್ಲ. ಅಮ್ಮ ಮಾಡುವ ಪೊಂಗಲು ಇಷ್ಟು ರುಚಿಯಾಗಿರುವುದಿಲ್ಲ" ಎಂದ.

"ಮೊದಲು, ಪೊಂಗಲ್‌ಗೆಂದೇ ವಿಶೇಷವಾಗಿ ಒಂದು ಮಡಕೆಯನ್ನು ಕೊಳ್ಳುತ್ತೇವೆ. ಅದರೊಳಗೆ ಹಾಲು ಹಾಕುತ್ತೇವೆ. ಹಾಲು ಚೆನ್ನಾಗಿ ಕಾದು ಉಕ್ಕಿದಾಗ ಹೊಸ ಅಕ್ಕಿಯನ್ನು ಅದಕ್ಕೆ ಹಾಕುತ್ತೇವೆ. ಆಮೇಲೆ ಅದಕ್ಕೆ ಬೆಲ್ಲವನ್ನು ಸೇರಿಸುತ್ತೇವೆ. ಇವೆಲ್ಲಾ ಸೇರಿಕೊಂಡು ಚೆನ್ನಾಗಿ ಬೆಂದ ಬಳಿಕ ಅದಕ್ಕೆ ದ್ರಾಕ್ಷಿ, ಗೋಡಂಬಿ, ಮೆಣಸು, ಲವಂಗ ಇತ್ಯಾದಿ ಸಾಂಬಾರ ಪದಾರ್ಥಗಳನ್ನು ಬೆರೆಸುತ್ತೇವೆ. ಅನಂತರ ಅದಕ್ಕೆ ಪೂಜೆ ಮಾಡಿ, ಸೂರ್ಯದೇವನಿಗೆ ವಿಧಿವತ್ತಾಗಿ ಅರ್ಪಿಸುತ್ತೇವೆ."

ಗೋಪಾಲ್ ಒಲೆಯ ಮೇಲಿದ್ದ ಮಡಕೆಯತ್ತ ಕೈತೋರಿಸಿ "ಇದು ಪೊಂಗಲ್ ಮಡಕೆಯೇ?" (ಪೊಂಗಲ್ ಪಾಣೈ) ಎಂದು ಕೇಳಿದ.

"ಪೊಂಗಲ್ ದಿನ ಯಾವುದೇ ಮಡಕೆಯಲ್ಲಿ ಪೊಂಗಲ್ ಮಾಡಿದರೂ, ಅದು ಪೊಂಗಲ್ ಮಡಕೆ (ಪೊಂಗಲ್ ಪಾಣೈ) ಎನ್ನಿಸಿಕೊಳ್ಳುತ್ತದೆ" ಎಂದು ಅಜ್ಜಿ ಹೇಳಿದರು.

"ಮಡಕೆಯ ಕತ್ತಿಗೆ ಏನೋ ಕಟ್ಟಿದ್ದೀರಲ್ಲಾ ಅದೇನು?" ಎಂದು ಕೇಳಿದ ಗೋಪಾಲ್.

"ಅದು ಅರಿಶಿನದ ಗಿಡ. ಅರಿಶಿನ ನಮಗೆ ಬಹಳ ಶುಭಕಾರಿ. ಭತ್ತದ ಫಸಲು ಬಂದಾಗಲೇ ಅರಿಶಿನ ಸಹ ಬರುತ್ತದೆ. ಆದ್ದರಿಂದ ಪೊಂಗಲ್ ಹಬ್ಬದಲ್ಲಿ ಅರಿಶಿನ ತುಂಬಾ ಹೆಚ್ಚಾಗಿ ಸಿಗುತ್ತದೆ" ಎಂದರು ಅವನ ತಾಯಿ.

"ಇದೇ ಕಾಲದಲ್ಲಿ ಇನ್ನೂ ಒಂದು ಫಸಲು ಬರುತ್ತದೆ. ಅದು ಕೂಡ ಇಂದು

ಪೇಟೆಯಲ್ಲಿ ಹೇರಳವಾಗಿ ದೊರೆಯುತ್ತದೆ. ಅದು ಯಾವುದಿರಬಹುದು ಊಹಿಸು" ಎಂದರು ಅಜ್ಜಿ.

ಗೋಪಾಲ್ ಸ್ವಲ್ಪ ಯೋಚಿಸಿದ. ಅವನಿಗೆ ಏನೂ ಹೊಳೆಯಲಿಲ್ಲ.

"ಮರೆತೆಯಾ ? ಅದೇ ಕಬ್ಬು ಕಣೋ" ಎಂದರು ಅವನ ತಾಯಿ.

"ಹೌದು, ಹೌದು. ಈಗ ನೆನಪಿಗೆ ಬಂತು. ನನಗೂ ಸ್ವಲ್ಪ ಕೊಡಮ್ಮಾ ಕಬ್ಬು ತಿಂದು ತುಂಬಾ ದಿನಗಳಾದುವು" ಎಂದ.

"ಪೂಜೆಗೆ ಮುಂಚೆ, ಖಂಡಿತಾ ಅದನ್ನು ಕೊಡುವುದಿಲ್ಲ."

"ನಾನೂ ಪೂಜೆ ಮಾಡಬಹುದೆ ?" ಎಂದು ಗೋಪಾಲ್ ಕೇಳಿದ.

"ಧಾರಾಳವಾಗಿ ! ಆದರೆ ಬೇಗನೆ ಸ್ನಾನ ಮಾಡಿ ಬಟ್ಟೆ ಹಾಕಿಕೊಳ್ಳಬೇಕು" ಎಂದರು ಅಜ್ಜಿ.

ಗೋಪಾಲ್ ಅವಸರದಲ್ಲಿ ಸ್ನಾನ ಮಾಡಿದ. ತಾತ ಮತ್ತು ಅಪ್ಪ ಪೂಜೆ ಮಾಡುತ್ತಿದ್ದರು. ಪೂಜೆ ಮಾಡುವುದನ್ನು ನೋಡುತ್ತಾ ನಿಂತ. ಒಂದು ಮಣೆಯ ಮೇಲೆ ಸೂರ್ಯನ ಮತ್ತು ರಥದ ಚಿತ್ರ ಬರೆಯಲಾಗಿತ್ತು. ತಾತ ಮಂತ್ರ ಹೇಳಿಕೊಂಡು ಪೂಜೆ ಮಾಡುತ್ತಿದ್ದರು. ಪೂಜೆಯಾದ ನಂತರ ಒಂದು ಚಿಕ್ಕ ತಟ್ಟೆಯಲ್ಲಿ ಪೊಂಗಲ್ ಅನ್ನು ತಂದು ಸೂರ್ಯನಿಗೆ ನೈವೇದ್ಯ ಮಾಡಿದರು. ಎಲ್ಲರೂ ಸೂರ್ಯನಿಗೆ ನಮಸ್ಕರಿಸಿ, ಅವನ ಕೃಪೆ ಬೇಡಿದರು. ಗೋಪಾಲ್ ತಾನು ತವಕದಿಂದ ಕಾದಿದ್ದ ಸಮಯ ಕಡೆಗೂ ಬಂತು. ಅಜ್ಜಿ ಎಲ್ಲರಿಗೂ ಪೊಂಗಲ್ ಕೊಟ್ಟರು. ಗೋಪಾಲ್ ಒಮ್ಮೆ ತಿಂದ. ಇನ್ನೊಮ್ಮೆ ಕೇಳಿದ. ಮನದಣಿಯುವಷ್ಟು ಪೊಂಗಲ್ ತಿಂದ. ತಾತ ಕಬ್ಬನ್ನು ಹೋಳುಗಳಾಗಿ ತುಂಡರಿಸುತ್ತಿದ್ದರು. ಗೋಪಾಲ್‌ಗೂ ಒಂದಷ್ಟು ಕಬ್ಬಿನ ಹೋಳುಗಳನ್ನು ಕೊಟ್ಟರು. ಒಂದೊಂದಾಗಿ ಬಾಯಿಗೆ ಹಾಕಿಕೊಂಡು, ಜಗಿದು, ರಸ ಹೀರಿ, ಸಿಪ್ಪೆಯನ್ನು ಉಗಿಯುತ್ತಿದ್ದ. ಆ ವೇಳೆಗೆ ಸರಿಯಾಗಿ ಸೀನು ಅಲ್ಲಿಗೆ ಬಂದ. "ನಿಮ್ಮ ಮನೆಯಲ್ಲಿ ಹಾಲು ಉಕ್ಕಿಸಿದ್ದಾಯಿತೇ ?" (ತಮಿಳಿನಲ್ಲಿ-ಪಾಲ್ ಪೊಂಗಿಟ್ರಾ) ಎಂದು ತಾತ ಕೇಳಿದರು. "ಆಯಿತು ತಾತಾ" ಎಂದ ಸೀನು.

ಗೋಪಾಲ್‌ಗೆ ಅರ್ಥವಾಗಲಿಲ್ಲ. "ಪೊಂಗಲ್ ಹಬ್ಬದ ದಿನ ಒಬ್ಬರನ್ನೊಬ್ಬರು ನೋಡಿದ ಕೂಡಲೇ, ಮೊದಲು 'ಪಾಲ್ ಪೊಂಗಿಟ್ರಾ' ಎಂದು ಕೇಳುವರು. ಹಾಲು ಉಕ್ಕಿದಂತೆ ಸಿರಿ ಸಂಪತ್ತು ಉಕ್ಕುವುದೆಂದು ಸೂಚಿಸುವುದಕ್ಕಾಗಿ ಅಂದು ಹಾಲನ್ನು ಉಕ್ಕಿಸಲಾಗುವುದು" ಎಂದು ತಾತ ವರ್ಣಿಸಿದರು.

ಪೊಂಗಲ್ ದಿನ ಧಾನ್ಯದ ಕಣಜಗಳು ತುಂಬಿರುತ್ತವೆ. ಸೂರ್ಯ ಉಜ್ವಲವಾಗಿ ಹೊಳೆಯುತ್ತಾನೆ. ಗಿಡ-ಮರಗಳು ಚಿಗುರುತ್ತವೆ. ಹಕ್ಕಿಗಳ ಚಿಲಿ-ಪಿಲಿ ಶಬ್ದ ಕಿವಿಗಿಂಪಾಗಿರುತ್ತದೆ. ಎಲ್ಲರೂ ಸಂತೋಷದಿಂದ ಹಿಗ್ಗಿರುತ್ತಾರೆ. ತಮ್ಮ ಆನಂದವನ್ನು ಜನರು ಈ ಹಬ್ಬದ ಮೂಲಕ ವ್ಯಕ್ತಪಡಿಸುವರು.

ಇಬ್ಬರೂ ಹುಡುಗರೂ ಜೇಬಿನಲ್ಲಿ ಕಬ್ಬಿನ ಹೋಳುಗಳನ್ನು ತುರುಕಿಕೊಂಡು ಹೊರಗಡೆಯ ತಮಾಷೆಯನ್ನು ನೋಡಲು ಓಡಿದರು. ತಾನು ಚಿಕ್ಕವನಿದ್ದಾಗ ಆ ಹಳ್ಳಿಯ ಬೀದಿಗಳಲ್ಲಿ ಅಲೆಯುತ್ತಿದ್ದ ಎರಡು ಎತ್ತುಗಳನ್ನು ಗೋಪಾಲ್ ಥಟ್ಟನೆ ಜ್ಞಾಪಿಸಿಕೊಂಡ. "ಸೀನೂ ಈಗ ಆ ಎತ್ತುಗಳೆಲ್ಲಿವೆ ?" ಎಂದು ಕೇಳಿದ.

"ನಾಳೆ ದನಗಳ ಪೊಂಗಲ್ (ಮಾಟ್ಟು ಪೊಂಗಲ್). ಆಗ ಆ ಎತ್ತುಗಳನ್ನು ನೀನು ಕಾಣಬಹುದು" ಎಂದ ಸೀನು.


"ಯಾರೋ 'ಮಂಜಿವಿರಾಟ್ಟು' ಎಂದು ಹೇಳುತ್ತಾ ಇದ್ದುದನ್ನು ಕೇಳಿದೆ. ಹಾಗೆಂದರೇನು ?" ಎಂದ ಗೋಪಾಲ್.

"ಇದು ಮಾಟ್ಟು ಪೊಂಗಲ್ ದಿನ ನಡೆಯುವ ಒಂದು ಸ್ವಾರಸ್ಯಪೂರ್ಣ ಘಟನೆ. ಎತ್ತುಗಳನ್ನು ಅವುಗಳ ಒಡೆಯರು ಚೆನ್ನಾಗಿ ಅಲಂಕರಿಸಿರುತ್ತಾರೆ. ಅವುಗಳ ಕುತ್ತಿಗೆಗೆ ಹಣದ ಚೀಲಗಳನ್ನು ಕಟ್ಟುತ್ತಾರೆ. ಈ ಎತ್ತುಗಳನ್ನು ಹೊರಗೆ ಹೊಡೆದುಕೊಂಡು ಹೋಗುತ್ತಾರೆ. ಜೋರಾಗಿ ಹೋಗುವ ಎತ್ತುಗಳನ್ನು ಹಿಡಿದು ನಿಲ್ಲಿಸಿದವರಿಗೆ ಅವುಗಳ ಕುತ್ತಿಗೆಗೆ ಕಟ್ಟಿದ ಹಣದ ಚೀಲ ದೊರೆಯುತ್ತದೆ."

"ಹಾಗಾದರೆ ಇದು ತುಂಬಾ ತಮಾಷೆಯಾಗಿರಬೇಕು. ಇದನ್ನು ಕೇಳಿದ ಮೇಲೆ ನಾಳೆ ಎಷ್ಟು ಹೊತ್ತಿಗೆ ಈ ಪಂದ್ಯವನ್ನು ನೋಡೋಣ ಎನಿಸುತ್ತಿದೆ" ಎಂದ ಗೋಪಾಲ್. ಮನೆ ತಲುಪಿದ ಕೂಡಲೇ 'ಮಾಟ್ಟು ಪೊಂಗಲ್' ಬಗ್ಗೆ ಮತ್ತಷ್ಟು ವಿಷಯಗಳನ್ನು ಹೇಳಬೇಕೆಂದು ಅವನು ತಾತನನ್ನು ಪೀಡಿಸಿದ.

"ಇಡೀ ವರ್ಷ ನಮ್ಮ ಮನೆಮಂದಿಗೆಲ್ಲಾ ಉಪಕಾರ ಮಾಡಿದ ದನಕರುಗಳಿಗೆ ಕೃತಜ್ಞತೆ ಸೂಚಿಸುವುದೇ ಈ ದಿನದ ಉದ್ದೇಶ. ನಾಳೆ ನಿಮ್ಮ ಅಜ್ಜಿ ಪಾರ್ವತಿಯ ಹಣೆಗೆ ಅರಿಶಿನ-ಕುಂಕುಮವಿಟ್ಟು ಪೂಜಿಸುವಳು. ಅದರ ಕುತ್ತಿಗೆಗೆ ಹೂವಿನ ಹಾರ ಹಾಕುವಳು. ಅನಂತರ ಅದಕ್ಕೆ ಪೊಂಗಲು ತಿನ್ನಿಸುವಳು" ಎಂದರು ತಾತ.

"ಆದರೆ ಸೀನು ಎತ್ತುಗಳ ವಿಷಯವಾಗಿ ಏನೋ ಹೇಳುತ್ತಿದ್ದನಲ್ಲಾ" ಎಂದ ಗೋಪಾಲ್.



“ಅದೇ ವಿಷಯಕ್ಕೆ ಬರುತ್ತಿದ್ದೇನೆ. ಪೊಂಗಲ್ ಸುಗ್ಗಿಯ ಹಬ್ಬ. ಅಂದ ಮೇಲೆ ಅದು ರೈತರಿಗೆ ಸಂಬಂಧಿಸಿದ ಮುಖ್ಯ ಹಬ್ಬ ಎಂದಾಯಿತು. ಎತ್ತಿನ ಸಹಾಯವಿಲ್ಲದೇ ರೈತ ಫಸಲು ಪಡೆಯಲಾರ. ಆದ್ದರಿಂದ ದನಕರುಗಳ ಪೊಂಗಲ್ ದಿನ ಎತ್ತುಗಳಿಗೆ ಹೆಚ್ಚು ಮಹತ್ವ. ‘ಮಂಜಿವಿರಾಟ್ಟು’ನಲ್ಲಿ ಎತ್ತುಗಳಿಗೆ ಪ್ರಾಧಾನ್ಯ” ಎಂದರು.

ಕಡೆಗೂ ಮಾಟ್ಟು ಪೊಂಗಲ್ ಬಂದಿತು. ಗೋಪಾಲ್ ಅಜ್ಜಿಯ ಜೊತೆಯಲ್ಲಿ ಬೇಗನೇ ಎದ್ದ. ಸ್ನಾನ ಮುಗಿಸಿದ. ಅಜ್ಜಿ ಪಾರ್ವತಿಗೆ ಪೂಜೆ ಮಾಡಿದ್ದನ್ನು ನೋಡಿದ. ಅನಂತರ ಸೀನು ಮನೆಗೆ ಓಡಿಹೋದ. ಅಲ್ಲಿಂದ ಅವರಿಬ್ಬರೂ ಹತ್ತಿರದ ಹೊಲ ಮನೆಯೊಂದಕ್ಕೆ ಹೋದರು. ಹೊಲಮನೆಯಲ್ಲಿ ಸಡಗರ ಕಂಡುಬರುತ್ತಿತ್ತು. ಪೊಂಗಲ್ ಅನ್ನ ತಯಾರಿಸಿ,

ಗಣೇಶನ ಸಂಕೇತವಾಗಿ ಸಗಣಿಯಿಂದ ಮಾಡಿದ್ದ ಆಕೃತಿಗೆ, ಅದನ್ನು ವಿಧಿವತ್ತಾಗಿ ಅರ್ಪಿಸಿದರು. ಈ ಗಣೇಶನನ್ನು ತುಂಬೆ ಹೂವು ಮತ್ತಿತರ ಹೂಗಳಿಂದ ಅಲಂಕರಿಸಲಾಗಿತ್ತು. ನೆಲದ ಮೇಲೆ ವಿಶೇಷವಾದ ಒಂದು ರಂಗೋಲಿಯನ್ನು ಹಾಕಲಾಗಿತ್ತು. ಆ ರಂಗೋಲಿಯ ಸುತ್ತ ಕೆಮ್ಮಣ್ಣಿನಿಂದ ಅಲಂಕರಿಸಲಾಗಿತ್ತು. ಅದರ ಮೇಲೆ ಪೊಂಗಲ್ ಮಡಿಕೆಗಳನ್ನು ಇಡಲಾಗಿತ್ತು. ಮಡಿಕೆಗಳ ಬಳಿ ಅರಿಶಿನ, ಶುಂಠಿ ಮತ್ತು ಕಬ್ಬು ಇವೆಲ್ಲವನ್ನೂ ಇಟ್ಟು ಗಣೇಶನಿಗೆ ನಿವೇದಿಸಲಾಗಿತ್ತು. ಅಲ್ಲೇ ಹಳದಿ ಬಣ್ಣದ ಹಾರಗಳನ್ನು ಮತ್ತು ಒಂದು ಕೋಲನ್ನು ಇಡಲಾಗಿತ್ತು.

"ಇವೆಲ್ಲಾ ಏನು ?" ಎಂದು ಗೋಪಾಲ್ ಕೇಳಿದ.

"ಈ ಕೋಲಿಗೆ 'ಅಡಲಿಕ್ಕೊಂಬು' ಎನ್ನುವರು. ಈ ಕೋಲನ್ನು ರೈತರು ಎತ್ತುಗಳನ್ನು ಓಡಿಸಲು ಉಪಯೋಗಿಸುತ್ತಾರೆ. ಈ ಹಾರಗಳನ್ನು ತಾಳೆ ಮರದ ಎಲೆಗಳಿಂದ ಕಟ್ಟಲಾಗಿದೆ. ಇಂದು ಆ ಹಾರಗಳನ್ನು ಎತ್ತುಗಳ ಕತ್ತಿಗೆ ಹಾಕುವರು" ಎಂದ ಸೀನು.

ಇದಾದ ನಂತರ ಹಬ್ಬಕ್ಕೆಂದು ಹೊಲಿಸಿದ ಹೊಸಬಟ್ಟೆಗಳನ್ನು ಎಲ್ಲರೂ ಧರಿಸಿದರು. ಹೊಲದ ಕೆಲಸದಾಳುಗಳು ಗಾಡಿಯನ್ನು ಮತ್ತು ಇತರ ಬೇಸಾಯದ ಉಪಕರಣಗಳನ್ನು ತೊಳೆದರು. ಗಾಡಿಗೆ ಬಣ್ಣ ಹಚ್ಚಿದರು. ಹರಿತವಾದ ಸಾಧನವೊಂದರಿಂದ ಅವರು ಎತ್ತುಗಳ ಕೊಂಬುಗಳನ್ನು ಜೀವಿ ಅವಕ್ಕೆ ಬಣ್ಣ ಸವರಿದರು. ಕೊಂಬುಗಳ ತುದಿಗೆ ಹೊಳೆಯುವ ಲೋಹದ ಟೋಪಿಗಳನ್ನು ಹಾಕಿದರು.

ಇದ್ದಕ್ಕಿದ್ದಂತೆ ರಸ್ತೆಗಳಲ್ಲಿ ಭಾರಿ ಗದ್ದಲ ಕೇಳಿಸಿತು. ಇಬ್ಬರು ಹುಡುಗರೂ ತಮಾಷೆ ನೋಡಲು ಓಡಿದರು. ಸುಂದರವಾಗಿ ಅಲಂಕೃತವಾಗಿದ್ದ ಎತ್ತುಗಳನ್ನು ರಸ್ತೆಯಲ್ಲಿ ಓಡಿಸಿಕೊಂಡು ಹೋಗುತ್ತಿದ್ದರು. ಆ ಎತ್ತುಗಳ ಕೊಂಬುಗಳಿಗೆ ರಮ್ಯವಾದ ಬಣ್ಣಗಳನ್ನು ಬಳಿಯಲಾಗಿತ್ತು. ಕತ್ತುಗಳಿಗೆ ಗೆಜ್ಜೆ ಕಟ್ಟಲಾಗಿತ್ತು. ಮಣಿಹಾರಗಳನ್ನು ಹಾಕಲಾಗಿತ್ತು. ಓಡುತ್ತಿದ್ದ ಎತ್ತೊಂದನ್ನು ಯಾವಾಗಲೋ ಒಂದೊಂದು ಸಲ ಒಬ್ಬ ತರುಣ ಹಿಡಿದು ನಿಲ್ಲಿಸುತ್ತಿದ್ದ. ಅದರ ಬೆನ್ನ ಮೇಲೇರಿ, ಸ್ವಲ್ಪ ದೂರ ಸವಾರಿ ಮಾಡಿ, ಅದರ ಕತ್ತಿಗೆ ಕಟ್ಟಿದ್ದ ಹಣದ ಚೀಲವನ್ನು ತೆಗೆದುಕೊಳ್ಳುತ್ತಿದ್ದ. ಕೆಲವು ಎತ್ತುಗಳು ತುಂಬ ಕ್ರೂರವಾಗಿ ಬಿಡುತ್ತಿದ್ದವು. ತಮ್ಮ ಮೇಲೇರಲು ಪ್ರಯತ್ನಿಸುವ ಅಥವಾ ಕುತ್ತಿಗೆಯ ಹಾರವನ್ನು ಎಳೆದುಕೊಳ್ಳಲೆತ್ನಿಸುವ ವ್ಯಕ್ತಿಗಳನ್ನು ಆ ಎತ್ತುಗಳು ಬೀಳಿಸುತ್ತಿದ್ದವು. ಕೆಲವರಿಗೆ ತೀವ್ರ ಗಾಯಗಳಾಗುತ್ತಿದ್ದವು. ಅಂತಹವರನ್ನು ತಕ್ಷಣವೇ ಅಲ್ಲಿಂದ ಎತ್ತಿಕೊಂಡು ಹೋಗುತ್ತಿದ್ದರು. ಬರಿಗೈಯಲ್ಲಿ ಮತ್ತು ಬರಿಮೈಯಲ್ಲಿ ಬೆವರಿಳಿಸಿಕೊಂಡು, ಉರಿಯುವ

ಬಿಸಿಲಲ್ಲಿ ಎತ್ತುಗಳೊಡನೆ ಸೆಣಸಾಡುತ್ತಿದ್ದವರನ್ನು ಕಂಡು ಗೋಪಾಲ್‌ಗೆ ತುಂಬ ಅನುಕಂಪವಾಯಿತು. ಒಬ್ಬರು, ಇಬ್ಬಿಬ್ಬರು ಅಥವಾ ಮೂರು ಜನ ಎತ್ತಿನೊಡನೆ ಹೋರಾಡುವ ರೋಮಾಂಚಕಾರೀ ದೃಶ್ಯವನ್ನು ಅವನು ಅದುವರೆಗೂ ನೋಡಿರಲಿಲ್ಲ.

ಅಂದು ಸಂಜೆ ಹಳ್ಳಿಯ ಹೆಂಗಸರು ತಂಡೋಪತಂಡವಾಗಿ ಬಯಲು ದೇವಾಲಯಕ್ಕೆ ಹೋಗಿ ಗ್ರಾಮ ದೇವತೆಯನ್ನು ಪೂಜಿಸಿದರು. ಅನಂತರ ಎತ್ತಿನ ಬಂಡಿಗಳನ್ನು ಓಡಿಸುವ ಸ್ಪರ್ಧೆ ನಡೆಯಿತು. ಇದನ್ನು ನೋಡಲು ಹೆಂಗಸರು, ಗಂಡಸರು ಮತ್ತು ಮಕ್ಕಳು ಭಾರಿ ಸಂಖ್ಯೆಯಲ್ಲಿ ಸೇರಿದ್ದರು.

"ಪೊಂಗಲ್ ಹಬ್ಬ ಇಷ್ಟೊಂದು ಚೆನ್ನಾಗಿರುತ್ತದೆ ಅಂತ ನನಗೆ ಗೊತ್ತೇ ಇರಲಿಲ್ಲ" ಎಂದು ಹೇಳಿ ಗೋಪಾಲ್ ಸೀನುಗೆ ತನ್ನ ಕೃತಜ್ಞತೆ ವ್ಯಕ್ತಪಡಿಸಿದ.

"ನಾನೇ ನಿನಗೆ ವಂದನೆ ಹೇಳಬೇಕು. ಪೊಂಗಲ್ ವೈಶಿಷ್ಟ್ಯವನ್ನು ಮತ್ತೊಮ್ಮೆ ಕಾಣುವ ಅವಕಾಶವನ್ನು ನೀನು ನನಗೆ ಒದಗಿಸಿಕೊಟ್ಟೆ" ಎಂದು ಸೀನು ಹೇಳಿದ.

ಆದವನ್ ಸುಂದರಂ





ಹೋಳಿ

ಹೋಳಿಹಬ್ಬ ವಸಂತ ಮಾಸದಲ್ಲಿ ಬರುತ್ತದೆ. ಈ ಹಬ್ಬಕ್ಕೆ ಕೆಲವು ದಿನಗಳಿಗೆ ಮುಂಚೆ ನೀವು ಮನೆಯಿಂದ ಹೊರಗೆ ಕಾಲಿಡುವಾಗ ಎಚ್ಚರಿಕೆಯಿಂದಿರಬೇಕು. ಎಲ್ಲಿಂದಲೋ ಎಸೆದ ಬಣ್ಣದ ನೀರು ತುಂಬಿದ ಬಲೂನ್ ನಿಮ್ಮ ಬಟ್ಟೆ ಮೇಲೆ ಬೀಳಬಹುದು. ನಿಮ್ಮ ಕಣ್ಣಿಗೆ ಕಾಣದ ಜಾಗದಲ್ಲಿ ನಿಂತು ಪಿಚಕಾರಿಯಿಂದ ಹಾರಿಸಿದ ನೀರು ನಿಮ್ಮ ಬಟ್ಟೆಯನ್ನು ವರ್ಣಮಯಗೊಳಿಸಬಹುದು. ಬಸ್ಸಿನಲ್ಲಿ ಹೋಗುವಾಗ ಕಿಟಕಿಯನ್ನು ಮುಚ್ಚಿರದಿದ್ದರೆ ಮುಗಿಯಿತು. ನಿಮ್ಮ ಬಟ್ಟೆಯೆಲ್ಲ ಬಣ್ಣದ ನೀರಿನಿಂದ ಒದ್ದೆ-ಮುದ್ದೆಯಾಗಿರುತ್ತದೆ.

ಹೋಳಿ ಹಬ್ಬದಲ್ಲಿ ಇವೆಲ್ಲಾ ಕ್ಷಮ್ಯ. ಇದು ಸಂತೋಷದಿಂದ ನಕ್ಕು ನಲಿಯುವ ಹಬ್ಬ. ಒಬ್ಬರನ್ನೊಬ್ಬರು ಅರಿತುಕೊಳ್ಳಲು ಮತ್ತು ಹಿಂದಿನ ಮನಸ್ತಾಪಗಳನ್ನು ಮರೆಯಲು ಇದು ಒಳ್ಳೆಯ ಅವಕಾಶ. ಈ ಹಬ್ಬದಲ್ಲಿ ಯಾರನ್ನು ನೋಡಿದರೂ, ಬಣ್ಣದಲ್ಲಿ ತೊಯ್ದಿರುತ್ತಾರೆ. ಮುಖದ ಮೇಲೆ ಬಣ್ಣದ ಪುಡಿಗಳ ಲೇಪನವಾಗಿರುತ್ತದೆ. ಜನರು ಗುಂಪು ಗುಂಪಾಗಿ ಹಾಡಿಕೊಂಡು, ಕುಣಿದುಕೊಂಡು ಹಾಗೂ ತಮಟೆಗಳನ್ನು

ಬಾರಿಸಿಕೊಂಡು ಬೀದಿಬೀದಿಯಲ್ಲಿ ಹೋಗುವರು. ಅವರು ಒಬ್ಬರನ್ನೊಬ್ಬರು ಅಟ್ಟಿಸಿಕೊಂಡು ಹೋಗಿ ಮುಖಕ್ಕೆ ಗುಲಾಲು ರಂಗನ್ನು ಬಳಿಯುವರು. ಒಬ್ಬರನ್ನೊಬ್ಬರು ಆಲಂಗಿಸಿಕೊಂಡು ಹೋಳಿಯ ಶುಭಾಶಯವನ್ನು ಹೇಳುವರು. ಓಣಿಗಳಲ್ಲಿ ಮತ್ತು ಅಡ್ಡ ಓಣಿಗಳಲ್ಲಿ ಒಬ್ಬರ ಮೇಲೊಬ್ಬರು ಎರಚುವ ಬಣ್ಣದ ಪುಡಿಯಿಂದ, ಬಣ್ಣದ ಮಂಜು ಕವಿದಂತೆ ಕಾಣಿಸುತ್ತದೆ. ಜನರ ಈ ಕೂಗು ವಾತಾವರಣವನ್ನು ತುಂಬಿಕೊಳ್ಳುತ್ತದೆ.

ಇದು ಹೋಳಿ, ಅಣ್ಣಾ, ಇದು ಹೋಳಿ
ತಾಯಿ ಹೋಳಿ ಹರಕೆಗಳೆಲ್ಲ ಫಲಿಸಲಿ
ನಮ್ಮ ಮಕ್ಕಳೆಲ್ಲ ಲಕ್ಷ ವರ್ಷ ಬಾಳಲಿ

ಉತ್ತರ ಭಾರತದ ಪ್ರತಿಯೊಂದು ಪಟ್ಟಣ ಮತ್ತು ಹಳ್ಳಿಯಲ್ಲಿ ನೀವು ಈ ದೃಶ್ಯವನ್ನು ಕಾಣಬಹುದು. ದೀಪಾವಳಿ ಮತ್ತು ದಸರಾದಂತೆ, ಹೋಳಿ ಸಹ ಭಾರತದ ಅತಿ ಮುಖ್ಯ ಹಬ್ಬಗಳಲ್ಲೊಂದು. ದಕ್ಷಿಣ ಭಾರತದ ಕೆಲವು ಪ್ರದೇಶಗಳನ್ನು ಬಿಟ್ಟು ದೇಶದಾದ್ಯಂತ ಈ ಹಬ್ಬವನ್ನು ಆಚರಿಸಲಾಗುವುದು. ಹೊರ ದೇಶಗಳಲ್ಲಿರುವ ಭಾರತೀಯರೂ ಸಹ ಇದನ್ನು ಉತ್ಸಾಹದಿಂದ ಆಚರಿಸುವರು. ಈ ಹಬ್ಬದಲ್ಲಿ ಎಲ್ಲ ವಯಸ್ಸಿನವರು ಮತ್ತು ವರ್ಗಗಳವರು ತಾರತಮ್ಯಗಳನ್ನು ಮರೆತು, ಸಮಾನವಾಗಿ ಭಾಗವಹಿಸುವರು.

ಹೋಳಿ ವಸಂತ ಕಾಲದ ಹಬ್ಬ. ಇದು ಜೀವನಕ್ಕೆ ಒಂದು ಹೊಸ ಹುರುಪು ತರುತ್ತದೆ. ಈ ಕಾಲದಲ್ಲಿ ನಾವು ಪ್ರಕೃತಿಯಲ್ಲೂ ಹೊಸತನವನ್ನು ಕಾಣುತ್ತೇವೆ. ಮರಗಿಡಗಳಲ್ಲಿ ಹೊಸ ಎಲೆಗಳು ಮೂಡುತ್ತವೆ. ಅನೇಕ ಪ್ರದೇಶಗಳಲ್ಲಿ ಸಾಸಿವೆ ಗಿಡದ ಹೂಗಳು ಅರಳುತ್ತವೆ. ತೋಟಗಳು ಮತ್ತು ಉದ್ಯಾನಗಳು ನಾನಾ ಬಣ್ಣಗಳ ಹೂಗಳಿಂದ ವರ್ಣಮಯವಾಗಿರುತ್ತವೆ. ಚಳಿಯಿಂದ ಮನೆ ಬಿಟ್ಟು ಹೋಗದಿದ್ದವರೆಲ್ಲ ಹೊರಗೆ ಕಾಲಿಡುವರು. ಚಳಿಗಾಲದಲ್ಲಿ ಅಡಗಿಕೊಂಡಿದ್ದ ಪ್ರಾಣಿಗಳು ಪುನಃ ಹೊರ ಜಗತ್ತಿಗೆ ಕಾಲಿಡುತ್ತವೆ. ಎಲ್ಲರ ಮನಸ್ಸಿನಲ್ಲಿ ಆಶೆ-ಆಕಾಂಕ್ಷೆಗಳು ತುಂಬಿರುತ್ತವೆ. ಪ್ರಣಯ ಭಾವನೆಗಳು ಚಿಗುರೊಡೆಯುತ್ತವೆ. ಬೇಸಿಗೆ ಆರಂಭವಾಗಿ, ಋತು ಬದಲಾವಣೆಯಾಗುತ್ತದೆ. ಉಡಲು ಮತ್ತು ಹೊದೆಯಲು ಬಟ್ಟೆ ಇಲ್ಲದ ಹಾಗೂ ವಾಸಿಸಲು ಮನೆ ಇಲ್ಲದ ಬಡವರ ಬವಣೆ ಅಂತ್ಯಗೊಳ್ಳುತ್ತದೆ. ಇಂತಹ ಕಾಲ ಬಂದಿದ್ದಕ್ಕಾಗಿ ನಾವು ಹಿಗ್ಗಿ ನಲಿದಾಡುತ್ತೇವೆ!

ರೈತನಿಗೆ ಇದು ಸುಗ್ಗಿಯ ಹಬ್ಬ. ಚಳಿಗಾಲದ ಬೆಳೆ ಕಟಾವಿಗೆ ಬಂದಿರುತ್ತದೆ. ಗೋಧಿಯ ಬೆಳೆಯನ್ನು ಕಂಡು, ರೈತನಲ್ಲಿ ಆಶಾಭಾವನೆ ತುಂಬಿರುತ್ತದೆ. ಕೃತಜ್ಞತೆಯ

ಭಾವನೆ ಅವನ ಮನಸ್ಸನ್ನು ಆವರಿಸಿರುತ್ತದೆ. ಹೋಳಿ ವರ್ಷಾರಂಭದ ಸಂಕೇತವೂ ಹೌದು. ಭಾರತದ ಕೆಲವು ಜ್ಯೋತಿಷಿಗಳ ಅಭಿಪ್ರಾಯದ ಮೇರೆಗೆ, ಹೊಸ ವರ್ಷದ ದಿನ ಹೋಳಿ ಬೆಂಕಿಯನ್ನು ಹಚ್ಚಿದ ಎರಡು ದಿನಗಳ ನಂತರ ಬರುತ್ತದೆ. ಕ್ರಿಶ್ಚಿಯನ್ ಕ್ಯಾಲೆಂಡರ್ ಪ್ರಕಾರ, ಹೋಳಿ, ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಬರುತ್ತದೆ.

ಹೋಳಿ ಶಿವನಿಗೆ ಸಂಬಂಧಿಸಿದ ಒಂದು ಹಬ್ಬ. ಜನರು ಬಣ್ಣಗಳನ್ನು ಬಳಿದುಕೊಂಡು ರಸ್ತೆಗಳಲ್ಲಿ ಹಾಡುತ್ತ ಮತ್ತು ಕುಣಿಯುತ್ತ ಹೋಗುವುದು ಶಿವನ ಮದುವೆಯ ದೃಶ್ಯವನ್ನು ಅಭಿನಯಿಸುವುದರ ಸಂಕೇತ.

ಹೋಳಿ ಹಬ್ಬಕ್ಕೆ ಸಂಬಂಧಿಸಿದಂತೆ ಇನ್ನೂ ಒಂದು ಪ್ರಸಿದ್ಧ ಕಥೆ ಇದೆ. ಹಿರಣ್ಯಕಶಿಪು ದೊಡ್ಡ ರಾಕ್ಷಸ ದೊರೆ. ದೇವತೆಗಳು ಮತ್ತು ಅಸುರರ ನಡುವೆ ಆದ ಹೋರಾಟದಲ್ಲಿ ಹಿರಣ್ಯಕಶಿಪು ಜಯಶಾಲಿಯಾದ. ಅಂದಿನಿಂದ ಅವನ ಗರ್ವ ಹೆಚ್ಚಿತು. ದೇವರನ್ನು ಯಾರೂ ಪೂಜಿಸಕೂಡದೆಂದು ಮತ್ತು ದೇವರ ಹೆಸರೆತ್ತಿದರೆ ಭಯಂಕರ ಶಿಕ್ಷೆ ದೊರೆಯುವುದೆಂದು ಹಿರಣ್ಯಕಶಿಪು ಆಜ್ಞೆ ಹೊರಡಿಸಿದ.

ಹಿರಣ್ಯ ಕಶಿಪುವಿನ ಮಗ ಪ್ರಹ್ಲಾದ ದೈವ ಭಕ್ತ. ಅವನು ತಂದೆಯ ಆಜ್ಞೆಯನ್ನು ಪಾಲಿಸಲು ನಿರಾಕರಿಸಿದ. ಮುಂಚಿನಂತೆಯೇ ಅವನು ದೇವರ ಧ್ಯಾನ ಮಾಡುತ್ತಿದ್ದ. ಇದನ್ನು ಕಂಡು ಹಿರಣ್ಯಕಶಿಪು ಕುಪಿತಗೊಂಡ. ಮಗನಿಗೆ ಘೋರ ಶಿಕ್ಷೆಗಳನ್ನು ಕೊಟ್ಟ. ಆದರೆ ಪ್ರಹ್ಲಾದನಿಗೆ ಏನೂ ಆಗಲಿಲ್ಲ.

ಹಿರಣ್ಯಕಶಿಪುವಿಗೆ ಹೋಲಿಕಾ ಎಂಬ ತಂಗಿ ಇದ್ದಳು. ಅವಳು ವಿಶೇಷ ಶಕ್ತಿಯನ್ನು ಪಡೆದುಕೊಂಡಿದ್ದಳು. ಈ ಶಕ್ತಿ ಇದ್ದ ಕಾರಣ ಬೆಂಕಿ ಅವಳನ್ನು ಸುಡುತ್ತಿರಲಿಲ್ಲ. ಪ್ರಹ್ಲಾದನನ್ನು ತನ್ನ ಮಡಿಲಲ್ಲಿ ಹಾಕಿಕೊಂಡು ಅವನನ್ನು ಸುಟ್ಟುಹಾಕಬೇಕೆಂದು ಹಿರಣ್ಯಕಶಿಪು ತಂಗಿಗೆ ಹೇಳಿದ. ಆದರೆ ಪ್ರಹ್ಲಾದನಿಗೆ ಮಾತ್ರ ಏನೂ ಆಗಲಿಲ್ಲ. ಹೋಲಿಕಾ ಸುಟ್ಟು ಭಸ್ಮವಾದಳು. ಈ ಒಂದು ಅದ್ಭುತ ಘಟನೆಯ ನೆನಪಿಗಾಗಿ, ಹೋಳಿಯನ್ನು ಆಚರಿಸಲಾಗುವುದು ಮತ್ತು ಹೋಳಿ ಹಬ್ಬದಲ್ಲಿ ಬೆಂಕಿ ಹಚ್ಚಲಾಗುವುದು.

ಹೋಳಿಯ ಹಿಂದಿನ ದಿನ ಜನರು ಒಂದು ಬಯಲಿನಲ್ಲಿ ಮರದ ಕೊರಡುಗಳು ಮತ್ತು ಇತರ ವಸ್ತುಗಳನ್ನು ಪೇರಿಸುವರು. ಹೋಳಿಯ ದಿನ ರಾತ್ರಿ, ಬೆಂಕಿಯ ಸುತ್ತಲೂ ನಿಂತು ತಮಟೆಗಳನ್ನು ಬಾರಿಸಿಕೊಂಡು ಹಾಡುವರು ಮತ್ತು ಕುಣಿಯುವರು. ಮಕ್ಕಳು ಹೀಗೆ ಹಾಡುತ್ತಾ ಬೆಂಕಿಗೆ ಸುತ್ತು ಹಾಕುವರು:

ಹೋಳಿ ತಾಯಿ ಹರಸೆಮ್ಮನು

ಲಕ್ಷಾಂತರ ವರ್ಷ ಸಲಹೆಮ್ಮನು.... ಇತ್ಯಾದಿ.

ಹೋಳಿಯ ಹಬ್ಬಕ್ಕೆ ಕೆಲವು ದಿನಗಳಿಗೆ ಮುಂಚೆಯೇ ಸಿದ್ಧತೆಗಳು ಆರಂಭವಾಗುತ್ತವೆ. ಮನೆಗೆ ಸುಣ್ಣ ಹಚ್ಚುವರು. ಮುಂಬಾಗಿಲಿನಲ್ಲಿ ಬಣ್ಣಬಣ್ಣದ ರಂಗೋಲಿ ಹಾಕುವರು. ಹಿಂದೆ ಕಾಡು ಹೂಗಳನ್ನು ಬಳಸಿ ಬಣ್ಣ ತಯಾರಿಸುತ್ತಿದ್ದರು. ಈಗ ಬಣ್ಣದ ಪುಡಿಗಳು ಮತ್ತು ಪಿಚಕಾರಿಗಳು ಸಿಗುತ್ತವೆ. ಹಳ್ಳಿಗಳಲ್ಲಿ, ಅಕ್ಕಿ ಹಿಟ್ಟು ಮತ್ತು ಅರಿಶಿನವನ್ನು ಬೆರೆಸಿ ಗುಲಾಲ್ ಬಣ್ಣವನ್ನು ತಯಾರಿಸುವರು. ಹಳ್ಳಿಯ ಮಕ್ಕಳು ಬಿದಿರಿನ ಗಳುವಿನಿಂದ ಪಿಚಕಾರಿ ಮಾಡಿಕೊಳ್ಳುವರು. ಈ ಪಿಚಕಾರಿಯ ಒಂದು ತುದಿಯಲ್ಲಿ ರಂಧ್ರವಿರುತ್ತದೆ. ಒಂದು ಕಡ್ಡಿಗೆ ಹಳೇ ಬಟ್ಟೆಯನ್ನು ಸುತ್ತಿ ಅದನ್ನು ಕೊಂತದ ಹಾಗೆ ಬಳಸಲಾಗುವುದು.

ಕೆಲವು ಪ್ರದೇಶಗಳಲ್ಲಿ ಹೋಳಿ ಹಬ್ಬದ ವಿಶೇಷ ನೃತ್ಯಗಳನ್ನು ಪ್ರದರ್ಶಿಸಲಾಗುವುದು. ಬಣ್ಣಬಣ್ಣದ ಕೋಲುಗಳಿಂದ ಕೋಲಾಟವಾಡುವವರು. ಕೋಲು ಹೊಡೆಯುತ್ತಾ ಗಿರ್ರನೆ ಸುತ್ತುವ ದೃಶ್ಯ ತುಂಬ ರಮ್ಯವಾಗಿರುತ್ತದೆ. ಈ ಬಣ್ಣದ ಕೋಲುಗಳ ಉದ್ದ ಸುಮಾರು ಒಂದೂವರೆ ಅಡಿ ಇರುತ್ತದೆ. ಚಿಕ್ಕ ಕೋಲಿನ ಉದ್ದ ಸುಮಾರು ಹತ್ತು ಅಂಗುಲಗಳಷ್ಟಿರುತ್ತದೆ. ಗುಜರಾತ್‌ನಲ್ಲಿ ಈ ಕೋಲಾಟ ಹೋಳಿ ಹಬ್ಬದ ಮುಖ್ಯ ಕಾರ್ಯಕ್ರಮ.

ಇತರ ಹಬ್ಬಗಳಂತೆ ಹೋಳಿಯಲ್ಲೂ ವಿಶೇಷ ಭಕ್ಷ್ಯಗಳನ್ನು ತಯಾರಿಸುವರು. ಹಬ್ಬಕ್ಕೆ ಕೆಲವು ದಿನಗಳ ಮುಂಚೆಯೇ ತುಪ್ಪ, ಬೆಲ್ಲ, ಸಕ್ಕರೆ ಮುಂತಾದ ಪದಾರ್ಥಗಳನ್ನು ಜನ ಶೇಖರಿಸಿಟ್ಟುಕೊಳ್ಳುವರು. ಒಂದೊಂದು ಪ್ರದೇಶದಲ್ಲಿ ಒಂದೊಂದು ಪದಾರ್ಥ ಜನಪ್ರಿಯವಾಗಿರುತ್ತದೆ. ಸಕ್ಕರೆಯ ಪಾಕದಲ್ಲಿ ನೆನೆಸಿದ ತಾಜಾ ಬ್ರೆಡ್ ಅನ್ನು ಮಾಲ್ಪುವಾ ಎನ್ನುವರು. ಇದನ್ನು ಎಲ್ಲ ಪ್ರದೇಶಗಳಲ್ಲಿ ತಯಾರಿಸಲಾಗುವುದು. ಉತ್ತರ ಪ್ರದೇಶದಲ್ಲಿ ಜೋಳದ ಹಿಟ್ಟಿನಿಂದ ಮಾಡಿದ ಗುಜಿಯಾ ಮತ್ತು ಪಾಪ್ಡಿ ತುಂಬ ಜನಪ್ರಿಯ. ಮಹಾರಾಷ್ಟ್ರದಲ್ಲಿ ಹೂರಣದ ಹೋಳಿಗೆ ಮಾಡುವರು. ನಗರದ ಜನರು ಅಂಗಡಿಗಳಿಂದಲೇ ಸಿಹಿ ತಿಂಡಿಗಳನ್ನು ಕೊಳ್ಳುವರು. ಹಳ್ಳಿಗಳಲ್ಲಿ ಈಗಲೂ ಹೋಳಿಯ ತಿಂಡಿಗಳನ್ನು ಮನೆಯಲ್ಲೇ ಮಾಡುತ್ತಾರೆ.

ಹಿಮಾಚಲ ಪ್ರದೇಶದ ಒಂದು ಹಳ್ಳಿಯಲ್ಲಿ ನಾನು ನೋಡಿದ ಹೋಳಿ ಹಬ್ಬವನ್ನು ಮರೆಯುವಂತಿಲ್ಲ. ಹಳ್ಳಿಯ ಒಂದು ಚೌಕದಲ್ಲಿ ಚಾಪೆಗಳನ್ನು ಹಾಸಿದ್ದರು. ಗುಲಾಲ್ ರಂಗಿನಿಂದ ತುಂಬಿದ್ದ ಅನೇಕ ತಟ್ಟೆಗಳನ್ನು ಆ ಚಾಪೆಗಳ ಮೇಲಿಟ್ಟಿದ್ದರು. ಅಲ್ಲಿ ಹಳ್ಳಿಯ



ಹಿರಿಯರೆಲ್ಲ ಸೇರಿದ್ದರು. ಹಾರ್ಮೋನಿಯಂ ಮತ್ತು ತಬಲಾಗಳ ಪಕ್ಕವಾದ್ಯದೊಡನೆ ಅವರು ಸಾಮೂಹಿಕವಾಗಿ ಹಾಡಿದರು. ಅನಂತರ ಅವರೆಲ್ಲ ಮೆರವಣಿಗೆಯಲ್ಲಿ ಮನೆಮನೆಗೆ ಹೋದರು. ವಯಸ್ಸು ಮತ್ತು ಸ್ಥಾನಮಾನಗಳ ಭೇದ-ಭಾವಗಳಿಲ್ಲದೇ ಎಲ್ಲರೂ ಒಬ್ಬರ ಮೇಲೊಬ್ಬರು ಬಣ್ಣಗಳನ್ನು ಎರಚಾಡಿದರು. ಪಿಚಕಾರಿಯಿಂದ ಬಣ್ಣದ ನೀರನ್ನು ಹಾರಿಸಿದರು. ಹೆಂಗಸರು ದಂಡೋಚ್ ಎಂಬ ಗಿಡಕ್ಕೆ ಪೂಜೆ ಮಾಡಿದರು. ಅನಂತರ ಅವರು ಬಣ್ಣದ ಕೋಲುಗಳಿಂದ ಕೋಲಾಟವಾಡಿದರು.

ಅಂದು ಸಂಜೆ, ಹಳ್ಳಿಯ ಮುಖ್ಯ ಚೌಕದಲ್ಲಿ, ತಮ್ಮ ದೇವರುಗಳಾದ ರಾಮ, ಕೃಷ್ಣ, ಶಿವ, ಪಾರ್ವತಿ, ಹನುಮಂತ ಮತ್ತು ಗಣೇಶನನ್ನು ನೋಡಲು ಹಳ್ಳಿಗೆ ಹಳ್ಳಿಯೇ

ಬಂದಿತ್ತು. ರಾತ್ರಿ ಸುಮಾರು 10ಗಂಟೆಗೆ ಆ ಚೌಕದಲ್ಲಿ ಹೋಳಿ ಬೆಂಕಿಯನ್ನು ಹಚ್ಚಿದರು. ಎಲ್ಲ ಬಣ್ಣದ ಕೋಲುಗಳನ್ನು ಮತ್ತು ಪಿಚಕಾರಿಗಳನ್ನು ಉರಿಯುತ್ತಿದ್ದ ಬೆಂಕಿಗೆ ಎಸೆದರು. ಅನಂತರ ಅಲ್ಲಿ ಸೇರಿದ್ದ ಪ್ರತಿಯೊಬ್ಬರೂ ಸುಟ್ಟು ಕರಕಲಾಗಿದ್ದ ಒಂದೊಂದು ಕಟ್ಟಿಗೆ ತುಂಡನ್ನು ಆಯ್ದುಕೊಂಡು ಮನೆಗೆ ಒಯ್ದರು. ಇನ್ನೊಂದು ವರ್ಷದವರೆಗೆ ಅದನ್ನು ಅವರು ತಮ್ಮ ಮನೆಯಲ್ಲಿ ಇಟ್ಟುಕೊಳ್ಳುವರು. ಇದರಿಂದ ಮನೆಗೆ ರೋಗ-ರುಜಿನಗಳು ಸುಳಿಯುವುದಿಲ್ಲವೆಂಬುದು ಹಳ್ಳಿಗರ ನಂಬಿಕೆ.

ಹೋಳಿಗೆ ಕೆಲವು ವಾರಗಳ ಮುಂಚೆಯೇ ಪೇಟೆಯಲ್ಲಿ ಬಣ್ಣದ ಪುಡಿಗಳು, ಗುಲಾಲ್, ನೀರು ತುಂಬಲು ಬಲೂನ್‌ಗಳು ಮತ್ತು ಪಿಚಕಾರಿಗಳ ಮಾರಾಟ ಪ್ರಾರಂಭವಾಗುತ್ತದೆ. ಹೋಳಿಯನ್ನು ಸಾಮಾನ್ಯವಾಗಿ ಎರಡು ದಿನ ಆಚರಿಸಲಾಗುವುದು. ಒಂದು ದಿನ ಬೆಂಕಿಯನ್ನು ಹಚ್ಚುವರು. ಇನ್ನೊಂದು ದಿನ ರಂಗಿನಾಟ ಆಡುವರು. ದೊಡ್ಡ ಪಟ್ಟಣಗಳಲ್ಲಿ ಒಂದು ದಿನ ಮಾತ್ರ ಬಣ್ಣದಲ್ಲಾಡುವರು. ಅಂದು ಜನರು ಬಕೆಟ್‌ಗಳಲ್ಲಿ ಬಣ್ಣದ ನೀರನ್ನು ಒಬ್ಬರ ಮೇಲೊಬ್ಬರು ಸುರಿಯುವರು. ಪಿಚಕಾರಿಗಳಲ್ಲಿ ಬಣ್ಣದ ನೀರನ್ನು ಹೊಡೆಯುವರು. ಸಾಲದೆಂಬಂತೆ ಬಣ್ಣದ ಪುಡಿಗಳನ್ನು ಮುಖಕ್ಕೆ ಲೇಪಿಸುವರು. ಈ ಸಮಯದಲ್ಲಿ ಅವರು ಆನಂದದಿಂದ ಮೈಮರೆಯುವರು, ಹಾಡುವರು, ಕುಣಿದು ಕುಪ್ಪಳಿಸುವರು. ಬಣ್ಣದ ಈ ಸಡಗರ ಮಧ್ಯಾಹ್ನದ ವೇಳೆಗೆ ಮುಗಿಯುತ್ತದೆ. ಅನಂತರ ಸ್ನಾನ ಮಾಡಿ ಒಳ್ಳೆಯ ಬಟ್ಟೆಗಳನ್ನು ಧರಿಸುವರು. ಹೋಳಿಯ ಸಂದರ್ಭದಲ್ಲಿ ವಿಶೇಷವಾಗಿ ಏರ್ಪಡಿಸಿದ ಕಾವ್ಯಗೋಷ್ಠಿಗಳಿಗೆ ಜನರು ಹೋಗುತ್ತಾರೆ.

ಭಗವಾನ್ ಕೃಷ್ಣನಿಗೂ ಹೋಳಿಗೂ ನಿಕಟ ಸಂಬಂಧವಿದೆ. ಮಥುರಾ ಮತ್ತು ಬೃಂದಾವನದಲ್ಲಿ ನಡೆಯುವ ಹೋಳಿ ಸಮಾರಂಭಗಳು ಸುಪ್ರಸಿದ್ಧ. ಹಾಲು ಮಾರುವ ಸ್ತ್ರೀಯರೊಡನೆ ಕೃಷ್ಣನಾಡಿದ ರಂಗಿನಾಟವನ್ನು ವರ್ಣಿಸುವ ಅನೇಕ ಹಾಡುಗಳನ್ನು ಹಾಡುವರು. ಕೃಷ್ಣನ ರಾಸಲೀಲೆಯ ಮೇಲೆ ಆಧಾರಗೊಂಡಿರುವ ಸಾಹಿತ್ಯಕೃತಿಗಳು ಲೆಕ್ಕವಿಲ್ಲದಷ್ಟಿವೆ.

ಆದರೆ ಕೆಲವು ಪ್ರದೇಶಗಳಲ್ಲಿ ಹೋಳಿ ಹಬ್ಬವನ್ನು ಆಚರಿಸುವ ವೈಖರಿ ಬಹಳ ತಮಾಷೆಯಾಗಿರುತ್ತದೆ. ಕೃಷ್ಣನ ಜನ್ಮಸ್ಥಳವಾದ ನಂದಗಾವ್‌ನಲ್ಲಿ ಮತ್ತು ರಾಧೆಯ ಸ್ಥಳವಾದ ಬರ್ಸ್‌ನಾಯ್‌ನಲ್ಲಿ ಹೆಂಗಸರು ಗಂಡಸರನ್ನು ಕೋಲಿನಿಂದ ಹೊಡೆಯುವರು. ಆದರೂ ಗಂಡಸರು ನಗು-ನಗುತ್ತಲೇ ಏಟು ತಿನ್ನಬೇಕು. ಈ ಏಟಿನಿಂದ ತಾವು ಆನಂದಿಸುತ್ತಿರುವ ಹಾಗೆ ಅವರು ನಟಿಸಬೇಕು. ರಾಜಸ್ಥಾನದ ಬಾರ್ಮೆರ್‌ನಲ್ಲಿ ಒಬ್ಬರು

ಇನ್ನೊಬ್ಬರ ಮೇಲೆ ಕಲ್ಲೆಸೆಯುವರು. ವಾರಣಾಸಿಯಲ್ಲಿನ ಮೀರಾಘಾಟ್‌ನಲ್ಲಿ ಹೋಳಿ ಹಬ್ಬವನ್ನಾಚರಿಸುವ ವೈಖರಿ ಹೀಗಿರುತ್ತದೆ-ಹೋಳಿ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಳ್ಳುವ ಉತ್ಸಾಹಿಗಳು, ಎರಡು ದಳಗಳಾಗಿ ವಿಂಗಡಗೊಂಡು ಒಂದು ದಳ ಇನ್ನೊಂದು ದಳದ ಮೇಲೆ ಮರದ ಪಟ್ಟಿಗಳನ್ನು ಎಸೆಯುವರು. ಈ ಹೋರಾಟ ವಸಂತ ಪಂಚಮಿಯಂದು ಆರಂಭವಾಗಿ ದಿನಕ್ಕೆ ಎರಡು ತಾಸು ನಡೆಯುತ್ತದೆ. ಅನಂತರ ಹೋರಾಟ ಶಾಂತಿಯುತವಾಗಿ ಮುಗಿಯುತ್ತದೆ. ಒಂದು ದಳದವರು ಇನ್ನೊಂದು ದಳದವರನ್ನು ತಬ್ಬಿಕೊಂಡು ಅವರ ಹಣೆಗೆ ಕುಂಕುಮ ಇಡುವರು. ವಾರಣಾಸಿಯಲ್ಲಿ ಹೋಳಿಯ ಮುಖ್ಯ ಕಾರ್ಯಕ್ರಮ ಶಿವನಾಥಸಿಂಗ್ ಬಹಾದುರ್ ಸಿಂಗ್ ಎಂಬಾತನ ಹೆಸರಿನ ಕುಸ್ತಿ ಅಖಾಡದಲ್ಲಿ ನಡೆಯುತ್ತಿತ್ತು. ಇಲ್ಲಿ ಕತ್ತಿ ವರಸೆಯ ನೈಪುಣ್ಯವನ್ನು ಪ್ರದರ್ಶಿಸಲಾಗುತ್ತಿತ್ತು.


ದುರ್ಗಾ ಘಾಟಿನಲ್ಲಿ ಬಾಕ್ಸಿಂಗ್ ಮತ್ತು ಕುಸ್ತಿ ಪಂದ್ಯಗಳು ನಡೆಯುತ್ತಿದ್ದವು. ಈ ಕ್ರೀಡೆಗಳು ಕೆಲವು ಅಹಿತಕರ ಘರ್ಷಣೆಗೆ ಅವಕಾಶ ಮಾಡಿಕೊಟ್ಟವು. ಅನಂತರ ಈ ಕ್ರೀಡೆಗಳನ್ನು ನಿಷೇಧಿಸಲಾಯಿತು. ಇಂದಿಗೂ ಹೋಳಿಯ ದಿನ ಜನರು ಯುದ್ಧಕ್ಕೆ ಹೋಗುವ ರೀತಿಯಲ್ಲಿ ಕತ್ತಿ, ಭರ್ಜಿ, ಲಾಠಿ ಮತ್ತಿತರ ಆಯುಧಗಳನ್ನು ಹಿಡಿದು ಮೆರವಣಿಗೆ ಹೊರಡುತ್ತಾರೆ.

ಹೋಳಿ ಹಬ್ಬದಿಂದ ಜನರಿಗೇನು ಪ್ರಯೋಜನ ?

ಹೋಳಿ ಹಬ್ಬದಂದು ನಾವು ಸಂಪ್ರದಾಯದ ಸಂಕೋಲೆಗಳಿಂದ ಹೊರಬರುತ್ತೇವೆ. ನಿಶ್ಚಿಂತೆಯಿಂದ ಇರುತ್ತೇವೆ. ನಮ್ಮ ಕಷ್ಟ-ಕಾರ್ಪಣ್ಯಗಳನ್ನು ಮರೆತು ಹಾಯಾಗಿ ಕಾಲ ಕಳೆಯುತ್ತೇವೆ.

ಹಿಂದಿ ಮೂಲ: ಎಂ.ಆರ್. ಕಪೂರ್





ನವರೋಜ್

ಪಾರ್ಸಿಗಳು ಅತ್ಯಂತ ಸಂಭ್ರಮದಿಂದ ಆಚರಿಸುವ ಹಬ್ಬ ನವರೋಜ್. ಭಾರತದಲ್ಲಿರುವ ಅಲ್ಪಸಂಖ್ಯಾತರಲ್ಲಿ ಪಾರ್ಸಿಗಳ ಸಂಪ್ರದಾಯ ತುಂಬ ಸ್ವಾರಸ್ಯಪೂರ್ಣ. ಈಗ್ಗೆ 1200 ವರ್ಷಗಳ ಹಿಂದೆ ಧಾರ್ಮಿಕ ಕಿರುಕುಳವನ್ನು ತಡೆಯಲಾರದೆ ಅವರು ಪರ್ಶಿಯಾದಿಂದ ಭಾರತಕ್ಕೆ ಬಂದರು. ಅಲ್ಲಿ ಕೊಡಲಾಗುತ್ತಿದ್ದ ಕಿರುಕುಳದಿಂದ ತಪ್ಪಿಸಿಕೊಳ್ಳಲು ಅವರು ಭಾರತಕ್ಕೆ ಬಂದು ಇಲ್ಲಿ ಆಶ್ರಯ ಕೋರಿದರು. ಮೊದಲು ಅವರು ಗುಜರಾತ್‌ನ ಕೆಲವು ಭಾಗಗಳಲ್ಲಿ ಮತ್ತು ಮುಂಬೈನಲ್ಲಿ ನೆಲೆಸಿದರು. ಅವರು ತಮ್ಮದೇ ಆದ ಜೊರಾಸ್ಟ್ರಿಯನ್ ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಆದರೂ ಅವರು ತಮ್ಮ ಹೊಸ ನಾಡಿನ ಅನೇಕ ಪದ್ಧತಿಗಳನ್ನು ತಮ್ಮ ಧರ್ಮದಲ್ಲಿ ಅಳವಡಿಸಿಕೊಂಡರು.

ನವರೋಜ್ ಹಬ್ಬವನ್ನು ಪ್ರತಿ ವರ್ಷ ಮಾರ್ಚ್ 21ರಂದು ಆಚರಿಸಲಾಗುವುದು. ಪಾರ್ಸಿಗಳ ಒಂದು ಪಂಥದವರಾದ ಫಾಸ್ಲಿಗಳು ಮಾತ್ರ ಅದನ್ನು ಪಾರ್ಸಿಗಳ ಹೊಸ ವರ್ಷದ ದಿನವೆಂದು ಪರಿಗಣಿಸುವರು. ಆದರೆ ಎಲ್ಲ ಪಂಥಗಳ ಪಾರ್ಸಿಗಳೂ ಈ ಹಬ್ಬದ

ಸಂಭ್ರಮಗಳಲ್ಲಿ ಪಾಲ್ಗೊಳ್ಳುವರು. ಒಬ್ಬರಿಗೊಬ್ಬರು ಶುಭಾಶಯ ಹೇಳುವರು. ಅಗ್ನಿದೇವರ ಗುಡಿಗಳಲ್ಲಿ ಎಲ್ಲರೂ ಸೇರಿ ಅಲ್ಲಿ ನಡೆಯುವ ವಂದನಾ ಸಮಾರಂಭದಲ್ಲಿ ಭಾಗವಹಿಸುವರು. ಮಾರ್ಚ್ 21,ವಸಂತ ಮಾಸದ ಮೊದಲ ದಿನ. ಅಂದು ಸೂರ್ಯ ವಿಷವೃತ್ತವನ್ನು ಹಾದು ಹೋಗುವನು. ಆದ್ದರಿಂದ ಇನ್ನೊಂದು ಹೊಸ ವರ್ಷದ ದಿನವನ್ನು ಆಚರಿಸುವುದು ಸಮಂಜಸವೆಂದು ಅವರು ಭಾವಿಸುವರು. ಈ ಸಮಯದಲ್ಲಿ ಅಶೋಕ ಮತ್ತು ಮಾವಿನ ಮರಗಳಲ್ಲಿ ಹೂಗಳು ಕಾಣಿಸಿಕೊಳ್ಳುತ್ತವೆ. ಗಿಡಮರಗಳಲ್ಲಿ ಹೊಸ ಎಲೆಗಳು ಚಿಗುರೊಡೆಯುತ್ತವೆ. ಪ್ರಕೃತಿ ಹೊಚ್ಚ ಹೊಸತನದಿಂದ ರಮ್ಯವಾಗಿ ಕಂಗೊಳಿಸುತ್ತದೆ.

ಈ ಹಬ್ಬ ಹೇಗೆ ಆರಂಭವಾಯಿತು ಎನ್ನುವುದು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಇದನ್ನು ಪರ್ಶಿಯಾದಲ್ಲಿ ಅಯ್-ದಿ-ನೌ-ರುಜ್ ಎಂದು ಕರೆಯಲಾಗುತ್ತಿತ್ತು. ಈ ಹಬ್ಬವು. ಕ್ರಿ.ಪೂ. ಆರನೇ ಶತಮಾನಕ್ಕೂ ಹಿಂದೆಯೇ ಆಚರಣೆಯಲ್ಲಿತ್ತೆಂಬುದು ಅಖೇಮೆನಿಯಾದ ದೊರೆಗಳ ಪಾಳುಬಿದ್ದ ಪರ್ಸಿಪೊಲಿಸ್ ಅರಮನೆಗಳ ಅವಶೇಷಗಳಿಂದ ತಿಳಿದುಬರುತ್ತದೆ.

ಆ ಕಾಲದಲ್ಲಿ ಸೈರಸ್ ಮತ್ತು ಡೇರಿಯಸ್ ಪರ್ಶಿಯಾ ಸಾಮ್ರಾಜ್ಯವನ್ನು ಆಳುತ್ತಿದ್ದರು. ಜೆಮ್‌ಷೆಡ್ ದೊರೆಯ ಕಾಲದಲ್ಲೇ ಈ ಹಬ್ಬವನ್ನು ಆಚರಿಸಲಾಗುತ್ತಿತ್ತೆಂದು ಫಿರ್ದೌಸಿ ಕವಿ ತನ್ನ 'ಷಾ ನಾಮೆ'ಯಲ್ಲಿ ಬರೆದಿದ್ದಾನೆ. ವಸಂತ ಕಾಲದ ಆರಂಭದ ದಿನ ದೊರೆ ಜೆಮ್‌ಷೆಡ್ ಸಿಂಹಾಸನವನ್ನೇರುತ್ತಿದ್ದ. ಪ್ರಕೃತಿಗೆ ಹೊಸ ಕಳೆ ಬಂದ ಸಂಭ್ರಮ ಮತ್ತು ತನ್ನ ವೈಭೋಗ ಎರಡನ್ನೂ ಆಚರಿಸುವುದಕ್ಕಾಗಿ, ದೊರೆ ತನ್ನ ಆಸ್ಥಾನಿಕರ ಸಮೂಹದ ಮುಂದೆ ಸಿಂಹಾಸನದಲ್ಲಿ ಕುಳಿತುಕೊಳ್ಳುತ್ತಿದ್ದ. ಪಾರ್ಸಿಗಳು ಈ ಹಬ್ಬವನ್ನು ಜೆಮ್‌ಷೆಡ್ ಜಿ ನವರೋಜ್ ಎಂದೇ ಕರೆಯುವರು.

ಈ ಹಬ್ಬದಲ್ಲಿ ಪಾರ್ಸಿ ಮಕ್ಕಳು ತುಂಬ ಮುಖ್ಯ ಪಾತ್ರ ವಹಿಸುವರು.

ನವರೋಜ್ ಹಬ್ಬಕ್ಕೆ ತಯಾರಿ ನಡೆಸುವುದೆಂದರೆ ಚಿಕ್ಕಂದಿನಲ್ಲಿ ನಮಗೆ ತುಂಬ ಉತ್ಸಾಹ. ಮನೆಯನ್ನು ಸ್ವಚ್ಛಗೊಳಿಸುವುದು, ಧೂಳು ಹೊಡೆಯುವುದು, ಜೇಡದ ಬಲೆಗಳನ್ನು ತೆಗೆಯುವುದು, ಕಿಟಕಿ ಮತ್ತು ಬಾಗಿಲುಗಳಿಗೆ ಬಣ್ಣ ಹಚ್ಚುವುದು, ಪೀಠೋಪಕರಣಗಳಿಗೆ ಮೆರುಗು ಕೊಡುವುದು ಮುಂತಾದ ಕೆಲಸಗಳಲ್ಲಿ ನಾವು ದೊಡ್ಡವರಿಗೆ ತುಂಬ ಸಹಾಯ ಮಾಡುತ್ತಿದ್ದೆವು. ಪ್ರತಿಯೊಂದು ಪದಾರ್ಥವೂ ಮಿರುಗುಟ್ಟುತ್ತಿರಬೇಕೆಂಬುದೇ ನಮ್ಮ ಆಕಾಂಕ್ಷೆಯಾಗಿತ್ತು. ಮನೆ-ಮಂದಿಯೆಲ್ಲಾ ಹೊಸ

ಬಟ್ಟೆಗಳನ್ನು ಹೊಲಿಸಿಕೊಳ್ಳುತ್ತಿದ್ದೆವು. ಹೆಂಗಸರು ಕಸೂತಿ ಮಾಡಿದ ಸೀರೆಗಳನ್ನು ಕೊಳ್ಳುತ್ತಿದ್ದರು. ಮಕ್ಕಳು ಸೂಟ್‌ಗಳನ್ನು ಹೊಲಿಸಿಕೊಳ್ಳುತ್ತಿದ್ದರು.

ಪಾರ್ಸಿಗಳು ಮಾಂಸಾಹಾರಿಗಳು. ನವರೋಜ್‌ಗೆ ಕೆಲವು ದಿನಗಳಿಗೆ ಮೊದಲೇ ನಮ್ಮ ತಾಯಿ ಪೇಟೆಗೆ ಹೋಗಿ, ಕೋಳಿ, ಮೀನು, ಸಾಂಬಾರ ಪದಾರ್ಥಗಳು, ದ್ರಾಕ್ಷಿ, ಬಾದಾಮಿ, ಗೋಡಂಬಿ ಮುಂತಾದ ಫಲಗಳಿಗೆ ಹೇಳಿಬರುತ್ತಿದ್ದರು. ಹೂವಿನ ಅಂಗಡಿಗಳಿಗೆ ಹೋಗಿ ಮಲ್ಲಿಗೆ ಮತ್ತು ಗುಲಾಬಿ ಹಾರಗಳಿಗಾಗಿ ಹೇಳಿಬರುತ್ತಿದ್ದರು. ಈ ಹಬ್ಬದಲ್ಲಿ ಪ್ರತಿ ಕಿಟಕಿಗೆ ಮತ್ತು ಬಾಗಿಲಿಗೆ ಹೂ ಹಾರಗಳನ್ನು ಹಾಕಿ ಅಲಂಕರಿಸುತ್ತಿದ್ದೆವು.

ನವರೋಜ್ ದಿನ ಪ್ರತಿಯೊಬ್ಬರು ಮುಂಜಾನೆ ಏಳುವರು. ಸ್ನಾನ ಮಾಡಿ, ಹೊಸ ಬಟ್ಟೆಗಳನ್ನು ಧರಿಸುವರು. ಮನೆಯನ್ನು ಚೆನ್ನಾಗಿ ಗುಡಿಸಿ, ತೊಳೆಯುತ್ತಿದ್ದೆವು. ನಾವು ಮಕ್ಕಳೇ ಮೆಟ್ಟಿಲುಗಳ ಮತ್ತು ಹೊಸ್ತಿಲುಗಳ ಮೇಲೆ ರಂಗೋಲಿಯನ್ನು ಹೋಲುವಂತಹ ಚಿತ್ರಗಳನ್ನು ಬಿಡಿಸುತ್ತಿದ್ದೆವು. ಆದರೆ ಈ ಚಿತ್ರಗಳನ್ನು ನಾವು ಕೈಯಿಂದ ಬರೆಯುತ್ತಿರಲಿಲ್ಲ. ವಿವಿಧ ವಿನ್ಯಾಸಗಳನ್ನು ಮತ್ತು ಮೀನು, ಪಕ್ಷಿಗಳು, ನವಿಲು, ಚಿಟ್ಟೆ, ನಕ್ಷತ್ರ ಮುಂತಾದ ಆಕೃತಿಗಳನ್ನು ಮೂಡಿಸಲು ರಂಧ್ರಗಳಿರುವ ಬಿಲ್ಲೆಗಳಿರುತ್ತಿದ್ದವು. ಇವಕ್ಕೆ ಸುಣ್ಣದ ಪುಡಿ ಮತ್ತು ಬಣ್ಣದ ಪುಡಿಗಳನ್ನು ತುಂಬಿಸಿ, ಚಿತ್ರಗಳನ್ನು ಮೂಡಿಸುತ್ತಿದ್ದೆವು. ಪುಡಿಗಳನ್ನು ತುಂಬಾ ಎಚ್ಚರಿಕೆಯಿಂದ ತುಂಬಬೇಕಾಗುತ್ತಿತ್ತು. ಹೆಚ್ಚಾದರೆ ಕೆಳಗೆ ಹರಡಿಕೊಳ್ಳುತ್ತಿತ್ತು. ಕಡಿಮೆಯಾದರೆ ಚಿತ್ರವೇ ಮೂಡುತ್ತಿರಲಿಲ್ಲ. ಈ ಚಿತ್ರಗಳ ಮಧ್ಯೆ ಖಾಲಿ ಜಾಗದಲ್ಲಿ ಬಣ್ಣಗಳನ್ನು ತುಂಬಿಸಿ ಮೀನಿನ ಕಣ್ಣು ಅಥವಾ ಚಿಟ್ಟೆಯ ರೆಕ್ಕಗಳು ಎದ್ದು ಕಾಣುವಂತೆ ಮಾಡುತ್ತಿದ್ದೆವು.

ಇಷ್ಟು ಶೃಂಗಾರವಾಗುವ ಹೊತ್ತಿಗೆ ಬಿಡಿ ಹೂಗಳು ಮತ್ತು ಗುಲಾಬಿ ಹಾಗೂ ಮಲ್ಲಿಗೆ ಹಾರಗಳು ಬರುತ್ತಿದ್ದವು. ಸುಗಂಧ ಭರಿತ ಹಾಗೂ ಜರತಾರಿಗಳಿಂದ ತುಂಬಿದ ಈ ಹಾರಗಳನ್ನು ಬಾಗಿಲುಗಳ ಮೇಲೆ ತೂಗು ಹಾಕುತ್ತಿದ್ದೆವು. ದೊಡ್ಡವರು ಇದಕ್ಕಾಗಿ ಮೊಳೆಗಳನ್ನು ಹೊಡೆಯುತ್ತಿದ್ದರು. ಎಲ್ಲ ಹೂದಾನಿಗಳಲ್ಲಿ ಹಾಗೂ ನೀರಿನ ಜಾಡಿಗಳಲ್ಲಿ ಹೂಗಳನ್ನು ತುಂಬಿಸುತ್ತಿದ್ದೆವು. ಸ್ವಲ್ಪ ಗಾಳಿ ಬೀಸಿದರೂ ಮನೆಯೆಲ್ಲಾ ಗಮಗಮನಿಸುತ್ತಿತ್ತು. ವಸಂತನ ಆಗಮನವನ್ನು ಸಾರುತ್ತಿತ್ತು.

ಯಾವುದೇ ಹಬ್ಬದಲ್ಲಾಗಲೀ ಪಾರ್ಸಿಗಳು ಭೋಜನಕ್ಕೆ ಪ್ರಾಧಾನ್ಯ ಕೊಡುವರು. ಅವರ ಆಹಾರದಲ್ಲಿ ಪಶ್ಚಿಮ ಏಷ್ಯಾ ಮತ್ತು ಭಾರತೀಯ ಪಾಕ ವಿಧಾನಗಳು ಸಮ್ಮಿಳಿತಗೊಂಡಿರುತ್ತವೆ. ಯಾವುದೇ ಹಬ್ಬದಲ್ಲಾಗಲೀ ಬೆಳಗಿನ ಉಪಾಹಾರಕ್ಕಾಗಿ ನಮ್ಮ



ತಾಯಿ ಎರಡು ಬಗೆಯ ತಿಂಡಿಗಳನ್ನು ತಪ್ಪದೇ ಮಾಡುತ್ತಿದ್ದರು. ಇವುಗಳಲ್ಲಿ ಒಂದನ್ನು ರವೆ, ಹಾಲು ಮತ್ತು ಸಕ್ಕರೆ ಸೇರಿಸಿ ಮಾಡುತ್ತಿದ್ದರು. ಇದಕ್ಕೆ "ರವಾ" ಎಂದು ಹೆಸರು. ಇದರ ಮೇಲೆ ಗುಲಾಬಿ ನೀರನ್ನು ಚಿಮುಕಿಸಿ, ಜಾಕಾಯಿ ಮುಂತಾದ ಸಾಂಬಾರ ಪದಾರ್ಥಗಳನ್ನು ಸೇರಿಸಲಾಗುತ್ತಿತ್ತು. ಅನಂತರ ಸುಂದರವಾದ ಗಾಜಿನ ಪಾತ್ರೆಗೆ ಸುರಿದು, ಅದರ ಮೇಲೆ ಹುರಿದ ಬಾದಾಮಿಯನ್ನು ಹರವಲಾಗುತ್ತಿತ್ತು. ಇನ್ನೊಂದು ಸೇವಿಗೆಯಿಂದ ಮಾಡಿದ ಪದಾರ್ಥ. ಸೇವಿಗೆಯನ್ನು ಹುರಿದು ಅದನ್ನು ಸಕ್ಕರೆ ಪಾಕಕ್ಕೆ ಸೇರಿಸಿ, ಅದರ ಮೇಲೆ ಬಾದಾಮಿ ಮತ್ತು ದ್ರಾಕ್ಷಿಯನ್ನು ಹರಡಲಾಗುತ್ತಿತ್ತು.

ಬೆಳಿಗ್ಗೆ ತಿಂಡಿ ತಿಂದ ಬಳಿಕ ಮನೆಯವರೆಲ್ಲ ಹತ್ತಿರದ ಅಗ್ನಿದೇವರ ಗುಡಿಗೆ ಹೋಗುವರು. ಅಲ್ಲಿ ಪೂಜಾರಿಗಳು ವಂದನಾ ಪ್ರಾರ್ಥನೆ ನಡೆಸುವರು. ಪ್ರತಿಯೊಬ್ಬರು

ಹೊಸ ಬಟ್ಟೆಯನ್ನು ಧರಿಸುವರು. ಕುಟುಂಬದ ಪ್ರತಿಯೊಬ್ಬ ಸದಸ್ಯರೂ ಅಗ್ನಿದೇವರಿಗೆ ಗಂಧದ ಕಡ್ಡಿ ಹಚ್ಚುವರು. ಪ್ರಾರ್ಥಿಸುವಾಗ ಅಥವಾ ದೇವಾಲಯದಲ್ಲಿರುವಾಗ ಪಾರ್ಸಿಗಳು ತಲೆಯ ಮೇಲೆ ಬಟ್ಟೆ ಅಥವಾ ಟೋಪಿ ಹಾಕಿಕೊಳ್ಳುವರು. ಮಕ್ಕಳು ಜರತಾರಿ ಟೋಪಿ ಧರಿಸುವರು. ಹೆಂಗಸರು ತಲೆಯ ಮೇಲೆ ಸೆರಗು ಹಾಕಿಕೊಳ್ಳುವರು. ಪ್ರಾರ್ಥನೆಯ ಬಳಿಕ ಒಬ್ಬರನ್ನೊಬ್ಬರು ಆಲಂಗಿಸಿ ಹೊಸ ವರ್ಷದ ಶುಭಾಶಯ ಹೇಳುವರು.

ಇಡೀ ದಿನ ಮನೆಗೆ ಒಬ್ಬರಾದ ನಂತರ ಮತ್ತೊಬ್ಬರು ಗೆಳೆಯರು ಬರುತ್ತಲೇ ಇರುತ್ತಾರೆ. ಪ್ರತಿಯೊಬ್ಬರಿಗೂ ಕುಡಿಯಲು ಶಾವಿಗೆ ಹಾಲು ಕೊಡಲಾಗುತ್ತದೆ. ಇದಕ್ಕೆ ಫಲೂಡ ಎಂದು ಹೆಸರು. ಶಾವಿಗೆ ಹಾಲಿಗೆ ಗುಲಾಬಿ ಸ್ವಾದವನ್ನು ಸೇರಿಸಿ ಅದನ್ನು ತಣ್ಣಗೆ ಮಾಡಿ ಕೊಡಲಾಗುವುದು. ಎಲ್ಲ ಪಾರ್ಸಿ ಮನೆಗಳಲ್ಲಿ ಬೆಳ್ಳಿ ತಟ್ಟೆಯೊಂದರಲ್ಲಿ ಗುಲಾಬಿ ದಳ, ತೆಂಗಿನ ಕಾಯಿ ತಿಲಕವಿಡಲು ಕುಂಕುಮ ಹಾಗೂ ಅಕ್ಕಿಯನ್ನು ಇಡಲಾಗುವುದು. ಮನೆಗೆ ಬರುವ ಪ್ರತಿಯೊಬ್ಬ ಅತಿಥಿಯ ಮೇಲೆ ಪನ್ನೀರು ದಾನಿಯಿಂದ ಪನ್ನೀರು ಹಾಕಲಾಗುವುದು. ಅತಿಥಿಗಳ ಓಡಾಟದ ಗಡಿಬಿಡಿಯಲ್ಲಿ ಮೆಟ್ಟಿಲು ಮತ್ತು ಹೊಸ್ತಿಲ ಮೇಲೆ ಬರೆದ ಚಿತ್ರಗಳು ಮಾಸಿರುತ್ತವೆ. ಸಂಭ್ರಮದ ಭರದಲ್ಲಿ ಯಾರಿಗೂ ಅದರ ಕಡೆ ಗಮನವೇ ಇರುವುದಿಲ್ಲ.

ಮಧ್ಯಾಹ್ನದ ಊಟಕ್ಕೆ ಕೇಸರಿ ಬಾತ್, ಬಾಳೆಲೆಯ ಮೇಲೆ ಬೇಯಿಸಿದ ಮೀನು, ಸಿಹಿ ಮತ್ತು ಹುಳಿಗೊಜ್ಜು, ಕೋಳಿ ಪಲ್ಯ, ಸಾದಾ ಅನ್ನ ಹಾಗೂ ಹೆಸರುಬೇಳೆ ತೊವ್ವೆ-ಈ ಪದಾರ್ಥಗಳಿರುತ್ತವೆ. ಹೆಸರುಬೇಳೆ ತೊವ್ವೆ ಮತ್ತು ಅನ್ನವನ್ನು ಅಂದು ಬಹಳ ಶುಭವೆಂದು ಪರಿಗಣಿಸಲಾಗುವುದು. ಈ ಹಬ್ಬವನ್ನು ಸಂಭ್ರಮದಿಂದ ಆಚರಿಸುವ ಸಾಮರ್ಥ್ಯವಿಲ್ಲದ ಬಡ ಜನರಿಗೆ ಅಂದು ಉಣಬಡಿಸಲಾಗುವುದು. ಬಡ ಪಾರ್ಸಿ ಕುಟುಂಬಗಳಿಗೆ ಬಟ್ಟೆ ಮತ್ತು ಆಹಾರ ಹಂಚುವ ಕಾರ್ಯದಲ್ಲಿ ಮಕ್ಕಳು ಸಹ ಪಾಲ್ಗೊಳ್ಳುವರು. ಹೀಗೆ ಚಿಕ್ಕಂದಿನಲ್ಲೇ ಮಕ್ಕಳಿಗೆ ದಾನದ ಬುದ್ಧಿ ಬರುತ್ತದೆ.

ಹಿಂದಿನ ಕಾಲದಲ್ಲಿ ನವರೋಜ್ ಹಬ್ಬ ಪರ್ಶಿಯಾದಲ್ಲಿ ಹೊಸ ವರ್ಷದ ಹಿಂದಿನ ದಿನದಿಂದ ಆರಂಭವಾಗಿ 14 ದಿನಗಳ ಕಾಲ ನಡೆಯುತ್ತಿತ್ತು. ನವರೋಜ್‌ನ ಬೆಳಿಗ್ಗೆ ಒಂದು ಮೇಜಿನ ಮೇಲೆ ಬಿಳಿ ವಸ್ತ್ರವನ್ನು ಹೊದೆಸಿ, 'ಸ'ಕಾರದಿಂದ ಆರಂಭವಾಗುವ ಏಳು ಪದಾರ್ಥಗಳನ್ನು ಅದರ ಮೇಲಿಡಲಾಗುತ್ತಿತ್ತು. ಅವು ಸಿಬ್ (ಸೇಬು), ಸಬ್‌ಜಿ (ತರಕಾರಿ), ಸೀರ್ (ಬೆಳ್ಳುಳ್ಳಿ), ಸಂಬಾರ್ (ಕಂದ-ಮೂಲಗಳು), ಸರ್‌ತಿ (ವಿನೆಗರ್),

ಸಮುಖ್ ಮತ್ತು ಸಮ್‌ನೂಲ್ (ಸ್ವಾದಕ್ಕಾಗಿ ಇರಾನ್‌ನಲ್ಲಿ ಉಪಯೋಗಿಸುವ ಎರಡು ಮೂಲಿಕೆಗಳು). ಸ್ವಚ್ಛ ನೀರಿನಲ್ಲಿ ಈಜಾಡುತ್ತಿರುವ ಮೀನುಗಳನ್ನು ಒಳಗೊಂಡ ಒಂದು ಬೋಗುಣಿಯನ್ನು ಸಹ ಮೇಜಿನ ಮೇಲೆ ಇಡಲಾಗುತ್ತಿತ್ತು. ಇದಲ್ಲದೇ ಮನೆಯಲ್ಲಿರುವ ಪ್ರತಿಯೊಬ್ಬರಿಗೂ ಒಂದೊಂದು ಕನ್ನಡಿ ಮತ್ತು ಮೊಂಬತ್ತಿಯನ್ನು ಅದರ ಮೇಲೆ ಇಡಲಾಗುತ್ತಿತ್ತು. ಫಿರಂಗಿ ಶಬ್ದ ಹೊಸ ವರ್ಷದ ಆಗಮನವನ್ನು ಸಾರುತ್ತಿತ್ತು. ಆ ಸಮಯಕ್ಕೆ ಸರಿಯಾಗಿ ಆಳುಗಳು ಸೇರಿ ಮನೆಮಂದಿಯೆಲ್ಲ ಮೇಜಿನ ಸುತ್ತ ನಿಂತು ಒಬ್ಬರು ಮತ್ತೊಬ್ಬರಿಗೆ ಹೊಸ ವರ್ಷದ ಶುಭಾಶಯಗಳನ್ನು ಹೇಳುತ್ತಿದ್ದರು. ಅನಂತರ ಮೊಂಬತ್ತಿಗಳನ್ನು ಹಚ್ಚಲಾಗುತ್ತಿತ್ತು.

ಗಾಳಿಯಿಂದ ಈ ಮೊಂಬತ್ತಿಗಳು ಆರದಂತೆ ತುಂಬ ಎಚ್ಚರಿಕೆ ವಹಿಸಬೇಕಾಗುತ್ತಿತ್ತು. ಹೀಗೆ ಮೊಂಬತ್ತಿ ಆರಿಹೋದರೆ ಬರಲಿರುವ ಕೇಡಿನ ಮುನ್ಸೂಚನೆ ಎಂದು ಭಾವಿಸಲಾಗುತ್ತಿತ್ತು. ಎಲ್ಲರಿಗೂ ಸಿಹಿ ಹಂಚಿ ಹೊಳೆಯುವ ಹಿತ್ತಾಳೆ ಬಟ್ಟಲುಗಳಲ್ಲಿ ಚಹ ಕೊಡಲಾಗುತ್ತಿತ್ತು.

ವಿವಿಧ ಆಕೃತಿಯ ಮಣ್ಣಿನ ಪಾತ್ರೆಗಳಲ್ಲಿ ಗೋಧಿಯ ಪೈರನ್ನು ಬೆಳೆಸುವುದು ಮತ್ತೊಂದು ವಿಧಿ. ಈ ಪಾತ್ರೆಗಳನ್ನು ನೀರಿನಲ್ಲಿ ನೆನೆಸಿ ಅನಂತರ ಅದಕ್ಕೆ ಗೋಧಿ ಕಾಳುಗಳನ್ನು ಹಾಕಲಾಗುತ್ತಿತ್ತು. ಹೊಸ ವರ್ಷದ ಹಿಂದಿನ ದಿನದವರೆಗೂ ಅದಕ್ಕೆ ನೀರೆರೆದು ಪೋಷಿಸಲಾಗುತ್ತಿತ್ತು. ಅಷ್ಟು ಹೊತ್ತಿಗೆ ಈ ಪೈರುಗಳು ಮಣ್ಣಿನ ಪಾತ್ರೆಯ ಬಾಯಿಯಿಂದ ಸುಮಾರು ಏಳು ಅಂಗುಲದಷ್ಟು ಮೇಲೆ ಬಂದಿರುತ್ತಿದ್ದವು. ಅನಂತರ ಆ ಪೈರುಗಳನ್ನು ಒಂದೇ ಮಟ್ಟಕ್ಕೆ ಕತ್ತರಿಸಿ, ಮೇಜು, ಕಿಟಕಿ ಕಟ್ಟೆಗಳು ಮತ್ತು ಕಪಾಟುಗಳಲ್ಲಿ ಇಡಲಾಗುತ್ತಿತ್ತು. ಹೊಸ ಜೀವನದ ಮತ್ತು ಏಳಿಗೆಯ ಸಂಕೇತವಾಗಿ ಮನೆಯಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಪಾತ್ರೆಯನ್ನು ಕೊಡಲಾಗುತ್ತಿತ್ತು. ನವ್‌ರೋಜ್ ಆದ ಹದಿಮೂರನೇ ದಿನ ಜನರು ಪೈರುಗಳಿಂದ ಕೂಡಿದ ಈ ಮಣ್ಣಿನ ಪಾತ್ರೆಗಳನ್ನು ಹಿಡಿದು ತಮ್ಮ ಮನೆಯಿಂದ ಗುಂಪು-ಗುಂಪಾಗಿ ಹೊರ ಬರುತ್ತಿದ್ದರು. ಊರ ಹೊರಗಿನ ನದಿ ಅಥವಾ ತೊರೆಗೆ ಹೋಗಿ, ಈ ಪೈರಿನ ಪಾತ್ರೆಗಳನ್ನು ನೀರಿನಲ್ಲಿ ಬಿಡುತ್ತಿದ್ದರು. ನೀರು ಮತ್ತು ಸಸ್ಯ ದುರ್ಲಭವಾಗಿದ್ದ ನಾಡಿನಲ್ಲಿ ನೀರಿಗೆ ಮತ್ತು ಸಸ್ಯಗಳಿಗೆ ಅವರು ಈ ರೀತಿಯಲ್ಲಿ ಗೌರವ ತೋರಿಸುತ್ತಿದ್ದರು. ಅನಂತರ ಕುಟುಂಬಗಳು ಈ ನದಿಯ ಪಕ್ಕದ ಪ್ರದೇಶಕ್ಕೆ ವಿಹಾರಕ್ಕಾಗಿ ಹೋಗಿ, ಇಡೀ ದಿನ ಅಲ್ಲಿ ಸಂತೋಷದಿಂದ ಕಾಲ ಕಳೆಯುತ್ತಿದ್ದವು. ಆದರೆ ಭಾರತದಲ್ಲಿ ಪಾರ್ಸಿಗಳು ಈ ಪದ್ಧತಿಯನ್ನು


ಅನುಸರಿಸುವುದಿಲ್ಲ. ಏಕೆಂದರೆ, ವಸಂತಕಾಲ ಬರುತ್ತಿದ್ದಂತೆಯೇ ಎಲ್ಲೆಲ್ಲೂ ಗಿಡಮರಗಳು ಚಿಗುರಿ, ಸಸ್ಯ ಸಂಪತ್ತು ಎದ್ದು ಕಾಣುತ್ತದೆ. ಭಾರತದ ಪಾರ್ಸಿಗಳು ಈಗ ಹಳೇ ಪದ್ಧತಿಗೆ ಬದಲಾಗಿ ಸಮಂಜಸವಾದ ಹೊಸ ಸಂಪ್ರದಾಯಗಳನ್ನು ರೂಢಿಯಲ್ಲಿಟ್ಟುಕೊಂಡಿದ್ದಾರೆ.

ಹಬ್ಬದ ವಿಧಿಗಳು ಶುಭಾಶಯಗಳನ್ನು ಹೇಳುವುದು, ಸಿಹಿ ತಿಂಡಿಗಳನ್ನು ಹಂಚುವುದು ಹಾಗೂ ಮನೆಯನ್ನು ಸ್ವಚ್ಛಗೊಳಿಸುವುದು - ಇವು ಭಾರತದ ಎಲ್ಲ ಹಬ್ಬ ಹರಿದಿನಗಳಲ್ಲೂ ಕಂಡುಬರುತ್ತವೆ. ಎಲ್ಲ ಸಾಮಾಜಿಕ ಹಾಗೂ ವರ್ಗ ಭೇದಗಳನ್ನು ಮರೆತು ಎಲ್ಲ ಜನರೂ ಸರಿಸಮಾನ ಭಾವನೆಯಿಂದ ಈ ಹಬ್ಬಗಳಲ್ಲಿ ಪಾಲ್ಗೊಳ್ಳುತ್ತಾರೆಂಬುದು ಮುಖ್ಯವಾಗಿ ಗಮನಿಸಬೇಕಾದ ಅಂಶ.

ಭಾರತದಂತಹ ವಿಶಾಲ ಮತ್ತು ವೈವಿಧ್ಯಮಯ ರಾಷ್ಟ್ರವೊಂದರಲ್ಲಿ ಈ ಹಬ್ಬಗಳು ಎಲ್ಲೆಲ್ಲೂ ಭಾರತೀಯರನ್ನು ಒಗ್ಗೂಡಿಸುತ್ತವೆ. ಎಲ್ಲರೂ ಕೂಡಿ ಹಬ್ಬಗಳನ್ನು ಸಂತೋಷ ಮತ್ತು ಸೌಹಾರ್ದ ಭಾವನೆಗಳಿಂದ ಆಚರಿಸುವರು.

ನರ್ಗಿಸ್ ದಲಾಲ್

Printed at : Salasar Imaging Systems, Noida



nbt.india
एकः सूते सकलम्

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

₹ 100.00
ISBN 812370824-6
9788123708249
21221775
Festival of India
(Kannada)